ಐಕ್ಯರಂಗ

ಸಂಪುಟ 15
ಸಂಚಿಕೆ 31
ರೂ. 2.00

8 ಆಗಸ್ಟ್ 1993

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಇಂಥಾ ಪ್ರಧಾನಿ ದೇಶಕ್ಕೆ ಎಂದೂ ಒದಗ ಬಾರದಿತ್ತು

-- ಕಾಂ. ಜಿ.ಎನ್. ನಾಗರಾಜ್

ಇಂತಹ ಪರಿಸ್ಥಿತಿ ಸ್ವತಂತ್ರ ಭಾರತದ ಯಾವ ಪ್ರಧಾನಿಗೂ ಒದಗಿರಲಿಲ್ಲ. ಯಾವ ಪ್ರಧಾನಿಯ ಗೌರವವೂ, ನೈತಿಕ ಮಟ್ಟವೂ ಇಷ್ಟು ಕೀಳುಮಟ್ಟಕ್ಕಿಳಿದಿರಲಿಲ್ಲ. ಲೋಕಸಭಾ ಸದಸ್ಯರಲ್ಲಿ ಅಲ್ಪಸಂಖ್ಯಾತ ಬೆಂಬಲದ ಮೇಲೆ ಸರ್ಕಾರ ರಚಿಸಿದ ಈ ಪ್ರಧಾನಿ ದೇಶದ ಜನರೂ, ಲೋಕಸಭೆಯಲ್ಲಿರುವ ಪಕ್ಷಗಳೂ ತನ್ನ ಪರವಿಲ್ಲವೆಂದು ಕಣ್ಣಿಗೇ ಬಡಿದಂತೆ ಕಂಡಾಗ ಮಾಡಬೇಕಾದ ಮೊದಲ ಕೆಲಸ ತನ್ನ ನೀತಿಗಳಿಂದ ಇತರ ಪಕ್ಷಗಳನ್ನೂ ಒಲಿಸಿಕೊಳ್ಳುವುದು ದೇಶದ ಜನರ ನಡುವೆ ತನ್ನ ಬೆಂಬಲ ವಿಸ್ತಾರವಾಗುವಂತೆ ಪ್ರಯತ್ನಿಸುವುದು.

ಆದರೆ ಈ ಪ್ರಧಾನಿಯದು ತದ್ವಿರುದ್ಧ ಜನರಂತೂ ದೂರ ಮತ್ತಷ್ಟು ದೂರ. ಆಳುವುದಕ್ಕೆ ತನಗೆ ಯಾವ ಅರ್ಹತೆಯೂ ಇಲ್ಲ ಎಂದು ದಿನದಿನವೂ ತೋರಿಸಿಕೊಳ್ಳುತ್ತಿರುವ ಈ ಪ್ರಧಾನಿಗೆ ಆರಂಭದಲ್ಲಿ ಜೊತೆಯಾಗಿ ನಿಂತವರು ಯಾರೂ ಇಂದು ಉಳಿದಿಲ್ಲ. ಅಣ್ಣಾ ಡಿಎಂಕೆಯದು ಇದಕ್ಕೆ ಪ್ರಬಲ ಉದಾಹರಣೆ. ಮುಸ್ಲಿಂ ಲೀಗಿನ ಪರಿಯಂತೂ ಬೇರೆ. ಇರುವ ಇಬ್ಬರು ಸದಸ್ಯರಲ್ಲಿ ಒಬ್ಬ ವಿರುದ್ಧ, ಇನ್ನೊಬ್ಬ ತಟಸ್ಥ- ಬೆಂಬಲವಂತೂ ಇಲ್ಲ, ಇದು ನೆಚ್ಚಿನ ಮಿತ್ರರ ಕಥೆ. ಇನ್ನು ಮಧ್ಯೆ ಪಡಕೊಂಡ ಮಿತ್ರರೋ! ವಿರೋಧ ಪಕ್ಷಗಳನ್ನು -ಜನತಾದಳ, ತೆಲುಗು ದೇಶಂ ಪಕ್ಷಗಳನ್ನೂ ಹಣ ಚೆಲ್ಲಿ ಒಡೆದು ತನ್ನೆಡೆಗೆ ಸೆಳೆದುಕೊಂಡವರೂ ಇಂದು ಈ ಪ್ರಧಾನಿ ಜತೆಯಿಲ್ಲ. ಅಜಿತ್‌ಸಿಂಗ್ ಮತ್ತವರ ಬಣದಿಂದ ಈ ರಾವ್ ಭ್ರಷ್ಟಾಚಾರದ ಆಪಾದನೆಗಳಿಂದ ಮುಕ್ತನಾಗುವವರೆಗೂ ನಾವು ಬೆಂಬಲ ಕೊಡಲು ಸಾಧ್ಯವಿಲ್ಲ ಎಂಬ ಘೋಷಣೆ. ಇನ್ನು ಅವರ ಪಕ್ಷದ ಮಾತಂತೂ ಕೇಳಲೇ ಬೇಕಿಲ್ಲ. ಡಿ. 6ರ ನಂತರ ದಿನದಿನಕ್ಕೂ ಹೆಚ್ಚು ಹೆಚ್ಚು ಜನ ಇವರನ್ನು ಎಂದು ತೊಲಗಿಸೇವೋ ಎಂದು ತಹತಹಿಸುತ್ತಿರುವವರು. ಸ್ವತಂತ್ರ ಭಾರತದಲ್ಲಿಯೇ ಅತ್ಯಂತ ಕನಿಷ್ಠ ಬೆಂಬಲ ಪಡೆದ ಅತ್ಯಂತ ಹೆಚ್ಚು ಜನರಿಂದ ಛಿ! ಥೂ!! ಎನಿಸಿಕೊಂಡ ಪ್ರಧಾನಿ ಇನ್ನಿಲ್ಲ.

ಇಂತಹ ಪ್ರಧಾನಿ -ಅಧಿಕಾರಕ್ಕೆಬಂದಿನ್ನೂ ಎರಡು ವರ್ಷವಾಗಿಲ್ಲ. ಆಗಲೇ ಮೂರು ಅವಿಶ್ವಾಸದ ಮಾತನ್ನು ಕೇಳಬೇಕಾಗಿ ಬಂದ ಪ್ರಧಾನಿಯೂ ಮೂರನೇ ಬಾರಿ 14 ಮತಗಳ ಅಂತರದಿಂದ ಗೆದ್ದೇ ಬಿಟ್ಟರು. ಕೊನೆಯಕ್ಷಣದವರೆಗೂ ಏನಾಗಬಹುದೆಂಬುದು ಯಾರಿಗೂ ತಿಳಿದಿರಲಿಲ್ಲ. ಸ್ವತಃ ಪ್ರಧಾನಿಗೂ ಈ ಅವಿಶ್ವಾಸ ನಿರ್ಣಯದ ಪ್ರಸಂಗವನ್ನು ಹೇಗಾದರೂ ಮಾಡಿ ದಾಟಬಹುದೆಂಬ ಆಶಾಭಾವನೆ ಇರಲಿಲ್ಲ. ಒಂದು ಕಡೆ ರಾವ್‌ನ ನೆಚ್ಚಿನ ಭಂಟರು ಒಮ್ಮೆ ಜನತಾದಳವನ್ನೊಡೆದು ಬಂದ ಅಜಿತ್‌ಸಿಂಗ್ ಗುಂಪಿನವರನ್ನು ಮತ್ತೊಮ್ಮೆ ಒಡೆದು ಅವರನ್ನು ಮತ್ತೊಮ್ಮೆ ಕೊಳ್ಳುವುದರಲ್ಲಿ ನಿರತರಾಗಿದ್ದರೆ. ಇನ್ನೊಂದು ಕಡೆ ರಾವ್‌ರವರಿಂದ ಪ.ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸುರವರಿಗೆ ಆರ್ತಧ್ವನಿ ಕರೆ - "ಬನ್ನಿ ದೆಹಲಿಗೆ ಕೂಡಲೆ ಉಳಿಸಿ ನನ್ನ ಕುರ್ಚಿಯನ್ನು". ಬಸುರವರಿಂದ ಸ್ಪಷ್ಟ ನಕಾರ - ಏನಾದರೂ ನಿಮಗೆ ಮಾತನಾಡುವುದಿದ್ದರೆ ದೆಹಲಿಯಲ್ಲಿಯೇ ಇರುವ ನಮ್ಮ ಪಕ್ಷದ ನಾಯಕರನ್ನು ಸಂಪರ್ಕಿಸಿ ಎಂಬ ಉತ್ತರ. ಅಣ್ಣಾ ಡಿಎಂಕೆಯವರನ್ನು ಒಲಿಸಿಕೊಳ್ಳಲು ಕೊನೆಯ ಗಳಿಗೆಯವರೆಗೆ ಇನ್ನಿಲ್ಲದ ಪ್ರಯತ್ನಗಳು. ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರಿಂದಲೇ ನೇರ ನಕಾರ. ಇಂತಹ ಗತಿ ದೇಶದ ಯಾವ ಪ್ರಧಾನಿಗಾದರೂ ಒದಗಿತ್ತೇ?

ಕೊನೆಗೆ ಉಳಿದದ್ದೇ ಕುದುರೆ ವ್ಯಾಪಾರ. ಮತ್ತೊಮ್ಮೆ ದೆಹಲಿಯಲ್ಲಿ ಹಣಹದ್ದುಗಳ ಹಾರಾಟ. ಅಜಿತ್ ಸಿಂಗ್ ಬಣದ ಏಳುಜನ

ಪುಟ 8ನೋಡಿ



"ಇಕನಾಮಿಕ್ ಟೈಮ್ಸ್"ನಲ್ಲಿ ಉನ್ನಿಯವರ ವ್ಯಂಗ್ಯ ಚಿತ್ರದಿಂದ

ಒಳಪುಟಗಳಲ್ಲಿ

ರಾಜಕೀಯವಾಗಿ, ನೈತಿಕವಾಗಿ ಸೋಲಪ್ಪಿದ ಸರ್ಕಾರ

ಸಿಪಿಐ(ಎಂ) ಪೊಲಿಟ್‌ಬ್ಯೂರೋ

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಅವಿಶ್ವಾಸ ನಿರ್ಣಯದ ಫಲಿತಾಂಶದ ಬಗ್ಗೆ ನೀಡಿದ ಹೇಳಿಕೆ, "ಹಣಬಲದ ಉಪಯೋಗ, ಕುದುರೆ ವ್ಯಾಪಾರಗಳಿಂದ ರಾವ್ ಸರ್ಕಾರ ಅಧಿಕಾರಕ್ಕೆ ಅಂಟಿಕೊಳ್ಳುವುದನ್ನು ಸಾಧ್ಯಮಾಡಿಕೊಂಡಿದ್ದರೂ ಅದು ರಾಜಕೀಯವಾಗಿ ನೈತಿಕವಾಗಿ ಸೋಲಪ್ಪಿದೆ ಎಂದಿದೆ."

ರಾವ್ ಸರ್ಕಾರದ ಮುಂದುವರಿಯುವ ಬಗ್ಗೆ "ಥಾಳಿ ತುತ್ತಾಗಿಗೆ ನಜ್ಜುಗುಜ್ಜಾದ ರಾವ್ ಸರ್ಕಾರ ಎಲ್ಲಾ ವಿಶ್ವಾಸಾರ್ಹತೆಯನ್ನೂ ಕಳೆದುಕೊಂಡಿದೆ. ಅದು ಅನುಸರಿಸುತ್ತಿರುವ ಜನದ್ರೋಹಿ ಧೋರಣೆಗಳನ್ನು ಕೈಬಿಟ್ಟ ಹೊರತು ಬಹಳ ಕಾಲ ಉಳಿಯುತ್ತದೆಂದು ನಿರೀಕ್ಷಿಸಲು ಸಾಧ್ಯವಿಲ್ಲ" ಎಂದು ಸಾರಿದೆ.

ಲೋಕಸಭೆಯಲ್ಲಿ ಸಿ.ಪಿ.ಐ.(ಎಂ) ರಣಕಹಳೆ :

'ಸೂಟ್‌ಕೇಸ್ ಆರ್ಥಿಕ' ಸೃಷ್ಟಿಸಿದ, 'ನಾಗಪುರ ಕಾಯಿಲೆ' ಅಂಟಿದ ನರಸಿಂಹರಾವ್ ಸರಕಾರ

"ರಾವ್ ಸರಕಾರಕ್ಕೆ ಆಡಳಿತ ನಡೆಸುವ ಸಾಮರ್ಥ್ಯವೂ ಇಲ್ಲ, ಆಡಳಿತ ನಡೆಸುವ ಇಚ್ಛಾಶಕ್ತಿಯೂ ಇಲ್ಲ, ಆಡಳಿತ ನಡೆಸುವ ನಾಯಕತ್ವವೂ ಇಲ್ಲ" ಎಂದು ಗುಡುಗಿದರು ಲೋಕಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡ ಸೋಮನಾಥ ಚಟರ್ಜಿ. ಜುಲೈ 27 ರಂದು 25 ತಿಂಗಳ ನರಸಿಂಹ ರಾವ್ ಸರಕಾರದ ವಿರುದ್ಧ ಅವಿಶ್ವಾಸ ಠರಾವಿನ ಮೇಲೆ ಮಾತನಾಡುತ್ತಾ ಸರಕಾರದ ಸರ್ವತೋಮುಖ ವಿಫಲತೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಕಾಂ. ಚಟರ್ಜಿ *"12 ಕೋಟಿ ರೂ.ಗಳ ಶೇರು ಹಗರಣ, ಒಂದು ಸೂಟ್‌ಕೇಸ್ ಆರ್ಥಿಕತೆ, ಸಾರ್ವಜನಿಕ ವಲಯದ ಶೇರು ಮಾರಾಟ ಹಗರಣ ಹಾಗೂ ಕೋಮುವಾದದೊಂದಿಗೆ ಯಾವ ನಾಚಿಕೆಯೂ ಇಲ್ಲದೆ ಮಾಡಿಕೊಂಡ ರಾಜಿ- ಇವೇ ಈ ಸರಕಾರದ ಸಾಧನೆಗಳು. ಜನಸಾಮಾನ್ಯರನ್ನು ಸಂಪೂರ್ಣ ವಂಚಿಸಿದ ಈ ಸರಕಾರ ಹೋಗಲೇಬೇಕು."* ಎಂದರು.

ಬಾಬ್ರಿಮಸೀದಿ ನಾಶಕ್ಕೆ ಈ ಸರಕಾರ ಬಿಜೆಪಿಯಷ್ಟೆ ಹೊಣೆ ಎಂದ ಅವರು ಎಡರಂಗ- ರಾಷ್ಟ್ರೀಯರಂಗ ಬಿಜೆಪಿ ಯೊಡನೆ ಶಾಮೀಲಾಗಿವೆ ಎಂದು ಗೇಲಿ ಮಾಡಲು ಪ್ರಯತ್ನಿಸಿದ ಕಾಂಗ್ರೆಗಳನ್ನು ನವಂಬರ್ 1990 ರಲ್ಲಿ ಸಂಸತ್ತಿನಲ್ಲಿ ವಿ.ಪಿ. ಸಿಂಗ್ ಕೋಮುವಾದ ಹಾಗೂ ಮತಾಂಧತೆಯ ವಿರುದ್ಧ ಸಮರ ಮುಂದುವರಿಸಲು ವಿಶ್ವಾಸ ಮತ ಕೇಳಿದಾಗ ಆ ಸರಕಾರ ಉರುಳಿಸುವಲ್ಲಿ ಬಿಜೆಪಿಯೊಡನೆ ಕೈ ಮಿಲಾಯಿಸಿದವರು ಯಾರು ಎಂದು ತೀಕ್ಷ್ಣವಾಗಿ ಪ್ರಶ್ನಿಸಿದಾಗ ಕಾಂಗ್ರೆಗಳನ್ನು ಬಾಯಿಮುಚ್ಚಿಕೊಳ್ಳಬೇಕಾಯಿತು. ಬಿಜೆಪಿಯ ವಿರುದ್ಧ ಸತತ ಹೋರಾಟ ನಡೆಸಿದ್ದು ಸಿಪಿಐ(ಎಂ), ಕಾಂಗ್ರೆಸ್(ಐ) ಅಲ್ಲ. "ನರಸಿಂಹರಾಯರ ಉದ್ದೇಶಪೂರ್ವಕ ರಾಜಿ ಹಾಗೂ ದಿವ್ಯ ನಿಷ್ಕ್ರಿಯತೆ" ಮಸೀದಿಯ ನಾಶಕ್ಕೆ, ನಂತರ ರಕ್ತದೋಕುಳಿಗೆ ದಾರಿ ಮಾಡಿಕೊಟ್ಟಿತು ಎಂದು ನೆನಪಿಸಿದರು.

ಅದ್ಭುತ ಮುಠ್ಠಾಳತನ

ಬಿಜೆಪಿ ಮತ್ತದರ 'ಮೂಲಭೂತವಾದಿ ಪಡೆ'ಗಳ ಕುಕೃತ್ಯವನ್ನು ಬಲವಾಗಿ ಟೀಕಿಸುತ್ತಾ ಈ ರಾವ್ ಸರಕಾರಕ್ಕೆ "ನಾಗಪುರಕಾಯಿಲೆ" ಬಡಿದಿದೆ, ಅದು ನಮ್ಮ ಗಣತಂತ್ರದ ಜಾತ್ಯಾತೀತ ನೀತಿಗಳನ್ನೇ ನಿರ್ನಾಮ ಮಾಡುತ್ತಾ ಸಾಗಿದೆ ಎಂದು ಆಪಾದಿಸಿದರು. ಅಯೋಧ್ಯ ವಿವಾದದಲ್ಲಿ ಶಂಕರಾಚಾರ್ಯರನ್ನು ಎಳೆತರುವ ಪ್ರಧಾನ ಮಂತ್ರಿಗಳ ಪ್ರಯತ್ನವನ್ನು ಬಲವಾಗಿ ಟೀಕಿಸುತ್ತಾ *"ಈ ದೇಶ ಎಲ್ಲಾ ಧರ್ಮಗಳಿಗೆ, ಎಲ್ಲಾ ಪಂಥಗಳಿಗೆ ಸೇರಿದ್ದು, ಆದರೆ ಪ್ರಧಾನಮಂತ್ರಿಗಳು ಆರಿಸಿದ್ದು ಯಾರನ್ನು? ಸರಕಾರದ ಸಮಸ್ಯೆಯನ್ನು ಪರಿಹರಿಸಲು ಸಾಧುಗಳು, ಮಹಂತರುಗಳನ್ನು"* ಎಂದು ಗೇಲಿ ಮಾಡಿದರು.

ನರಸಿಂಹರಾಯರ "ಅಯೋಧ್ಯಾ ಪರಿಹಾರ" ಎಂಬ ಕಂತೆ ಒಂದು 'ಅದ್ಭುತ ಮುಠ್ಠಾಳತನ' ಎನ್ನುತ್ತಾ ಇದರ ಹಿಂದಿರುವ ನಿಜವಾದ ಉದ್ದೇಶವನ್ನು ವಿವರಿಸುತ್ತೀರಾ ಎಂದು ಕಾಂಗ್ರೆ ಸದಸ್ಯರತ್ತ ಮುಖ ಮಾಡಿ ಪ್ರಶ್ನಿಸಿದರು. ನರಸಿಂಹರಾಯರ ಈ "ಪರಿಹಾರ ಕ್ರಮ' ಈಗ ಮಸೀದಿಯಿದ್ದಲ್ಲಿ 500 ವರ್ಷಗಳ ಹಿಂದೆ ಒಂದು ದೇವಸ್ಥಾನ ಇತ್ತು ಎಂದು ಸಾಬೀತಾದರೆ ಸರಕಾರ ಒಂದು ದೇವಸ್ಥಾನ ಕಟ್ಟಲು ಸಿದ್ಧವಾಗಿದೆಯೇ ಎಂದು ಪ್ರಶ್ನಿಸಿದರು. "ದೇವಸ್ಥಾನ ಇತ್ತೆಂದೇ ಇಟ್ಟುಕೊಳ್ಳೋಣ. ಬಿಜೆಪಿ ಮಸೀದಿ ಧ್ವಂಸಮಾಡಿದ್ದನ್ನು ನೀವು ಸಮರ್ಥಿಸುತ್ತೀರಾ?" ಎಂದು ಕೇಳಿದಾಗ ಕಾಂಗ್ರೆ ಪೀಠಗಳಲ್ಲಿ ಮುಜುಗರದ ಭಾವನೆ ಎದ್ದು ಕಾಣಿಸುತ್ತಿತ್ತು. ಚಟರ್ಜಿಯವರು ಮತ್ತೆ ಮತ್ತೆ ಅದೇ ಪ್ರಶ್ನೆ ಕೇಳಿದಾಗ ತಮ್ಮ ಪಕ್ಷವನ್ನು ರಕ್ಷಿಸಿಕೊಳ್ಳಲು ಎದ್ದು ನಿಲ್ಲುವ ಧೈರ್ಯ ಯಾವ ಆಳುವ ಪಕ್ಷದ ಸದಸ್ಯನಿಗೂ ಇದ್ದಂತಿರಲಿಲ್ಲ. "ಹೇಸಿಗೆಯುಂಟು ಮಾಡುವ" ಸೋಮಯಜ್ಞದ ಬಗ್ಗೆ ಪ್ರಸ್ತಾಪಿಸಿದಾಗಲೂ ಇದೇ ಮುಜುಗರ ಪೂರ್ಣ ಮೌನ ಎದ್ದು ಕಾಣುತ್ತಿತ್ತು.- ಆಳುವ ವರ್ಗದ ಅಸಮರ್ಥತೆಗೆ ಸಾಕ್ಷಿಯೆಂಬಂತೆ.

ಎಷ್ಟು ಜನರಿಗೆ ಉದ್ಯೋಗ ನೀಡಿದಿರಿ?

ಆಳುವ ಪಕ್ಷದ ಸದಸ್ಯ ಶೇರು ಹಗರಣದ ಆರಂಭದಲ್ಲೇ ತನ್ನ ಸ್ಥಾನಕ್ಕೆ ಎರವಾಗಬೇಕಾಗಿ ಬಂದ ಮಾಜೀ ಮಂತ್ರಿ ಪಿ. ಚಿದಂಬರವರ 'ಮಾರುಕಟ್ಟೆ ಪ್ರಿಯ' ಆರ್ಥಿಕ ನೀತಿಗಳ ಗುಣಗಾನಕ್ಕೆ ಉತ್ತರ ನೀಡುತ್ತಾ ಈ ಸರಕಾರ ಸದಾ ಐ.ಎಂ. ಎಫ್, ವಿಶ್ವ ಬ್ಯಾಂಕ್‌ಗಳ ಸರ್ಟಿಫಿಕೇಟ್‌ಗಳನ್ನೇ ತೋರಿಸುತ್ತಿರುತ್ತಿದೆ, ಒಂದಾರೂ ನಿರ್ದಿಷ್ಟ ಸಾಧನೆಯನ್ನು ತೋರಿಸಲು ಮಾತ್ರ ಅಸಮರ್ಥವಾಗಿದೆಯೆಂದರು- 'ಎಷ್ಟು ಜನರಿಗೆ ಉದ್ಯೋಗ ಕೊಡಿಸಿದಿರಿ?' ಎಷ್ಟು ಕಾರ್ಮಿಕರಿಗೆ ತರಬೇತಿ ನೀಡಿ ಬೇರೆ ಉದ್ಯೋಗದಲ್ಲಿ ತೊಡಗಿಸಿದಿರಿ? ನಿಮ್ಮ ನವೀಕರಣ ನಿಧಿ ಯಾರಿಗಾಗಿ? ನಿಮ್ಮ ಬಿ.ಐ.ಎಫ್.ಆರ್. ಏನು ಮಾಡುತ್ತಿದೆ? ಎರಡು ಲಕ್ಷಕ್ಕೂ ಹೆಚ್ಚು ರೋಗಗ್ರಸ್ತ ಘಟಕಗಳಿಗೆ- ಏನು ಮಾಡುತ್ತಿದ್ದೀರಾ? ಪ್ರತಿಯೊಂದು ಘಟಕದ ವಿಮರ್ಶೆಯೇನಾದರೂ ನಿಮ್ಮ ಬಳಿಯಿಂದೆಯೇ ತೋರಿಸಿ' ಎಂಬ ಹಲವು ಪ್ರಶ್ನೆಗಳಲ್ಲಿ ಒಂದಕ್ಕೂ ಕಾಂಗ್ರೆಸ್ ಪೀಠಗಳಿಂದ ಉತ್ತರವೇ ಇಲ್ಲ.

ವಿಶ್ವಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಉದಾರೀ

ಪುಟ 8ನೋಡಿ

ಪತ್ರಿಕೆಗಳು ಕಂಡಂತೆ

"ನೈತಿಕ ಅಧಿಕಾರ ಕಳಕೊಂಡಿದೆ"

ಸೋಲಿನ ದವಡೆಯಿಂದ ನರಸಿಂಹರಾವ್ ಸರಕಾರ ಹೇಗೋ ಬದುಕಿ ಬಂದಿರಬಹುದು. ಆದರೆ ಈ ನಿರ್ಣಾಯಕ ಗೆಲುವು ಈ ಆಡಳಿತದ ಬಹುಪಾಲು ನೈತಿಕ ಅಧಿಕಾರವನ್ನು, ರಾಜಕೀಯ ವಿಶ್ವಾಸಾರ್ಹತೆಯನ್ನು ಕಸಿದುಕೊಂಡಿದೆ...... ಅಜಿತ್ ಗುಂಪನ್ನು ಅದು ಒಡೆದ ರೀತಿಯಿದ ಪಕ್ಷಾಂತರ-ವಿರೋಧಿ ಕಾನೂನಿನ ಅಂಶಗಳನ್ನು ಹೇಗೆ ಹಾಸ್ಯಾಸ್ಪದಗೊಳಿಸಲಾಗಿದೆ, ಅವು ಸಂಸದೀಯ ಪ್ರಜಾಪ್ರಭುತ್ವದ ಆಧಾರವನ್ನೇ ಹೇಗೆ ದುರ್ಬಲಗೊಳಿಸಿವೆ ಎಂಬುದು ಮತ್ತೊಮ್ಮೆ ಕಂಡುಬಂತು. ಅಜಿತ್ ಸಿಂಗ್ ಗುಂಪನ್ನು ಒಡೆಯಲು ಬಳಸಿದ ಹತಾಶ, ಒರಟು ತಂತ್ರಗಳು ರಾವ್ ಸರಕಾರದ ನೀತಿಬದ್ಧ ರಾಜಕೀಯದ ಮುಖವಾಡವನ್ನು ಕಿತ್ತೊಗೆದಿವೆ.

-ದಿ ಹಿಂದೂ

"ಭಾರೀ ನಷ್ಟ ತಂದ ಜಯ"

...........ಕಾಂಗ್ರೆಸ್ ಬದುಕುಳಿದ ರೀತಿ ಆ ಪಕ್ಷದ ಬಗ್ಗೆಯಾಗಲೀ, ಅದರ ಮುಖಂಡನ ಬಗ್ಗೆಯಾಗಲೀ ಯಾವುದೇ ವಿಶ್ವಾಸವನ್ನು ಮೂಡಿಸುವಂತದ್ದಲ್ಲ........ ಇತ್ತೀಚಿನ ಸಂಸದೀಯ ಚರ್ಚೆಯಲ್ಲಿ ಅದಕ್ಕುಂಟಾದ ಭಯದಿಂದಾದಲಾದರೂ ಕಾಂಗ್ರೆಸ್ ಹೆಚ್ಚು ಶಕ್ತಿಯುತವಾಗಿ ಕೆಲಸ ಮಾಡಿ ದುಷ್ಕೃತ್ಯದ ಆಪಾದನೆಯನ್ನು ನಿರಾಕರಿಸುತ್ತದೆ ಎಂದು ಆಶಿಸಬೇಕಾಗಿದೆ.

-ಟೈಂಸ್ ಆಫ್ ಇಂಡಿಯಾ

"ಗೌರವ ಹೀನ ವಿಜಯ"

ಬುಧವಾರ ರಾತ್ರಿ ನರಸಿಂಹರಾವ್ ಸರಕಾರ ಸ್ವಲ್ಪದರಲ್ಲಿ ಬದುಕುಳಿದದ್ದು ಈ ಸರಕಾರ ಬಹುದಿನ ತಾಳಬಹುದು ಎಂಬ ಬಗ್ಗೆ ದೇಶದ ವಿಶ್ವಾಸವನ್ನು ಅಲುಗಾಡಿಸಿರುವುದು ಒಂದು ವ್ಯಂಗ್ಯವೇ ಸರಿ..........ಮೂರು ದಿನಗಳ ಸಮರ ಹಾಗೂ ಅದನ್ನು ಗೆದ್ದ ಬಗೆಯಿಂದಾಗಿ ಸರಕಾರದ ನ್ಯಾಯಬದ್ಧತೆಗೆ ಭಾರೀ ಪೆಟ್ಟು ಬಿದ್ದಿದೆ...... ಸಂಸತ್ತಿನಲ್ಲಿ ಬೇಕಾದ ಮತಗಳನ್ನೇನೋ ನರಸಿಂಹರಾವ್ ಗೆದ್ದರು. ಆದರೆ ಅಲ್ಲಿದ್ದ ಬಹುಪಾಲು ತರ್ಕಗಳನ್ನು ಗೆಲ್ಲಲಿಲ್ಲ.

-ದೆಕ್ಕನ್ ಹೆರಾಲ್ಡ್

"ಉಳಿದ ನಂತರ ಏನು?"

ಮತಗಳ ಎಣಿಕೆಯ ಲೆಕ್ಕದಲ್ಲಿ ಹದಿನಾಲ್ಕೇ ಮತಗಳ ಅಂತರದಲ್ಲಿ ಗೆದ್ದ ಸರಕಾರ ಭಾರತದಂತಹ ಮಹಾನ್ ರಾಷ್ಟ್ರವನ್ನು ದಿಟ್ಟತನದಿಂದ ಆಳುವುದೆನ್ನುವ ವಿಶ್ವಾಸವನ್ನು ಜನರಲ್ಲಿ ಮೂಡಿಸುವುದು ಸಾಧ್ಯವೇ ಇಲ್ಲ.

ಆ ಕೂದಲೆಳೆಯ ಅಂತರದ ವಿಜಯದಲ್ಲೂ ಅಜಿತ್ ಸಿಂಗ್ ನೇತೃತ್ವದ ಜನತಾದಳವನ್ನು ಹೋಳು ಮಾಡುವ ಪಕ್ಷಾಂತರ ಪಿಡುಗನ್ನೇ ಅಪ್ಪುವಂತಹ ಕುತಂತ್ರವೂ ಅನಿವಾರ್ಯವಾಯಿತು ಎನ್ನುವುದನ್ನು ಗಮನಿಸಿದರೆ ನರಸಿಂಹರಾವ್ ಸರಕಾರ ವಾಸ್ತವವಾಗಿ ತನ್ನ ನೈತಿಕ ಪತನವನ್ನು ತಾನೇ ತಂದುಕೊಂಡಿತ್ತು ಎನ್ನಬಹುದು.

- ಕನ್ನಡ ಪ್ರಭ

ಅವಿಶ್ವಾಸ ನಿರ್ಣಯವು 14 ಮತಗಳ ಅಂತರದಿಂದ ತಿರಸ್ಕೃತವಾಯಿತೇನೋ ನಿಜ. ಆದರೆ ಸರಕಾರದ ವಿಶ್ವಾಸಾರ್ಹತೆಯ ಪ್ರಶ್ನೆ ಮಾತ್ರ ಉಳಿದಿದೆಂಬ ಪ್ರತಿಪಕ್ಷಗಳ ವಾದವನ್ನು ಅಲ್ಲಗಳೆಯಲಿಕ್ಕಾಗದು.

- ಸಂಯುಕ್ತ ಕರ್ನಾಟಕ

ಪಶ್ಚಿಮ ಬಂಗಾಳ ಯುವ ಕಾಂಗ್ರೆ ಗೂಂಡಾಗಿರಿ

ಹತಾಶ ಮಮತಾ ಬ್ಯಾನರ್ಜಿ ಅವತಾರವೋ ಅಥವಾ ವ್ಯಾಪಕ ಬಲಪಂಥೀಯ ಪಿತೂರಿಯೋ?

'ಹಿಂಸೆಯನ್ನು ಪ್ರಚೋದಿಸುವುದು ನನ್ನ ಜನ್ಮ ಸಿದ್ಧ ಹಕ್ಕು'- ಇದು ಮಮತಾ ಬ್ಯಾನರ್ಜಿ ಎಂಬ ಕಾಂಗ್ರೆ ಸಂಸತ್‌ಸದಸ್ಯೆಯ ಧ್ಯೇಯವಾಗಿರುವಂತೆ ಕಾಣುತ್ತದೆ. ಜುಲೈ 21 ರಂದು ಕಲ್ಕತ್ತದಲ್ಲಿ ನಡೆದ ಹಿಂಸಾಚಾರಗಳನ್ನು ಗಮನಿಸಿದಾಗ ಹೀಗೆ ಹೇಳದೆ ಇರಲು ಆಗುವುದೇ ಇಲ್ಲ.

ಪಶ್ಚಿಮಬಂಗಾಳದ ಎಡರಂಗ ಸರಕಾರದ ವಿರುದ್ಧ ಚಳುವಳಿಯ ಅಂಗವಾಗಿ ರಾಜ್ಯದ ಆಡಳಿತದ ಕೇಂದ್ರ ಸ್ಥಾನವಾದ 'ರೈಟರ್ಸ್ ಬಿಲ್ಡಿಂಗ್'ಗೆ ಮುತ್ತಿಗೆ ಹಾಕುವ ಕಾರ್ಯಕ್ರಮವನ್ನು ಮಮತಾ ನೇತೃತ್ವದ ಯುವ ಕಾಂಗ್ರೆ ಹಮ್ಮಿಕೊಂಡಿತ್ತು. ಆದರೆ ಅದು ಒಂದು ಚಳುವಳಿಯಾಗಿರದೆ ರಾಜಕೀಯದ ಹೆಸರಿನಲ್ಲಿ ನಡೆದ ಗೂಂಡಾಗಿರಿಯಾಗಿತ್ತು. 'ಚಳುವಳಿಕಾರರು' ಲೂಟಿ, ದೊಂಬಿ, ಬಾಂಬ್ ಎಸೆತದಲ್ಲಿ ತೊಡಗಿದ್ದರಿಂದ ಉಂಟಾದ ಪರಿಸ್ಥಿತಿಯನ್ನು ನಿಯಂತ್ರಿಸಲು ಪೋಲೀಸರು ಗುಂಡು ಹಾರಿಸಿದಾಗ 12 ಜನರು ಬಲಿಯಾದರೂ ವಾತಾವರಣದಲ್ಲಿ ಭಯ ಹಿಂಸೆ ಹರಡಿ 12 ಅಮೂಲ್ಯ ಜೀವಗಳನ್ನು ಬಲಿತೆಗೆದುಕೊಂಡದ್ದಲ್ಲದೆ ಬೇರೇನನ್ನು ಮಮತಾ ಬ್ಯಾನರ್ಜಿ ಸಾಧಿಸಲಿಲ್ಲ.

ಮಮತಾ ಬ್ಯಾನರ್ಜಿಯ ಚಿತಾವಣೆಯಿಂದಾಗಿ ಪುಂಡರು ಹಲವು ಕಡೆಗಳಲ್ಲಿ ಪೋಲೀಸರ ಮೇಲೆ ದಾಳಿ ಮಾಡಿದರು. ವ್ಯಾಪಕ ಹಿಂಸಾಚಾರಕ್ಕೆ ಮೂಲವಾದ್ದೇ ಅದು ಅನೇಕ ಸ್ಥಳಗಳಲ್ಲಿ ಸರಕಾರೀ ವಾಹನಗಳು, ಖಾಸಗೀ ಕಾರುಗಳು ಮತ್ತು ದ್ವಿಚಕ್ರವಾಹನಗಳು ದುಷ್ಕರ್ಮಿಗಳ ಅಂದಾದುಂದಿಗೆ ಬಲಿಯಾಗಿ ಸುಟ್ಟುಹೋದವು. ಪೋಲೀಸರ ಮೇಲೆ ಆಕ್ರಮಣ, ಕಲ್ಲು ತೂರಾಟ, ವಾಹನಗಳಿಗೆ ದೆಂಕಿ ಇಡುವಿಕೆ ಮೊದಲಾದವುಗಳನ್ನು 'ದೂರದರ್ಶನ' ವೀಕ್ಷಕರು ನೋಡಿರಬಹುದು. ಪತ್ರಿಕೆಗಳಲ್ಲೂ ಹಲವು ಫೋಟೋಗಳು ಪ್ರಕಟವಾಗಿವೆ. ಅನೇಕ ಅಂಗಡಿ ಮುಂಗಟ್ಟುಗಳು ನಾಶವಾಗಿವೆ.

ಹಿಂಸಾಚಾರದಲ್ಲಿ ಪೋಲೀಸ್ ಅಧಿಕಾರಿಗಳ ಸಹಿತ ಅನೇಕ ಪೊಲೀಸ್ ಸಿಬ್ಬಂದಿಗಳು ಗಾಯಗೊಂಡಿದ್ದಾರೆ. ನಗರದ ಹೃದಯಭಾಗದಲ್ಲಿರುವ ಎಸ್ಪಲ್ಲನೇಡ್ ಮತ್ತು ಬಿಬಿಡಿ ಬಾಗ್ ಪ್ರದೇಶದ ಅನೇಕ ಸ್ಥಳಗಳಲ್ಲಿ ಹಿಂಸೆಯಲ್ಲಿ ತೊಡಗಿದ ಯುವ ಕಾಂಗ್ರೆ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಮೊದಲು ಲಾಠಿ ಪ್ರಹಾರ ಮಾಡಿ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು. ಇವೆಲ್ಲವುಗಳು ವಿಫಲವಾದಾಗ ಕೊನೆಯಲ್ಲಿ ಗೋಳೀಬಾರ್ ನಡೆಸಿದರು.

ಪ್ರದೇಶ ಕಾಂಗ್ರೆ ಅಧ್ಯಕ್ಷ ಸೋಮೆನ್ ಮಿತ್ರಾ ಬಣದವರು ಕಾರ್ಯಕ್ರಮದಲ್ಲಿ ಭಾಗವಹಿಸಿರಲಿಲ್ಲ. ಈ ಬಣದ ಶಾಸಕರು ಆ ದಿನ ಅಸೆಂಬ್ಲಿ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ರೈಟರ್ಸ್ ಬಿಲ್ಡಿಂಗ್‌ನತ್ತ ಸಾಗುವ ರಸ್ತೆಗಳಲ್ಲಿ ಸಂಚಾರ ತಡೆಯಲು ಯುವ ಕಾಂಗ್ರೆ ನವರಿಗೆ ಸಾಧ್ಯವಾಗಲಿಲ್ಲ. ಮುಖ್ಯಮಂತ್ರಿ ಜ್ಯೋತಿಬಸು ಸಹಿತ ಎಲ್ಲಾ ಸಚಿವರು ಮಾಮೂಲಿನಂತೆ ಕಚೇರಿಗೆ ಹಾಜರಾದ್ಧರು.

ಪಾಪ, ರಾಜ್ಯ ಸರಕಾರವನ್ನೇ ಉರುಳಿಸಲು ಹೊರಟ 'ದಿಟ್ಟನಾಯಕಿ' ಮಮತಾ ಬ್ಯಾನರ್ಜಿಗೆ ಇದನ್ನೆಲ್ಲಾ ಕಂಡು ಏನಾಗಿರಬೇಡ, ನೀವೇ ಊಹಿಸಿ.

ನಿಜ, ಆ ದಿನ 12 ಮಂದಿ ಪೋಲೀಸ್ ಗೋಳೀಬಾರಿನಲ್ಲಿ ಸತ್ತರು. ಅದು ಅತ್ಯಂತ ಆತಂಕದ ಸಂಗತಿ. ಆದರೆ ಸದಾ ಎಡಪಕ್ಷಗಳ ಕಟ್ಟಾ-ವಿರೋಧಿಗಳಾದ ಮಮತಾ ಬ್ಯಾನರ್ಜಿಯವರನ್ನು ಹಾಡಿಹೊಗಳುವ ಕಲ್ಕತ್ತೆಯ ಪತ್ರಿಕೆಗಳೂ ಕೂಡಾ ಕಾಂಗ್ರೆನ ಈ ಕೃತ್ಯವನ್ನು ಖಂಡಿಸಬೇಕಾಗಿ ಬಂತು ಏಕೆಂದರೆ ವಾಸ್ತವವಾಗಿ ಇವರು ತಮ್ಮ ಮುಖಂಡರ ಅತ್ಯಂತ ನಿಕೃಷ್ಟ ರಾಜಕೀಯಕ್ಕೆ ಬಲಿಯಾದರು ಎಂದು ಆ ಪತ್ರಿಕೆಗಳೂ ಒಪ್ಪಿಕೊಳ್ಳುವಂತಹ ಪರಿಸ್ಥಿತಿ.

ಪೂರ್ವಯೋಜಿತ

ಈ ಹಿಂಸಾಚಾರ ಕೆಲವು ಅಖಿಲ ಭಾರತ ಪತ್ರಿಕೆಗಳು ವರದಿ ಮಾಡಿರುವಂತೆ ಇದ್ದಕ್ಕಿದ್ದಂತೆ ಹಿಂಸೆಯತ್ತ ತಿರುಗಿದ್ದಲ್ಲ. ಕಲ್ಕತ್ತೆಯ 'ಸ್ಟೇಟ್ಸ್ ಮನ್' ಪತ್ರಿಕೆ ಟಿಪ್ಪಣಿ ಮಾಡಿರುವಂತೆ ಇದು ಸಂಪೂರ್ಣವಾಗಿ ಪೂರ್ವಯೋಜಿತವಾಗಿತ್ತು.

ಮೊದಲನೆಯದಾಗಿ : ಮುಖಂಡರಿರುವ ಎಲ್ಲೂ ಭಾಷಣಗಳಿರಲಿಲ್ಲ ಐದು ಕಡೆ ಸಭೆಗಳಲ್ಲಿ ಅವರು ನೇರವಾಗಿ ಪೋಲೀಸ್ ಮೇಲೆ ಎರಗಲು ಕುಮ್ಮಕ್ಕು ನೀಡಿದ್ದಷ್ಟೆ. ಉದಾಹರಣೆಗೆ, "ನಾವಿಲ್ಲಿ ಕೇವಲ ಘೋಷಣೆ ಕೂಗಲು ಬಂದಿಲ್ಲ. ಸಾಯಲು ಬಂದಿದ್ದೇವೆ" ಎಂದು ಮಮತಾ ಬ್ಯಾನರ್ಜಿ ಹೇಳಿದುದಾಗಿ ಒಂದು ಪತ್ರಿಕೆ ವರದಿ ಮಾಡಿದ್ದರೆ "ಸಿಪಿಐ(ಎಂ)ಗೆ ಮಾತ್ರವಲ್ಲ ಪ್ರದೇಶ ಕಾಂಗ್ರೆಸ್ (ಐ) ಮುಖಂಡರಿಗೂ ಬುದ್ಧಿ ಕಲಿಸುತ್ತೇವೆ" ಎಂದರಂತೆ ಪ್ರಿಯರಂಜನ್ ದಾಸ್ ಮುನ್ಷಿ.

ಎರಡನೆಯದಾಗಿ : ಗೋಳೀಬಾರು ನಡೆಯುವ ಎಷ್ಟೋ ಮೊದಲೇ ಮಮತಾ ಬ್ಯಾನರ್ಜಿ ಮತ್ತು ಎಂಎಲ್‌ಎ ಹಾಗೂ ಆಕೆಯ ನಿಕಟ ಸಹಯೋಗಿ ಸೌಗತ್ ರಾಯ್ ಆ ಐದು ಆರಿಸಿದ ಸ್ಥಳಗಳಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ಓಡಾಡುತ್ತಾ 'ಗೋಳೀಬಾರು ನಡೆಯಿತು' ಎಂಬ ಸುಳ್ಳು ಸುದ್ದಿ ಹರಡಿಸಿ ತಮ್ಮ ಹಿಂಬಾಲಕರನ್ನು ಉದ್ರೇಕ ಗೊಳಿಸಿದರು.

ಮೂರನೆಯದಾಗಿ : ಪೋಲೀಸರು ತಮ್ಮ "ಅಂತಿಮ ಕ್ರಮ ಆರಂಭಿಸುವ ಸ್ವಲ್ಪವೇ ಮೊದಲು ಈ ಎಲ್ಲಾ ಮುಖಂಡರು ಜಾಗ ಖಾಲಿ ಮಾಡಿದ್ದರು. ಇದು ಈಗ ಹಲವು ಕಾಂಗ್ರೆಸ್ಸಿಗರನ್ನು ಸಿಟ್ಟಿಗೇಳಿಸಿದೆ.

ನಾಲ್ಕನೆಯದಾಗಿ : "ಚಳುವಳಿಕಾರರಲ್ಲಿ" ಬಹಳ ಮಂದಿ ಶಸ್ತ್ರಸಜ್ಜಿತರಾಗಿದ್ದರು. ಬಾಂಬುಗಳು, ಕಲ್ಲುಗಳ ಲೋಹ ಸಂಗ್ರಹವೇ ಇತ್ತು. ಒಂದು ಗುಂಪು ಮುಂದೆ ಪೋಲೀಸ್‌ರತ್ತ ಕಲ್ಲೆಸೆಯಿತು. ನಂತರ ಇನ್ನೊಂದು ಗುಂಪು ಬಾಂಬ್‌ಗಳನ್ನು ಸಿಡಿಸುತ್ತಾ ಮುನ್ನುಗ್ಗಲು ಯತ್ನಿಸಿತು. ವಾಹನಗಳಿಗೆ ಕೊಳ್ಳಿಯಿಡುವ ಕೆಲಸ ಆರಂಭಿಸಿತು. ಇಡೀ ಕೃತ್ಯ ಅನುಭವಶಾಲಿ ತಲೆಗಳ, ಕೈಗಳ ಕೆಲಸವೇ ಆಗಿತ್ತು.

ಗಾಯಗೊಂಡ ಕಾಂಗ್ರೆಸ್ಸಿಗರಲ್ಲಿ 19 ಮಂದಿ ತಮ್ಮವರ ಬಾಂಬ್ ಎಸೆತಗಳಿಂದಲೇ. ಏಕೆಂದರೆ ಪೋಲೀಸರು ಬಾಂಬ್ ಎಸೆದರು ಎಂದು ಕಾಂಗ್ರೆಸ್ಸಿಗರೂ ಹೇಳುತ್ತಿಲ್ಲ. ದಕ್ಷಿಣ ಕಲ್ಕತ್ತೆಯ ಕಾಂಗ್ರೆಸ್ ಮುಖಂಡರಾದ ಪಂಕಜ್ ಬ್ಯಾನರ್ಜಿ ತಮ್ಮ ದೆಂಬಲಿಗರ ಕಲ್ಲು ತೂರಾಟದಿಂದಾಗಿ ತಲೆಗೆ ಗಾಯಗಳಾದವು ಕೆಲವರಿಗೆ ತಮ್ಮ ಜತೆಗಿದ್ದ ಚಳುವಳಿಕಾರರು ಒಡಿದಿದ್ದ ಅಸ್ತ್ರಗಳಿಂದಲೇ ಗಾಯಗಳಾದವು ಬಂಧಿಸಲ್ಪಟ್ಟ ಕೆಲವರ ಕೈಯಲ್ಲಿ ಖಡ್ಗಗಳಿದ್ದವು ಎಂದು 'ಸ್ಟೇಟ್ಸ್‌ಮನ್' ವರದಿ ಮಾಡಿದೆ.

ಅನಾರೋಗ್ಯದ ನಾಟಕ

ಈ ಮಧ್ಯೆ, ಮಮತಾ ಬ್ಯಾನರ್ಜಿ ತಮ್ಮ 'ಅನಾರೋಗ್ಯ'ದ ನಾಟಕವನ್ನು ಇಲ್ಲಿಯೂ ಪುನರಾವರ್ತಿಸಿದರು. ತಲೆಸುತ್ತು ಬಂದಿತೆಂದು ಹೇಳಿದ ಆಕೆಯನ್ನು ಪೊಲೀಸರು ಆಕೆಯ ಮನೆಗೆ ಸಾಗಿಸಿದರು. ಸ್ವಲ್ಪಹೊತ್ತಿನ ಮೇಲೆ ಆಕೆ ಆಸ್ಪತ್ರೆಗೆ ದಾಖಲಾಗುವ ನಿರ್ಧಾರ ಕೈಗೊಂಡರು ಅಲ್ಲಿ ದಾಖಲಿಸಿದಾಗ ವೈದ್ಯರನ್ನು ಕಾಣಲು ನಿರಾಕರಿಸಿದರು.

ಕಾಂಗ್ರೆ ದುಂಡಾವರ್ತನೆ ಕಾನೂನು ಮತ್ತು ಶಿಸ್ತು ಪರಿಸ್ಥಿತಿಯನ್ನು ಕೆಡಿಸುವ ಯತ್ನ ಎಂದು ವಿಧಾನಸಭೆಯಲ್ಲಿ ಎಡರಂಗ ಸದಸ್ಯರು ವರ್ಣಿಸಿದರು. ಕಾಂಗ್ರೆ ಸದಸ್ಯರು ಸ್ವಲ್ಪ ಹೊತ್ತು ಗಲಾಟೆ ಮಾಡಿ ಸಭಾ ತ್ಯಾಗ ಮಾಡಿದರು.

ಚುನಾಯಿತ ಸರಕಾರವನ್ನು ಉರುಳಿಸುವ ಯತ್ನ

ಕಾಂಗ್ರೆಸ್(ಐ) ನಡೆಸಿದ ಪುಂಡಾಟಿಕೆ ಚುನಾಯಿತ ಸರಕಾರವೊಂದನ್ನು ಉರುಳಿಸುವ ಯತ್ನವಾಗಿದೆ ಎಂದು ಮುಖ್ಯಮಂತ್ರಿ ಜ್ಯೋತಿಬಸು ಹೇಳಿದ್ದಾರೆ. ಇಂಥ ಪ್ರಯತ್ನಗಳು ಯಾವತ್ತೂ ಯಶಸ್ವಿಯಾಗುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ಪ್ರದೇಶ ಕಾಂಗ್ರೆನ ಒಂದು ವಿಭಾಗದ ನಾಯಕರು ಯುವ ಕಾಂಗ್ರೆ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲವಾದರೂ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ವಿಫಲರಾಗಿದ್ದಾರೆ. ರಾಜ್ಯ ಘಟಕವನ್ನು ನಿಯಂತ್ರಿಸುವಲ್ಲಿ ಕಾಂಗ್ರೆನ ಕೇಂದ್ರ ನಾಯಕತ್ವ ಕೂಡಾ ವಿಫಲವಾಗಿದೆ ಎಂದು ಬಸು ನುಡಿದರು.

ಏಕೆ ಈ ಅವತಾರ?

ಮಮತಾ ಬ್ಯಾನರ್ಜಿ ಇಂತಹ ತಲೆಯಿಲ್ಲದ ಕಾರ್ಯಾಚರಣೆಗಿಳಿಯಲು ಕಾರಣವಾದರೂ ಏನು? ಮೊದಲ ನೋಟಕ್ಕೆ ಅನಿಸುವುದೆಂದರೆ ಪಕ್ಷದೊಳಗೆ ಆಕೆಗುಂಟಾದ ಹತಾಶೆ. ಕೇಂದ್ರ ಮಂತ್ರಿಮಂಡಳದಿಂದ ನಾಟಕೀಯವಾಗಿ ರಾಜೀನಾಮೆ ನೀಡಿದರೂ ಸಾಕಷ್ಟು ಗಮನ ಸೆಳೆಯಲು ಆಗಲಿಲ್ಲ. 'ಧರಣಿ' ಯೆಂಬ ಭಾವೋದ್ರೇಕ, ಮುಖ್ಯಮಂತ್ರಿಯವರ ಕೊಠಡಿಯೆಂದು ಕುಸ್ಸೆಂದ ನಾಟಕ, ಪಕ್ಷದೊಳಗೆ ಪ್ರಾಬಲ್ಯ ಮೆರೆಸುವಲ್ಲಿ ವಿಫಲತೆ, ದಿಲ್ಲಿಯ ಬಾಸ್‌ಗಳಿಂದಲೂ ಏಟು, 'ಬಿಜೆಪಿಯೊಂದಿಗೆ ಸಂಗದಿಂದಾಗಿ ಆಕೆಯ ಹಿಂಬಾಲಕರಲ್ಲೇ ಗೊಂದಲ, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷತೆಯಿಂದ ಆಕೆಯ ನಿಕಟ ಹಿಂಬಾಲಕರ ಏಟು ಹಾಗೂ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಹೆಸರು ಕಾಣುವ ಚಟ- ಆದರ್ಶ ಈ ಹುಚ್ಚಾಟಿಕ್ಕೆ ಇದಷ್ಟೇ ಕಾರಣ ಅಲ್ಲ ಎನ್ನುತ್ತಾರೆ ಐ.ಎನ್.ಎನ್. ಸುದ್ದಿ ಸಂಸ್ಥೆಯ ಕಲ್ಕತ್ತಾ ವರದಿಗಾರ. ಇದು ಒಂದು ದೊಡ್ಡ ಕಮ್ಯುನಿಸ್ಟ್-ವಿರೋಧಿ ಪಿತೂರಿಯ ಭಾಗ. ಉದ್ರೇಕಗೊಂಡ ಯುವಜನರನ್ನು ಬಳಸಿ ಬೀದಿಗಳಲ್ಲಿ ಎಡರಂಗದೊಡನೆ ಕಾದಾಡುವ ಪಿತೂರಿಯ ಭಾಗ. ಹಿಂದೆ 1970 ರ ದಶಕದಲ್ಲಿ ಇದೇ ರೀತಿ ಹಿಂಸಾಚಾರದ ವಾತಾವರಣ ಸೃಷ್ಟಿಸಲು ಪ್ರಯತ್ನಿಸಲಾಗಿತ್ತು. ಈಗ ಮತ್ತೊಮ್ಮೆ ಪಶ್ಚಿಮಬಂಗಾಳದ ಹತಾಶ ಬಲಪಂಥೀಯ ಮುಖಂಡರ ಕ್ರೂರ ರಾಜಕೀಯ ಆಟ ಬಯಲಾಗಿದೆ.

ಬರಗಾಲದ ಬವಣೆಯಲ್ಲಿ ಬಳ್ಳಾರಿ ಜಿಲ್ಲೆ

ಬಳ್ಳಾರಿ ಜಿಲ್ಲೆ ಸತತ 2 ನೇ ಬಾರಿಗೆ ತೀವ್ರ ಸಂಕಷ್ಟಕ್ಕೆ ಒಳಗಾಗಿದೆ. ಈ ಮೊದಲು ಅತಿ ವೃಷ್ಟಿಯಿಂದಾಗಿ ತೀವ್ರ ಬೆಳೆ ಹಾನಿಯಾದ ಬೆನ್ನಲ್ಲೇ ಈಗ ಮುಂಗಾರು ಮಳೆ ವಿಫಲತೆಯಿಂದಾಗಿ ತೀವ್ರ ಬರಸ್ಥಿತಿಕಾಲಿಟ್ಟಿದೆ. ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ಅಲ್ಲಲ್ಲಿ ಬಿದ್ದ ಶೇಕಡ 80 ಭಾಗ ಇದುವರೆಗೆ ಮಳೆಯಾಗದೇ ಬಿತ್ತನೆಯೇ ಆಗಿಲ್ಲ. ಜಿಲ್ಲೆಯ 3/4ಭಾಗ ಮಸಾರಿ ನೆಲ ಹೊಂದಿದ್ದು ಮುಂಗಾರು ಬೆಳೆಗೆ ಮಾತ್ರ ಯೋಗ್ಯವಾಗಿದೆ. ಹೀಗಾಗಿ ಬಿತ್ತಿದ ರೈತರಿಗೆ ಪ್ರತಿ ಎಕರೆಗೆ ಸಾವಿರಾರು ರೂಪಾಯಿಗಳ ನಷ್ಟವಾಗಿದೆ. ಇನ್ನುಳಿದ ಮಳೆಯಾಧಾರಿತ ಪ್ರದೇಶದ ರೈತರು ವರ್ಷವಿಡೀ ಬರವನ್ನು ಎದುರಿಸಬೇಕಾಗಿದೆ. ಕೃಷಿ ಕೂಲಿಗಾರರಿಗೂ ಕೆಲಸವಿಲ್ಲದೇ ಜನರು ಗ್ರಾಮೀಣ ಪ್ರದೇಶದಿಂದ ಗುಳೆ ಹೋಗಲು ಆರಂಭಿಸಿದ್ದಾರೆ. ಜಾನುವಾರುಗಳಿಗೆ ನೀರಿನ ಅಭಾವ ತಲೆದೂರಿದೆ, ಕೆರೆಗಳು ಬತ್ತಿ ಹೋಗಿವೆ. 300 ಕ್ಕೂ ಹೆಚ್ಚಿನ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಿದೆ.

ಆದ್ದರಿಂದ ಕೂಡಲೇ ಬಳ್ಳಾರಿ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ತೀವ್ರವಾಗಿ ಪರಿಹಾರ ಕೆಲಸಗಳನ್ನು ಆರಂಭಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಒತ್ತಾಯಿಸಿ. ಈ ಹಿಂದೆ ಇಂತಹ ಸ್ಥಿತಿಗಳಲ್ಲಿ ಕೇಂದ್ರದಿಂದ ಅಧ್ಯಯನ ತಂಡಗಳನ್ನು ಕಳುಹಿಸಿ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಲು ಸಹಾಯ ನೀಡಲಾಗುತ್ತಿತ್ತು. ಆದರೆ ಪಿ.ವಿ. ನರಸಿಂಹರಾಯರ ಸರಕಾರದ ಐ.ಎಂ.ಎಫ್ , ಜಾಗತಿಕ ಬ್ಯಾಂಕ್ ನಿರ್ದೇಶಿತ ಹೊಸ ಆರ್ಥಿಕ ನೀತಿಗಳ ಫಲವಾಗಿ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಸಂಪೂರ್ಣ ಕಡೆಗಣಿಸಿ ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿರುವುದನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಖಂಡಿಸಿದೆ. ಕೂಡಲೇ ಕೇಂದ್ರ ಸರಕಾರವೂ, ರಾಜ್ಯ ಸರಕಾರವೂ ಪರಿಹಾರ ಕಾಮಗಾರಿಗಳನ್ನು ತಕ್ಷಣ ಕೈಗೊಳ್ಳಲು ಒತ್ತಾಯಿಸಿದೆ. ರಾಜ್ಯಮುಖ್ಯಮಂತ್ರಿ ವೀರಪ್ಪಮೊಯಿಲಿ ಹಣದ ಕೊರತೆ ಇಲ್ಲ ಪರಿಹಾರ ಕಾಮಗಾರಿ ಆರಂಭಿಸಲಾಗುವುದೆಂದು ತಿಳಿಸದ್ದರೆಂದು ಪತ್ರಿಕೆಗಳಲ್ಲಿ ಹೇಳಿಕೆ ಬಂದಿದೆಯಾದರೂ ಜಿಲ್ಲೆಯಲ್ಲಿ ಎಲ್ಲೂ ಕೆಲಸವಾಗಿಲ್ಲ. ಆದ್ದರಿಂದ ಕೆಲವು ನಿರ್ದಿಷ್ಟ ಕ್ರಮಗಳನ್ನು ವಹಿಸಲು ಸಿಪಿಐ(ಎಂ) ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಬರಗಾಲದ ಶಾಶ್ವತ ಪರಿಹಾರಕ್ಕಾಗಿ 1) ಜಿಲ್ಲಾ ಪರಿಷತ್ ಹಾಗೂ ನೀರಾವರಿ ಇಲಾಖೆ ಈಗಾಗಲೇ ಸರ್ಕಾರದ ಮುಂದಿಟ್ಟಿರುವ ಏತ ನೀರಾವರಿ ಹಾಗೂ ಟಿಕ್- ಅಪ್‌ಗಳು ನಿರ್ಮಿಸಲು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಪ್ರಥಮ ಆದ್ಯತೆಯಾಗಿ ಹಣ ಬಿಡುಗಡೆ ಮಾಡಿ ಕೆಲಸವನ್ನು ತ್ವರಿತವಾಗಿ ತೆಗೆದುಕೊಳ್ಳಬೇಕು.

2) ಭದ್ರಾ ಮೇಲ್ದಂಡೆ ಎತ್ತರಿಸಿ ಹಾಗೂ ಹುಲಿಗುಡ್ಡ ನೀರಾವರಿ ಯೋಜನೆಯನ್ನು ಮತ್ತು ಮೊಲ್ಕಿ ಜಲಾಶಯ ನಿರ್ಮಿಸಿ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲೂಕುಗಳಿಗೆ ನೀರು ಒದಗಿಸಬೇಕು.

3) ತುಂಗಭದ್ರಾ ಡ್ಯಾಂ ಹೆಚ್ಚುವರಿ ನೀರನ್ನು ಬಳ್ಳಾರಿ, ಹೊಸಪೇಟೆ, ಸಂಡೂರು ತಾಲೂಕುಗಳಿಗೆ ನೀರಿನ ಸೌಕರ್ಯ ಕಲ್ಪಿಸಲು ಯೋಜನೆಯೊಂದನ್ನು ರೂಪಿಸಿ ಜಾರಿಗೊಳಿಸುವುದು.

ಇವಕ್ಕೆ ರಾಜ್ಯ ಸರಕಾರ ಕೂಡಲೇ ಹಣವನ್ನು ಬಿಡುಗಡೆ ಮಾಡುಬೇಕು ಎಂದು ಸಿಪಿಐ(ಎಂ) ಒತ್ತಾಯಿಸಿದೆ..

-- ಕಾಂ. ಪ್ರಸನ್ನ ಕುಮಾರ್

ದಕ್ಷಿಣ ಕನ್ನಡದಲ್ಲಿ ವೇದಿಕೆ ರಚನೆ

ಮಂಗಳೂರು : ಕಳೆದ ಎಪ್ರಿಲ್ 15 ರಂದು ನವದೆಹಲಿಯಲ್ಲಿ ಜರಗಿದ ಅಖಿಲ ಭಾರತ ಸಮಾವೇಶದಲ್ಲಿ ರೂಪುಗೊಂಡ "ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಮತ್ತು ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ವೇದಿಕೆ"ಯು ಇದೇ ಆಗಸ್ಟ್ 19 ರಂದು ಜೈಲ್ ಭರೋ ಚಳುವಳಿ ಹಾಗೂ ಸೆಪ್ಟೆಂಬರ್ 9 ರಂದು ಸಾರ್ವತ್ರಿಕ ಮುಷ್ಕರ ಮತ್ತು ಭಾರತ್ ಬಂದ್ ನಡೆಸಲು ಕರೆ ನೀಡಿದ ಹಿನ್ನೆಲೆಯಲ್ಲಿ, ದ.ಕ. ಜಿಲ್ಲೆಯ ಕಾರ್ಮಿಕ, ನೌಕರ, ವಿದ್ಯಾರ್ಥಿ-ಯುವಜನ, ಸಾಂಸ್ಕೃತಿಕ ಮತ್ತು ರೈತ ಸಂಘಟನೆಗಳ ಪ್ರತಿನಿಧಿಗಳ ಸಭೆಯೊಂದು ಜುಲೈ 16 ರಂದು ಮಂಗಳೂರಿನಲ್ಲಿ ಎಚ್.ಎಂ.ಎಸ್. ರಾಜ್ಯಾಧ್ಯಕ್ಷ ಎಂ. ಲೋಕಯ್ಯ ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು.

ಅಖಿಲ ಭಾರತ ಸಮಾವೇಶದ ಕರೆಗೆ ಅನುಗುಣವಾಗಿ ಜಿಲ್ಲಾ ಮಟ್ಟದಲ್ಲಿ ಈ ವೇದಿಕೆಯನ್ನು ರಚಿಸಲಾಯಿತು. ವೇದಿಕೆಯ ಸದಸ್ಯರನ್ನಾಗಿ, ಬಿ. ಮಾಧವ, ಕೆ. ಮೂಸಬ್ಬ (ಇಬ್ಬರೂ ಸಿಐಟಿಯು) ಎಚ್. ಉಮಾನಾಥ ನಾಯಕ್, ಭೋಜ ಕೋಟ್ಯಾನ್ (ಇಬ್ಬರೂ ಎಚ್‌ಎಂಎಸ್) ಬಿ.ಕೆ. ಕೃಷ್ಣಪ್ಪ (ಅಖಿಲ ಭಾರತ ಕಿಸಾನ್ ಸಭಾ), ಅಬ್ರಹಾಂ ಕರ್ಕಡ (ದ.ಕ. ಜಿಲ್ಲಾ ರೈತ ಸಂಘ) ಸುಕುಮಾರ್ (ಬಿಇಎಫ್‌ಐ), ನಾಗೇಶ್‌ಕುಮಾರ್ (ಎಐಐಇಎ), ಟಿ. ರಮೇಶ್ (ಕೆಎಸ್.ಜಿಇಎ), ಅಶೋಕ್ ಕುಮಾರ್ (ಬಿಇಇಯು), ವಸಂತ ಆಚಾರಿ (ಡಿ.ವೈ.ಎಫ್.ಐ) ವಾಸುದೇವ ಉಚ್ಚಿಲ್ (ಸಮುದಾಯ), ರಾಜ್ ಕುಮಾರ್ (ಎಸ್.ಎಫ್ ಐ), ವಿಶ್ವನಾಥ ಕಾಮತ್ (ಎಐಎಸ್‌ಎಫ್) ಮತ್ತು ಸಂಜೀವ ಬಳ್ಕೂರ್ (ಎಫ್‌ಇಎ) ಇವರನ್ನು ಆರಿಸಲಾಯಿತು. ವೇದಿಕೆಯಲ್ಲಿ ಭಾಗವಹಿಸಲಿರುವ ಇತರ ಸಂಘಟನೆಗಳ ಪ್ರತಿನಿಧಿಗಳನ್ನು ಮುಂದಿನ ಸಭೆಗಳಲ್ಲಿ ಕೋ- ಆಪ್ಟ್ ಮಾಡಲು ತೀರ್ಮಾನಿಸಲಾಯಿತು.

ವೇದಿಕೆ ಸಂಚಾಲಕರನ್ನಾಗಿ ಎಂ. ಲೋಕಯ್ಯ ಶೆಟ್ಟಿ, ಬಿ. ಮಾಧವ ಮತ್ತು ಎಚ್. ಉಮಾನಾಥ ನಾಯಕ್ ಅವರನ್ನು ಆರಿಸಲಾಯಿತು.

ಆಗಸ್ಟ್ 19 ರ "ಜೈಲ್‌ಭರೋ" ಮತ್ತು ಸೆಪ್ಟೆಂಬರ್ 9ರ ಭಾರತ್ ಬಂದ್ ಕಾರ್ಯಕ್ರಮಗಳನ್ನು ಜಿಲ್ಲೆಯಾದ್ಯಂತ ಸಂಪೂರ್ಣ ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ಶಿವಮೊಗ್ಗ ಜಿಲ್ಲಾ ಪ್ರಾಯೋಜಕ ಸಮಿತಿ ರಚನೆ

ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ಸಭೆ ಜುಲೈ 14 ರಿಂದ ತಿರುಕಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಎಲ್. ರಂಗೇಗೌಡ (ಎಸ್.ಡಬ್ಲ್ಯೂ.ಎಫ್.ಟಿ) ಮಾತನಾಡಿ ಕೇಂದ್ರದ ಕಾಂಗ್ರೆ ಸರ್ಕಾರ ಐ.ಎಂ.ಎಫ್ ಸಾಲದಿಂದ ದೇಶವನ್ನು ಅಮೇರಿಕಾಕ್ಕೆ ಅಡವಿಟ್ಟು ಪರತ್ತುಗಳಿಗೆ ಶರಣಾಗಿ ದೇಶದ ರೈತರು ಕಾರ್ಮಿಕ ವರ್ಗವನ್ನು ತೀರ್ವ ಸಂಕಷ್ಟಕ್ಕೆ ಗುರಿ ಮಾಡಿದೆ ಎಂದರು. ಲಕ್ಷ್ಮಿ ನಾರಾಯಣ (ಎಲ್.ಐ.ಸಿ) ಮಾತನಾಡಿ ಡಂಕೆಲ್ ಪ್ರಸ್ತಾಪಗಳು ಭಾರತದ ಜನತೆಗೆ ಗುಲಾಮಗಿರಿಯ ಸಂಕೇತ, ಇದನ್ನು ತೀರ್ವ ವಾಗಿ ವಿರೋಧಿಸಬೇಕೆಂದರು. ಎಸ್.ಎ. ಗಜೇಂದ್ರ (ಸಿ.ಐ.ಟಿ.ಯು) ಮಾತನಾಡಿ ಸಾರಿಗೆ ಕಾರ್ಮಿಕರಿಗೆ ಹೊಸಕೈಗಾರಿಕೆ ನೀತಿಯಿಂದ ಆಗಿರುವ ದುಷ್ಪರಿಣಾಮ ವಿವರಿಸಿ, ಖಾಸಗಿ ವಲಯಕ್ಕೆ ಪ್ರೋತ್ಸಾಹಿಸಿ ನೀಡಿ ಕಾರ್ಮಿಕರನ್ನು ಬೀದಿ ಪಾಲು ಮಾಡುತ್ತಿರುವುದರನ್ನು ಖಂಡಿಸಿದರು.

ಅಲ್ಲದೇ, ಹಮಾಲಿ, ಸಾರಿಗೆ, ವಿ.ಐ.ಎಸ್.ಎಲ್. (ಎಸ್.ಡಬ್ಲ್ಯೂಎಫ್‌ಟಿ) ಎಂ.ಪಿ.ಎಂ., ಎಂ.ಪಿ.ಎಂ. ಪಾಲಿಸ್ಟ್ ವಾಚರ್ಸ್, ಎಸ್.ಎಫ್.ಐ. ಡಿ.ವೈ.ಎಫ್.ಐ ಜನವಾದಿ ಮಹಿಳಾ ಸಂಘಟನೆ ಬ್ಯಾಂಕ್ ಎಲ್ಐಸಿ, ಕೆ.ಇ.ಬಿ., ಎ.ಐ.ಕೆ.ಎಸ್. ಪೇಪರ್ ಪ್ಯಾಕೇಜ್, ಮುಂತಾದ ಸಂಘಟನೆಗಳ ಪ್ರತಿನಿಧಿಗಳು ಮಾತನಾಡಿ, ಸೆಪ್ಟೆಂಬರ್ 9ರ ಅಖಿಲ ಭಾರ ಮುಷ್ಕರವನ್ನು ಬೆಂಬಲಿಸಿದರು.

ಸಭೆಯಲ್ಲಿ ಜಿಲ್ಲಾ ಪ್ರಾಯೋಜಿಕ ಸಮಿತಿಯನ್ನು ರಚಿಸಲಾಯಿತು.

ಸಂಚಾಲರಕಾಗಿ ಎಸ್.ಬಿ. ಶಿವಶಂಕರ್ ರವರನ್ನು ಆಯ್ಕೆ ಮಾಡಲಾಯಿತು. ಹಾಗೂ ಸಾಮೂಹಿಕ ಸಂಘಟನೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಸಮಿತಿಯ ಸದಸ್ಯರನ್ನಾಗಿ ಆರಿಸಲಾಯಿತು.

ಕೋಮು ಸಾಮರಸ್ಯದ ಆಶಯದೊಂದಿಗೆ ಯುವಜನರಿಗಾಗಿ ಅಖಿಲ ಭಾರತ ಸಾಹಿತ್ಯ ಸ್ಪರ್ಧೆ

1. ಪ್ರಬಂಧ -- ವಿಷಯ

"ಧರ್ಮನಿರಪೇಕ್ಷತೆ ರಕ್ಷಣೆ
ನನ್ನ ಉಜ್ವಲ ಬಾಳಿನ ಉಸಿರು"

2. ಸ್ವತಹ ಬರೆದ ಕವನ : ಕವಿತೆ

ಕೋಮು ಸೌಹಾರ್ದತೆಯನ್ನು ಬೆಸೆಯುವ ಕುರಿತು

ಭಾಷೆ : ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು ಅಥವಾ ಯಾವುದಾದರೂ ಒಂದು ಭಾರತೀಯ ಭಾಷೆಯಲ್ಲಿ

ಕೊನೆಯ ದಿನಾಂಕ : *31-8-1993*

ನಿಬಂಧನೆಗಳು :

1. ಭಾಗವಹಿಸುವವರ ವಯಸ್ಸು -- 40 ಮೀರಕೂಡದು.

2. ಪ್ರಬಂಧ -- 2500 ಶಬ್ದಗಳು ಮೀರದಂತೆ

3. ಕವನ : ಕವಿತೆ -- ಒಂದು ಪುಟದಷ್ಟು

4. ಹಾಳೆಯ ಒಂದೇ ಮಗ್ಗುಲಲ್ಲಿ ಅಂದವಾದ ಕೈ ಬರಹದಲ್ಲಿ ಅಥವಾ ಟೈಪು ಮಾಡಿರಬೇಕು.

5. ಪ್ರವೇಶಧನ : ಒಂದು ರೂ. ನ ಎರಡು ಅಂಚೆ ಚೀಟಿಗಳು.

ವಿಳಾಸ :

ಡಿ.ವೈ.ಎಫ್.ಐ.
ಕರ್ನಾಟಕ ರಾಜ್ಯ ಸಮಿತಿ,
106, ರತನ್ ಮಹಲ್,
ಮಲ್ಲೇಶ್ವರಂ ಸರ್ಕಲ್,
ಬೆಂಗಳೂರು - 560 003.
ದೂರವಾಣಿ : 366830

"ಆಗಸ್ಟ್ 19ರ ಜೈಲ್‌ಭರೋ - ಸೆಪ್ಟೆಂಬರ್ 9ರ ಭಾರತ್ ಬಂದ್‌ನಲ್ಲಿ ಭಾಗವಹಿಸಿ
ಆರ್ಥಿಕ ಸ್ವಾವಲಂಬನೆ, ಕೋಮುಸಾಮರಸ್ಯವನ್ನು ಉಳಿಸಿ"

-- ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆ

ಈಗಾಗಲೇ 'ಐಕ್ಯರಂಗ'ದಲ್ಲಿ ವರದಿಯಾಗಿರುವಂತೆ ಸರ್ಕಾರದ ಆರ್ಥಿಕ ಧೋರಣೆ ಹಾಗೂ ಕೋಮುವಾದವನ್ನು ವಿರೋಧಿಸಿ ಹೋರಾಟ ನಡೆಸಲು ಕಾರ್ಮಿಕರ, ರೈತರ, ಕೃಷಿ ಕೂಲಿಗಾರರ, ವಿದ್ಯಾರ್ಥಿ-ಯುವಜನರ ಮಹಿಳೆಯರ ವಿಜ್ಞಾನಿಗಳ, ವಕೀಲರ, ಸಾಂಸ್ಕೃತಿಕ ರಂಗದ ಮತ್ತು ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡ "ಸರ್ಕಾರದ ಆರ್ಥಿಕ ನೀತಿಯು ಹಾಗೂ ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ವೇದಿಕೆ"ಯ ಕರ್ನಾಟಕ ಘಟಕ ರಚಿಸಲಾಗಿದೆ. ಈ ವೇದಿಕೆ ಸೆಪ್ಟೆಂಬರ್ 9,1993ರ 'ಭಾರತ್‌ಬಂದ್' ನ್ನು ಯಶಸ್ವಿಗೊಳಿಸಲು ಪ್ರಚಾರ ಪ್ರಕ್ಷೋಭೆಯನ್ನು ಸಂಘಟಿಸುವುದು. ಇದರ ಪ್ರಥಮ ಭಾಗವಾಗಿ ಆಗಸ್ಟ್ 19,1993ರ ಬೃಹತ್ 'ಜೈಲ್ ಭರೋ' ಆಂದೋಲನವನ್ನು ನಡೆಸಲಿದೆ. ಎಐಟಿಯುಸಿ, ಸಿಐಟಿಯು, ಎಚ್‌ಎಂಎಸ್., ಯುಟಿಯುಸಿ(ಎಲ್. ಎಸ್) ಬ್ಯಾಂಕ್, ಜೀವವಿಮಾ ನೌಕರರ ಸಂಘಟನೆಗಳು, ಈ ವಿಭಾಗಗಳ ಅಧಿಕಾರಿಗಳು ಸಂಘಟನೆಗಳು, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಸರ್ಕಾರಿ ನೌಕರಲ್ಲದೆ ರೈತ-ಕೃಷಿಕೂಲಿಕಾರ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳಾದ ಎಸ್.ಎಫ್‌ಐ ಐಎಸ್.ಎಫ್ ಮತ್ತಿತರು ಯುವಜನ ಸಂಘಟನೆಗಳಾದ ಡಿ.ವೈ.ಎಫ್‌ಐ, ಎ.ಐ.ವೈ ಎಫ್ , ಎಐಡಿವೈಓ, ಮತ್ತಿತರ ಸಂಘಟನೆಗಳು ಈ ವೇದಿಕೆಯ ಸದಸ್ಯರಾಗಿದ್ದರೆ.

ಆಗಸ್ಟ್ 19ರ ಜೈಲ್‌ಭರೋ ಹಾಗೂ ಸೆಪ್ಟೆಂಬರ್ 9ರ ಭಾರತ್ ಬಂದ್‌ನ ಪೂರ್ವಭಾವಿ ತಯಾರಿಗಾಗಿ ಎಲ್ಲ ಜಿಲ್ಲೆಗಳಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಜಿಲ್ಲಾ ಸಮಾವೇಶಗಳನ್ನು ಸಂಘಟಿಸಲು ಈ ವೇದಿಕೆ ನಿರ್ಧರಿಸಿದೆ.

ಸಮಾಜದ ವಿವಿಧ ವಿಭಾಗಗಳಿಗೆ ಸಂಬಂಧಿಸಿದ 20 ಅಂಶಗಳ ಆಧಾರದಲ್ಲಿ ಈ ವೇದಿಕೆ 'ಜೈಲ್ ಭರೋ' 'ಭಾರತ್ ಬಂದ್' ನ್ನು ಸಂಘಟಿಸುತ್ತಿದೆ. ದೇಶದ ಹಾಗೂ ಆಯಾಯ ವಿಭಾಗಗಳ ಹಿತವನ್ನು ಕಾಪಾಡುವುದು ದೃಷ್ಟಿಯಿಂದ ಜನತೆಯ ಐಕ್ಯತೆಯನ್ನು ಕಾಪಾಡಲು "ಜೈಲ್ ಭರೋ" ಹಾಗೂ "ಭಾರತ್‌ಬಂದ್" ಆಂದೋಲನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ದೇಶದ ಸ್ವಾವಲಂಬನೆ, ಕೋಮು-ಸಾಮರಸ್ಯವನ್ನು ರಕ್ಷಿಸುವಲ್ಲಿ ಮುಂದಾಗಬೇಕೆಂದು ಕರ್ನಾಟಕದ ಜನತೆಯಲ್ಲಿ ಸಾಮೂಹಿಕ ಸಂಘಟನೆಗಳ ವೇದಿಕೆ' ವಿನಂತಿ ಮಾಡಿಕೊಂಡಿದೆ.

ಐ.ಎಂ.ಎಫ್‌ನ್ನು ಮೆಚ್ಚಿಸಲು ಮತ್ತೊಂದು ವರದಿ
ಕಾನೂನು ನಿಯಮಗಳೇ ಇಲ್ಲದ ಉದ್ದಿಮೆ ರಂಗವನ್ನು ಸೃಷ್ಟಿಸಬೇಕೆನ್ನುವ 'ಗೋ ಸ್ವಾಮಿ ವರದಿ'

-- ಸಿಐಟಿಯು ಟೀಕೆ

ಕೈಗಾರಿಕೆಗಳ ರೋಗಗ್ರಸ್ತತೆಯ ಬಗ್ಗೆ ಪರಿಶೀಲಿಸಲೆಂದು ಭಾರತ ಸರಕಾರ ನೇಮಿಸಿದ ಗೋಸ್ವಾಮಿ ಸಮಿತಿ ಹಣಕಾಸು ಮಂತ್ರಿಗಳಿಗೆ ತನ್ನ ವರದಿ ಸಲ್ಲಿಸಿದ್ದು ಇದು ಕಾರ್ಮಿಕರನ್ನು ಬೀದಿಗೆ ಸೆಯುವ 'ಎಕ್ಸಿಟ್ ಪಾಲಿಸಿ'ಗೆ ತಥಾಸ್ತು ಎಂದಿದೆ, ಕೈಗಾರಿಕಾ ವಿವಾದ ಕಾನೂನಿನ 25(ಎಸ್) ಹಾಗೂ 25 (ಓ) ಅಂಶಗಳನ್ನು ತೆಗೆದುಹಾಕಬೇಕು ಎಂದು ಶಿಫಾರಸು ಮಾಡುವ ಮೂಲಕ ಈ ಸಮಿತಿ ಒಂದು ಉದ್ದಿಮೆಯನ್ನು ಮುಚ್ಚುವಲ್ಲಿ ರಾಜ್ಯ ಸರಕಾರಗಳ ಪರವಾನಿಗೆಯ ಅಗತ್ಯವೇ ಇಲ್ಲ ಎಂದಿದೆ. ಇದು, ಐಎಂಎಫ್ -ವಿಶ್ವ ಬ್ಯಾಂಕ್‌ನ 'ಚರಣ ಕಮಲ'ಗಳಲ್ಲಿ ತಲೆಯಿಟ್ಟಿರುವ ವರದಿ ಯೆಂಬುದು ಸುಸ್ಪಷ್ಟ ಎಂದು ಸಿಐಟಿಯುವಿನ ಕೇಂದ್ರ ಸೆಕ್ರೆಟಾರಿಯೆಟ್ ಈ ಬಗ್ಗೆ ತನ್ನ ಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಈ ವರದಿ ಜಾರಿಯಾದರೆ ಉದ್ದಿಮೆ ರಂಗದಲ್ಲಿ ಕಾನೂನು-ನಿಯಮಗಳೆಂಬುದೇ ಇರುವುದಿಲ್ಲ. ಗುತ್ತೇದಾರಿಗಳು, ವಿದೇಶೀ ಕಂಪೆನಿಗಳು ಮಾಡಿದ್ದೇ ಆಟ, ಹೇಳಿದ್ದೇ ಕಾನೂನು ಎಂಬ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ರೋಗಗ್ರಸ್ತ ಕೈಗಾರಿಕಾ ಕಂಪೆನಿಗಳ ಶಾಸನದಲ್ಲಿ, ರೋಗಗ್ರಸ್ತ ಘಟಕಗಳಲ್ಲಿ ಮತ್ತೆ ಜೀವತುಂಬುವ ಬಗ್ಗೆ ಪರೀಶೀಲಿಸಬೇಕಾಗಿದ್ದ ಬಿ.ಐ.ಎಫ್.ಆರ್.ನ ಕಾರ್ಯ ವ್ಯವಸ್ಥೆಯಲ್ಲಿ ನಗರ ಭೂಮಿತಿ ಕಾನೂನಿನಲ್ಲಿ ಈ ಸಮಿತಿ ಸೂಚಿಸಿರುವ ತಿದ್ದುಪಡಿಗಳು, ರೋಗಗ್ರಸ್ತ ಘಟಕಗಳನ್ನು ಬೇಗನೇ ಮುಚ್ಚಲು ತ್ವರಿತ ನ್ಯಾಯ ಮಂಡಳಿಗಳ ರಚಿಸುವ ಶಿಫಾರಸುಗಳ ಮೂಲಕ ಇಂತಹ ಪ್ರಜಾಪ್ರಭುತ್ವ-ವಿರೋಧಿ, ಕಾನೂನು ಬಾಹಿರ ಸರ್ವಾಧಿಕಾರೀ ಸನ್ನಿವೇಶವನ್ನು ಜನಗಳ ಮೇಲೆ ಹೇರುತ್ತಿದೆ. ಎಂದು ಖಂಡಿಸಿರುವ ಸಿಐಟಿಯು ಇದು ರಾಷ್ಟ್ರೀಯ ಆರ್ಥಿಕವನ್ನಷ್ಟೇ ಅಲ್ಲ, ರಾಷ್ಟ್ರೀಯ ಸಾರ್ವಭೌಮತ್ವವನ್ನೂ ಬುಡಮೇಲು ಮಾಡುತ್ತದೆ ಎಂದಿದೆ.

ಎಲ್ಲಾ ಕಾರ್ಮಿಕ ಸಂಘಟನೆಗಳು, ಸಾಮೂಹಿಕ ಸಂಘಟನೆಗಳು ಇದನ್ನು ಬಲವಾಗಿ ಪ್ರತಿರೋಧಿಸಬೇಕು, ಇಂತಹ ಆರ್ಥಿಕ ನೀತಿಗಳ ವಿರುದ್ಧ ಹಮ್ಮಿಕೊಂಡಿರುವ ಸೆಪ್ಟೆಂಬರ್ 9 ಭಾರತ್ ಬಂದ್ ಹಾಗೂ ಕೈಕಾರಿಕಾ ಮುಷ್ಕರಕ್ಕೆ ಭರದ ಸಿದ್ಧತೆ ನಡೆಸಬೇಕು ಎಂದು ಕರೆ ನೀಡಿದೆ.

ಬ್ಯಾಂಕುಗಳು ಶ್ರೀಮಂತರ ಸೇವೆಯಲ್ಲಿ ಮೀಸಲಿರಬೇಕೆ?
"-ಬ್ಯಾಂಕಿಂಗ್ ಉದ್ಯಮ - 2000 ಇಸವಿಯಲ್ಲಿ"

ವಿಚಾರ ಸಂಕಿರಣದ ಪ್ರಶ್ನೆ

ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ನಿನ ಬೆಳ್ಳಿಹಬ್ಬದ ಆಚರಣೆಯ ಸಂಬಂಧದಲ್ಲಿ ಈ ವಿಚಾರ ಸಂಕಿರಣವನ್ನು ಬೆಂಗಳೂರಿನಲ್ಲಿ ಜುಲೈ 24 ರಂದು ಏರ್ಪಡಿಸಲಾಗಿತ್ತು. ದೇಶದ ಖ್ಯಾತ ಅರ್ಥ ಶಾಸ್ತ್ರಜ್ಞರಾದ ಡಾ. ಅಶೋಕಮಿತ್ರ, ಡಾ. ಎಂ.ಕೆ. ಪಂಧೆ, ಸಂಸತ್ ಸದಸ್ಯ ಆಶೀಸ್ ಸೇನ್, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಗೋಡಬೋಳೆ ವಿಚಾರ ಸಂಕಿರಣವಲ್ಲಿ ಭಾಗವಹಿಸಿದ್ದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಡಾ. ಎಂ.ಕೆ. ಪಂಧೆ ವಿಷಯವನ್ನು ಪ್ರಸ್ತಾಪಿಸುತ್ತ ಬ್ಯಾಂಕಿಂಗ್ ಉದ್ಯಮಕ್ಕೆ ಒಂದು ಸಾಮಾಜಿಕ ಗುರಿ ಇರಬೇಡವೆ ಅಥವಾ ಈ ಉದ್ಯಮ ಬರೀ ಶ್ರೀಮಂತರಿಗಾಗಿ, ಲಾಭ ಬಡುಕತನದಿಂದ ಕೆಲಸ ಮಾಡಬೇಕೆ ಎಂಬುದು ಇಂದಿನ ಪ್ರಶ್ನೆ ಎಂದು ವಿಷಯಕ್ಕೆ ತಳಹದಿ ಹಾಕಿ ಕೊಟ್ಟರು

ಬ್ಯಾಂಕಿಂಗ್ ಉದ್ಯಮ ಭಾರತದಲ್ಲಿ ಹೇಗೆ ಬೆಳೆದು ಬಂದಿತೆಂಬುದನ್ನು ಬಹಳ ಸರಳವಾಗಿ ವಿವರಿಸಿದ ಡಾ. ಅಶೋಕ ಮಿತ್ರ ಈಗ ಬ್ಯಾಂಕಿಂಗ್ ಉದ್ಯಮದಲ್ಲಿ ಪ್ರತಿಕ್ರಾಂತಿ ನಡೆಯುತ್ತಿದೆ ಎಂದರು. ಇದರ ಪರಿಣಾಮವಾಗಿ ಬಡವರನ್ನು ಹಿಂಡಲಾಗುತ್ತಿದೆ ಎಂದು ವಿವರಿಸಿದರು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಡೆದ ಶೇರು ಹಗರಣಕ್ಕೆ ಕಾರಣವೇ ವಿದೇಶೀ ಮತ್ತು ಖಾಸಗೀ ವಲಯದ ಬ್ಯಾಂಕುಗಳು ಮತ್ತು ರಾಷ್ಟ್ರೀಕತ ಬ್ಯಾಂಕುಗಳ ಮೇಲೆ ಸರಿಯಾದ ಹತೋಟಿ ಇಲ್ಲದಿದ್ದದ್ದು ಎಂದು ಹೇಳಿದ ಅವರು ಈ ವಿದೇಶೀ ಬ್ಯಾಂಕುಗಳು ಕ್ರಿಮಿನಲ್ ಗುನ್ಹೆದಾರರು ಎಂದು ಹೇಳಿದರೂ 2,000 ಸಾವಿರದ ಇಸವಿಯ ಹೊತ್ತಿಗೆ ವರಮಾನ ಸಮಾಜದ ಒಳಗೆ ತೂರಬೇಕು ಬಡವರಿಗೂ ಉದ್ಯೋಗ ಅನ್ನ ಸಿಗುವಂತಾಗಬೇಕು. ಅಂತಹ ಬ್ಯಾಂಕಿಂಗ್ ಉದ್ಯಮದ ಅವಶ್ಯಕತೆ ನಮ್ಮ ದೇಶಕ್ಕೆ ಇದೆ ಎಂದರು ಅವರು.

ಬ್ಯಾಂಕುಗಳು ರಾಷ್ಟ್ರೀಕರಣಗೊಂಡರೂ ಹೇಗೆ ಅವು ಉದ್ಯಮಪತಿಗಳ ಮತ್ತು ಬಂಡವಾಳಿಗರ ಹತೋಟಿಯಲ್ಲೇ ಇಳಿದಿವೆ ಎಂಬುದನ್ನು ಸಂಸತ್ ಸದಸ್ಯ ಹಾಗೂ ಬಿ.ಇ.ಎಫ್.ಐ.ನ ಪ್ರಧಾನ ಕಾರ್ಯದರ್ಶಿ ಶ್ರೀ ಆಶೀಸ್ ಸೇನ್ ವಿವರಿಸಿದರು.

ಲಾಭದ ಭೂತವನ್ನು ಬೆನ್ನಟ್ಟಿ ಬ್ಯಾಂಕುಗಳು ಹೊರಟಿವೆ ಎಂದ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘದ ಆರ್. ಎನ್. ಗೋಡಬೋಳೆ 'ಲಾಭ' ಎಂಬುದನ್ನು ಅದರ ಮೂಲದಲ್ಲೆ ವಿತರಿಸಬಹುದು. ಅದನ್ನು ಕ್ರೋಢೀಕರಿಸಿ ಕೆಲವೇ ಕೆಲವರ ಹಿತಕ್ಕೆ ಬಳಸಬೇಕಾದುದಿಲ್ಲ ಎಂದರು.

ಬ್ಯಾಂಕುಗಳ ಮೇಲೆ ಉದ್ಯಮಪತಿಗಳ ಹಿಡಿತದ ಬಗ್ಗೆ ಮಾತನಾಡಿದ ಅವರು ಸರ್ಕಾರ ಇವರೊಂದಿಗೆ ಪೂರ್ಣ ಶಾಮೀಲಾಗಿದೆ ಎಂದರು. ಬ್ಯಾಂಕುಗಳಿಂದ ಹಣ ಸಾಲಪಡೆದು ರೋಗ ಪೀಡಿತವಾದ ಕಂಪನಿಗಳ ಮರುವಸತಿಗೆ ಇರುವ ಮಂಡಳಿ ಮುಂದೆ 1500 ಮೊಕದ್ದಮೆಗಳಿವೆಯಂತೆ. ಹತ್ತು ಹುದ್ದೆಗಳಿದ್ದರೂ ಐವರೇ ಸದಸ್ಯರಿರುವ ಈ ಮಂಡಳಿ ವರ್ಷಕ್ಕೆ ಇಂದೇ 200 ಮೊಕದ್ದಮೆಯನ್ನು ಪರಿಹರಿಸುತ್ತದೆಂತೆ. ಅಂದರೆ ಎಲ್ಲ ಮೊಕದ್ದಮೆಗಳನ್ನು ಪರಿಹರಿಸಲು 1500 ವರ್ಷಗಳು ಬೇಕು!! ಇದು ಸರ್ಕಾರದ ನಿಜವಾದ ಕಳಕಳಿ ಎಲ್ಲಿದೆ ಎಂಬುದನ್ನು ತೋರುತ್ತದೆ ಎಂದರು ಅವರು.

ಉದ್ಯಮಗಳು ಮಾತ್ರ ರೋಗಪಿಡತವಾಗುತ್ತವೆ ಆದರೆ ಉದ್ಯಮಿಗಳು ಅತ್ಯಂತ ಆರೋಗ್ಯವಂತರಾಗಿರುವುದು ಹೇಗೆ ಸಾಧ್ಯ ಎಂದು ಅವರು ಪ್ರಶ್ನಿಸಿದರು.

ಕೆನರಾ ಬ್ಯಾಂಕಿನ ಸ್ಟಾಫ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ನಾಯಕ್ ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ಅಸಂಘಟಿತ ಕಾರ್ಮಿಕರ
ಮೊದಲ ಮಹಾ ಮುಷ್ಕರ

ಐ.ಎನ್.ಎಸ್. ವರದಿ

ಅಸಂಘಟಿತ ವಲಯದ ಕಾರ್ಮಿಕರೂ ತಮ್ಮ ಶಕ್ತಿ ಪ್ರದರ್ಶನ ನಡೆಸಿದರು! ಹೌದು, ಈ ಬಾರಿನು ಜುಲೈ 14ರಂದು. ಈ ವಿಭಾಗದವರು ಅಂದು ನಡೆಸಿದ ದೇಶವ್ಯಾಪಿ ಪ್ರಥಮ ಮುಷ್ಕರಕ್ಕೆ ಭಾರೀ ಪ್ರತಿಕ್ರಿಯೆ ಸಿಕ್ಕಿತು. ಪಶ್ಚಿಮಬಂಗಾಳ ಮತ್ತು ಕೇರಳದಲ್ಲಿ ಅಸಂಘಟಿತ ವಲಯಗಳಲ್ಲಿ ಮುಷ್ಕರ ಪೂರ್ಣ ಪ್ರಮಾಣವಲ್ಲಿ ನಡೆಯಿತು.

ದೇಶದ ಆರ್ಥಿಕ ರಥ ಮುನ್ನುಗ್ಗುವಲ್ಲಿ ತಮ್ಮದೇ ಆದ ಕೊಡುಗೆ ಕೊಡುವ ಅಸಂಘಟಿತ ಕಾರ್ಮಿಕರ ಬವಣೆ ಮಾತ್ರ ಅಪಾರ. ಅವುಗಳಿಗೆ ಕಿವಿಗೊಡುವವರು ವಿರಳ. ಅವರ ಆರ್ತನಾದ ಇದುವರೆಗೆ ಅರಣ್ಯರೋಧನವಾಗಿತ್ತು. ಈ ವಿಭಾಗಗಳು ಇದುವರೆಗೆ ಅರಣ್ಯ ಕಾನೂನನ್ನು ಅನುಭವಿಸುತ್ತಿವೆ. ಆ ಪರಿಸ್ಥಿತಿ ಇನ್ನು ಕೊನೆಗೊಂಡಿಲ್ಲ. ಆದರೆ ಕೊನೆಗಾಣಿಸುವತ್ತ ದೊಡ್ಡ ಹೆಜ್ಜೆಯಿಟ್ಟಿವೆ, ಕಳೆದ ತಿಂಗಳ 14 ನೇ ತಾರೀಕಿನ ಮುಷ್ಕರ ಮೂಲಕ.

ಮುಷ್ಕರ ಮುಂದಿಟ್ಟ ಬೇಡಿಕೆಗಳು ಹಾಗೂ ಅದರ ಈಡೇರಿಕೆಗೆ ಆಗ್ರಹಿಸಿ ನಡೆದ ವಿವಿಧ ಕಾರ್ಯಕ್ರಮಗಳ ಕುರಿತು 'ಐಕ್ಯರಂಗ' ಈಗಾಗಲೇ ಹಲವು ಲೇಖನ- ವರದಿಗಳನ್ನು ಪ್ರಕಟಿಸಿದೆ. ಇಲ್ಲಿ ಅವನ್ನು ಮತ್ತೇ ಪ್ರಸ್ತಾವಿಸದೆ ಜುಲೈ 14 ರ ಮುಷ್ಕರಕ್ಕೆ ವಿವಿಧ ರಾಜ್ಯಗಳಲ್ಲಿ ದೊರೆತ ಪ್ರತಿಕ್ರಿಯೆಯನ್ನು ಕೊಡಲಾಗಿದೆ.

ಪಶ್ಚಿಮಬಂಗಾಳ, ದೆಹಲಿ, ಕೇರಳ, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ಪಂಜಾಬ್ ಸಹಿತ ಅನೇಕ ರಾಜ್ಯಗಳಲ್ಲಿ ವ್ಯಾಪಕ ಹಾಗೂ ಪೂರ್ಣ ಪ್ರಮಾಣದ ಮುಷ್ಕರಗಳು ನಡೆದಿವೆಯೆಂದು ಸಿಐಟಿಯು ಕೇಂದ್ರ ಕಚೇರಿಯನ್ನು ತಲುಪಿದ ವರದಿಗಳು ತಿಳಿಸಿವೆ. ಹೆಚ್ಚಿನೆಲ್ಲಾ ಕಡೆ ಸಿಐಟಿಯು ಅಲ್ಲದೆ ಇತರ ಕಾರ್ಮಿಕ ಸಂಘಟನೆಗಳು ಕೂಡಾ ಮುಷ್ಕರಕ್ಕೆ ಸಕ್ರಿಯ ಬೆಂಬಲವನ್ನು ನೀಡಿದ್ದವು.

ರಾಷ್ಟ್ರದ ರಾಜಧಾನಿ ದೆಹಲಿ ಯ ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರಕ್ಕೆ ಸಿಕ್ಕ ಪ್ರತಿಕ್ರಿಯೆ ಪ್ರೋತ್ಸಾಹದಾಯಕವಾಗಿತ್ತು. ಮುಷ್ಕರ ಶಹಾದರಾದಲ್ಲಿ ಶೇ. 95, ಸೂರಜ್‌ಪುರದಲ್ಲಿ ಶೇ. 85, ಜಿ.ಟಿ. ರೋಡ್‌ನಲ್ಲಿ ಶೇ. 75, ಓಖ್ಲಾದಲ್ಲಿ ಶೇ. 70, ಹಿಬಾ ಬಾದ್‌ನಲ್ಲಿ ಶೇ. 95 ಮತ್ತು ನೊಯ್ಡಾದಲ್ಲಿ ಶೇ. 65 ಯಶಸ್ವಿಯಾಯಿತು.

ಮಹಾರಾಷ್ ರಸ್ತೆ, ಬುಲಂದ ಶಹರ ರಸ್ತೆ ಪ್ರದೇಶದಲ್ಲಿ ಇದೇ ಪ್ರಥಮ ಬಾರಿಗೆ ಮುಷ್ಕರ ನಡೆಯಿತು. ಶೇ. 75 ರಷ್ಟು ಯಶ ಸಿಕ್ಕಿತು. ಅನೇಕ ಸ್ಥಳಗಳಲ್ಲಿ ಕಾರ್ಮಿಕರು ಬೃಹತ್ ಮೆರವಣಿಗೆಗಳನ್ನು ನಡೆಸಿದರು. ಮೆರವಣಿಗೆಗಳನ್ನು ನಿಲ್ಲಿಸಲು ಪೋಲೀಸರು ನಡೆಸಿದ ಪ್ರಯತ್ನಗಳು ಫಲಕಾರಿಯಾಗಲಿಲ್ಲ.

ಅಸಂಘಟಿತ ವಲಯದ ವಿವಿಧ ಭಾಗಗಳಿಗೆ ಸೇರಿದ ಸಾವಿರಾರು ಕಾರ್ಮಿಕರು **ಬಿಹಾರ**ದಲ್ಲಿ ಮುಷ್ಕರ ನಡೆಸಿದರೆಂದು ಪಾಟ್ನಾದಿಂದ ಬಂದಿರುವ ವರದಿ ತಿಳಿಸಿದೆ.

ಪಶ್ಚಿಮ ಬಂಗಾಳರಾಜ್ಯದಲ್ಲಿ ಅಸಂಘಟಿತ ವಲಯದ ಸುಮಾರು 50 ಲಕ್ಷ ಕಾರ್ಮಿಕರು ಹರತಾಳದಲ್ಲಿ ಭಾಗವಹಿಸಿದ್ದರೆಂದು ಕಲ್ಕತ್ತದಿಂದ ಐ.ಎನ್.ಎನ್. ವರದಿ ಮಾಡಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮುಷ್ಕರ ಯಶಸ್ವಿಯಾಯಿತು.

ತಮಿಳುನಾಡುನಲ್ಲಿ ಕೈಮಗ್ಗ, ವಿದ್ಯುತ್ ಮಗ್ಗ, ಬೀಡಿ, ಗೇರು ನಿರ್ಮಾಣ, ಖಾದಿ ಮತ್ತು ಗ್ರಾಮ ಕೈಗಾರಿಕೆಗಳು ಮೊದಲಾದವು ಸೇರಿದಂತೆ ಅಸಂಘಟಿತ ರಂಗದ ಸುಮಾರು ಒಂದು ಲಕ್ಷ ದುಡಿಮೆಗಾರರು 14ರ ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಮದ್ರಾಸಿನಲ್ಲಿ ಕಾರ್ಮಿಕರು ರಾಜ್ಯ ಸರಕಾರದ ಕಾರ್ಯಾಲಯಕ್ಕೆ ಮೆರವಣಿಗೆಯಲ್ಲಿ ತೆರಳಿ ಮನವಿಯೊಂದನ್ನು ಅರ್ಪಿಸಿದರು. ಕನ್ಯಾಕುಮಾರಿಯಲ್ಲಿ ಮಹಿಳೆಯರೇ ಹೆಚ್ಚಾಗಿದ್ದ ಗೇರು ಕಾರ್ಮಿಕರು ಸತ್ಯಾಗ್ರಹ ನಡೆಸಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಮಿಕರು ಮೆರವಣಿಗೆ ಸಭೆಗಳನ್ನು ನಡೆಸಿದರು.

ದೇಶದ ರಾಜಕೀಯ ಗತಿಯನ್ನೇ ಏರುಪೇರು ಮಾಡುವ ರಾಜ್ಯವೆನ್ನಲಾಗುವ **ಉತ್ತರ ಪ್ರದೇಶ**ದಲ್ಲಿ ಚರ್ಮೋದ್ಯಮ, ರಾಸಾಯನಿಕಗಳು, ನಿರ್ಮಾಣ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು ಮೊದಲಾದ ವಿಭಾಗಗಳ ಜನರು ಉತ್ಸಾಹದಿಂದ ಮುಷ್ಕರದಲ್ಲಿ ಭಾಗವಹಿಸಿದರು. ಕಾನ್ಪುರ, ವಾರಾಣಾಸಿ, ಸೋನಭದ್ರ, ಜಪ್ಪನಪುರ, ಡೆಹ್ರಾಡೂನ್, ಶಹರನಪುರ ಮೊದಲಾದಕಡೆಗಳಿಂದ ಮುಷ್ಕರ ವರದಿಗಳು ಬಂದಿವೆ.

ಹರ್ಯಾಣಾದಲ್ಲಿ ಮುಷ್ಕರಕ್ಕೆ ಶೇ. 70 ಯಶಸ್ಸು ಸಿಕ್ಕಿದೆ. ಫರೀದಾಬಾದ್, ಸೋನೆಪತ್, ಹಿಸ್ಸಾರ್, ಸಿರ್ಸಾ ಮತ್ತು ದುರುಹೆರಾ ಮೊದಲಾದ ಕೈಗಾರಿಕಾ ಪಟ್ಟಣಗಳಲ್ಲಿ ಕಾರ್ಮಿಕರು ದೊಡ್ಡ ಪ್ರಮಾಣವಲ್ಲಿ ಭಾಗವಹಿಸಿದ್ದರು. ಹಿಸ್ಸಾರ್‌ನಲ್ಲಿ ತೋಟ ಕಾರ್ಮಿಕರು ಮತ್ತು ರಾಜ್ಯಾದ್ಯಂತ ಸಫಾಯಿ ಕಾರ್ಮಿಕರು (ಜಾಡಮಾಲಿಗಳು) ಕೂಡ ಮುಷ್ಕರಕ್ಕೆ ಬೆಂಬಲ ನೀಡಿ ಭಾಗವಹಿಸಿದ್ದರು.

ಅಭಿನಂದನೆ

ಅಸಂಘಟಿತ ವಲಯದ ಕಾರ್ಮಿಕರ ಪ್ರಥಮ ದೇಶಾದ್ಯಂತ ಮುಷ್ಕರದಲ್ಲಿ ಪಾಲ್ಗೊಂಡ ಕಾರ್ಮಿಕರನ್ನು ಸಿ.ಐ.ಟಿ.ಯು. ಅಭಿನಂದಿಸಿದೆ.

ಸರಕಾರಕ್ಕೆ ಪದೇ ಪದೇ ಮನವಿಗಳನ್ನು ಅರ್ಪಿಸಿದರೂ ಹಾಗೂ ವಿವಿಧ ಕೈಗಾರಿಕೆಗಳಲ್ಲಿ ಪ್ರತ್ಯೇಕವಾಗಿ ಮುಷ್ಕರಗಳನ್ನು ನಡೆಸಿದರೂ ಸರಕಾರ ಅಸಂಘಟಿತ ವಲಯದ ದುಡಿಮೆಗಾರರ ಬೇಡಿಕೆಗಳನ್ನು ಕಡೆಗಣಿಸಿತ್ತು. ಅಷ್ಟು ಮಾತ್ರವಲ್ಲದೆ, ಅಸಂಘಟಿತ ವಲಯದ ಕಾರ್ಮಿಕರ ಕನಿಷ್ಟ ಕೂಲಿ ಬಡತನ ರೇಖೆಯದ್ದಕ್ಕಿಂತ ಕಡಿಮೆ ಇರುವುದಿಲ್ಲ ಎಂಬ ಭಾರತೀಯ ಕಾರ್ಮಿಕ ಸಮ್ಮೇಳನ ಆಶ್ವಾಸನೆಯನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ ಎಂಬ ಅಂಶಗಳತ್ತ ಸಿಟಿಯು ಗಮನ ಸೆಳೆದಿದೆ.

ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳಿಂದಾಗಿ ಕೈಗಾರಿಕೆಗಳು ಮುಚ್ಚಿರುವುದರಿಂದ ಈ ಕಾರ್ಮಿಕರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಖಾಸಗಿ ಗುತ್ತೇದಾರರಿಗೆ ಹಾಗೂ ಬಹುರಾಷ್ಟ್ರೀಯರಿಗೆ ಇನ್ನಷ್ಟು ಲಾಭ ಮಾಡಿಕೊಡಲಿಕ್ಕಾಗಿ ಸಣ್ಣ ಪ್ರಮಾಣದ ವಲಯದ ಕಾರ್ಮಿಕರನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಗಿಡಲು ಕೂಡ ಭಾರತ ಸರಕಾರ ಮುಂದಾಗುತ್ತಿದೆ ಎಂದು ಈಗಾಗಲೇ ಸಂಶಯ ವ್ಯಕ್ತಪಡಿಸಿರುವ ಸಿಐಟಿಯು, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರದ ಮೇಲೆ ಒತ್ತಡ ತರಲು ಈ ಕಾರ್ಮಿಕರು ಮುಷ್ಕರ ನಡೆಸುವುದು ಅಗತ್ಯವಾಯಿತು. ಎಂದು ಹೇಳಿದೆ.

ಇದುವರೆಗೆ ಅಸಂಘಟಿತರು ಯಾವುದೇ ಅಲಕ್ಷಿತರೂ ಆದ ದುಡಿಮೆಗಾರರ ಒಂದು ವಿಭಾಗ ಸಂಘಟಿತವಾಗಿ ಹೋರಾಟದ ಕಣಕ್ಕೆ ಧುಮುಕಿದ್ದು ಕೇಂದ್ರ- ರಾಜ್ಯಸರಕಾರಗಳ ಕಣ್ಣನ್ನು ತೆರೆಸುವಲ್ಲಿ ಯಶಸ್ವಿಯಾಯಿದೀತೆಂದು ಆಶಿಸಲಾಗಿದೆ.

ಕಾಂಗ್ರೆ ಆರ್ಥಿಕ ನೀತಿ ಮತ್ತು
ಮತೀಯ ಭೀತಿ ಸೋಲಿಸಲು ಮುಂದಾಗಿ

-- ಕಾಂ. ಸೂರಿ

ನರಸಿಂಹರಾವ್ ಸರಕಾರದ ಜನವಿರೋಧಿ ಆರ್ಥಿಕ ನೀತಿಯನ್ನು ಬಿಜೆಪಿಯ ಮತೀಯ ಪ್ರಚಾರವನ್ನು ಅದರಿಂದಾಗಬಹುದಾದ ಅಪಾಯಗಳನ್ನು ಸೋಲಿಸಲು ರೈತ ಕಾರ್ಮಿಕರೂ ಯುವಜನ ವಿದ್ಯಾರ್ಥಿಗಳ ಐಕ್ಯ ಹೋರಾಟ ನಡೆಸಬೇಕೆಂದೂ ಅದರ ಮೂಲಕ ದೇಶದ ಐಕ್ಯತೆ-ಸಮಗ್ರತೆ ಉಳಿಸಬೇಕೆಂದೂ ಸಿಐಟಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಕರೆ ನೀಡಿದರು. ದಿ. 25 ರಂದು ಕೇಂದ್ರ ಸರಕಾರ ಆರ್ಥಿಕ ನೀತಿಯ ಮತ್ತು ಮತೀಯವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ಮಂಚದ ನೇತೃತ್ವದಲ್ಲಿ ಬಿಜಾಪುರ ಜಿಲ್ಲಾ ಸಮಿತಿ ಏರ್ಪಡಿಸಿದ ಸಮಾವೇಶದಲ್ಲಿ ಅವರು ಉದ್ಘಾಟನಾ ಭಾಷಣ ಮಾಡುತ್ತಿದ್ದರು. ರೈತರಿಗೆ ಭೂಮಿ ಸಿಗುತ್ತಿಲ್ಲ ಕೃಷಿ ಕಾರ್ಮಿಕರಿಗೆ ಸರಿಯಾದ ಕನಿಷ್ಠ ಕೂಲಿ ನಿರ್ಧರಿಸಿಲ್ಲ ಕಾರ್ಖಾನೆಗಳು ಮುಚ್ಚಲ್ಪಟ್ಟು ನಿರುದ್ಯೋಗಿಗಳ ಸೈನ್ಯ ಬೆಳೆಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನರಸಿಂಹರಾವ್ ಸರಕಾರ ಜನಪರ ನೀತಿ ಅನುಸರಿಸಿ ಇವುಗಳಿಗೆ ಪರಿಹಾರ ಒದಗಿಸದೆ, ಐ.ಎಂ.ಎಫ್ ವಿಶ್ವಬ್ಯಾಂಕ್ ಕೈಯೊಡ್ಡಿ ಅವರ ಕರಾರುಗಳಿಗೆ ಗಮಣಿದು ದೇಶದ ಆರ್ಥಿಕತೆಗೆ ಅಪಾಯ ತಂದೊಡ್ಡಿದ್ದಾರೆಂದು ಸೂರಿಯವರು ಎಚ್ಚರಿಸಿದರು. ಇಂತ ಪರಿಸ್ಥಿತಿಯಲ್ಲಿ ಬಿಜೆಪಿ, ಆರ್.ಎಸ್.ಎಸ್.ನಂಥ ಮತೀಯ ಶಕ್ತಿಗಳು ಜನರ ಅಸಮಾಧಾನವನ್ನುಪಯೋಗ ಮಾಡಿಕೊಂಡು ರಾಮ ಹೆಸರಿನಲ್ಲಿ ಅಧಿಕಾರ ನಡೆಸುವ ಹೊಂಚು ಹಾಕುತ್ತಿದ್ದಾರೆ. ಮತೀಯ ಭಾವನೆಗಳನ್ನು ಕೆರಳಿಸುತ್ತಿದ್ದಾರೆ. ಆದ್ದರಿಂದ ಆರ್.ಎಸ್.ಎಸ್. ಜಮಾಯತ್ ಇಸ್ಲಾಮಿಗಳ ವಿರುದ್ಧ ಹೋರಾಡಬೇಕೆಂದು ಸೂರಿಯವರು ಕರೆ ನೀಡುತ್ತಿರುವಾಗ ಹಿಂದುಗಳೇ ಒಂದಾಗಿಯೆಂದೂ ಮುಸಲ್ಮಾನರೇ ಒಂದಾಗಿ ಎಂದು ಹೇಳುವುದು ತಪ್ಪು ಅಂಥ ಪ್ರಚಾರಗಳ ವಿರುದ್ಧ ಜನ ಜಾಗೃತಿಗೊಳಿಸಬೇಕೆಂದು ಸೂರಿಯವರು ಕೇಳಿಕೊಂಡರು. ಡಂಕೆಲ್ ಸೂಚನೆಗಳ ಕುರಿತು ಪ್ರಸ್ತಾಪಿಸಿ ಅದರ ಅಪಾಯವನ್ನು ಎತ್ತಿ ತೋರಿಸಿದರು.

ನರಸಿಂಹರಾವ್ ಸರಕಾರದ ಜನವಿರೋಧಿ ನೀತಿಯನ್ನು ಬದಲಾಯಿಸುವಂತೆ ಒತ್ತಾಯಿಸಲು ಮತೀಯ ಶಕ್ತಿಗಳ ವಿರುದ್ಧ ಜನ ಎದ್ದೇಳುವಂತೆ ಮಾಡಲು ಆಗಸ್ಟ್ 19 ರಂದು "ಜೈಲ್‌ಭರೋ"ಕಾರ್ಯಕ್ರಮವನ್ನು ಸೆಪ್ಟೆಂಬರ್ 9 "ಭಾರತ್ ಬಂದ್"ನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಎ.ಐ.ಟಿ.ಯು.ಸಿ. ಆರ್.ಟಿ. ಹಳ್ಳಿಗಳ, ಡಿ.ಎಸ್.ಎಸ್. ಮುಖಂಡ ರಾಜು ಅಲಗೂರ, ಎಸ್. ಎಫ್.ಐ. ರಾಜ್ಯ ಕಾರ್ಯದರ್ಶಿ ಶಾಂತಾರಾಂ ನಾಯಕ, ಸಿಪಿಐ(ಎಂ) ಮುಖಂಡ ಎಸ್. ಕೆ. ಉಪಾಧ್ಯಾಯ, ಸಿಪಿಐಯ ಎಲ್.ಕೆ. ಚಂಚಲಕರ ಮಹಿಳಾ ಸಂಘಟನೆಯ ಲಕ್ಷ್ಮೀ ದೇಸಾಯಿ ಮೊದಲಾದವರು ಭಾಷಣ ಮಾಡಿದರು. ರೈತ ಸಂಘದ ಮುಖಂಡ ಭೀಮಸೀ ಕಲಾದಗಿ ಅಧ್ಯಕ್ಷತೆ ವಹಿಸಿದ್ದರು.

ಶ್ರೀಧರ ಕುಲಕರ್ಣಿ ಸ್ವಾಗತಿಸಿದರು. ಕೆ.ಎಸ್.ಆರ್.ಟಿ.ಸಿ. ಯೂನಿಯನ್ ಕಾರ್ಯದರ್ಶಿ ಡಿ.ಎಚ್.ಮುಲ್ಲಾ ಅಭಾರ ಮನ್ನಿಸಿದರು.

ಸಮಾವೇಶಕ್ಕೆ ಮುಂಚೆ ಬೀಡಿ ಕೆಲಸಗಾರರು ಹಮಾಲರು ಕೆ.ಎಸ್.ಆರ್.ಟಿ.ಸಿ. ಮೊದಲಾದ ಕಾರ್ಮಿಕರು ಮೆರವಣಿಗೆ ಮಾಡಿದರು. ಸಂಜೆ ಸಾರ್ವಜನಿಕ ಸಭೆ ನಡೆಯಿತು.

ಬೇಡಿಕೆ 1:

ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕುಗಳ ಷರತ್ತುಗಳಿಗೆ ಮಣಿದು ರೂಪಿಸಿರುವ ಆರ್ಥಿಕ ನೀತಿಯನ್ನು ವಿರೋಧಿಸುವುದು ಮತ್ತು ಜನತೆಯ ಆಸಕ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಐ.ಎಂ.ಎಫ್ ಮತ್ತು ವಿಶ್ವ ಬ್ಯಾಂಕ್‌ಗಳ ಷರತ್ತುಗಳನ್ನು ಕಡೆಗಣಿಸಿ ಸ್ವಾವಲಂಬೀ ಆರ್ಥಿಕ ನೀತಿಯನ್ನು ರೂಪಿಸುವುದು.

ದೇಶದ ಆರ್ಥಿಕ ನೀತಿಗಳು ಹೇಗೆ ರೂಪಿಸಲ್ಪಡುತ್ತಿವೆಯೆಂದರೆ ಕಳೆದ ಮೂರು ವರ್ಷಗಳ ಬಜೆಟ್‌ಗಳನ್ನೂ ಸಹ ಅವು ಲೋಕಸಭೆಯಲ್ಲಿ ಮಂಡನೆಯಾಗುವ ಮೊದಲೇ ಐಎಂಎಫ್ ವಿಶ್ವಬ್ಯಾಂಕ್‌ಗಳಿಗೆ ತೋರಿಸಿ ಅವರ ಅನುಮತಿಯನ್ನು ಸರ್ಕಾರ ಪಡೆದಿತ್ತು. ಆದ್ದರಿಂದ ಈ ಎರಡು ಸಾಮ್ರಾಜ್ಯಶಾಹಿ ಸಂಸ್ಥೆಗಳ ಪ್ರತಿಯೊಂದು ಷರತ್ತನ್ನೂ ನಮ್ಮ ಸರ್ಕಾರ ಪೂರೈಸಿದೆ.

ವಿಶ್ವಬ್ಯಾಂಕ್-ಫಂಡ್‌ಗಳ ಅಣತಿಯಂತೆ ಸಹಾಯ ಧನಗಳನ್ನು ತೆಗೆದು ಹಾಕಲಾಗುತ್ತಿವೆ. ಉದ್ಯೋಗಗಳನ್ನು ಕ್ರಮಬದ್ಧವಾಗಿ ಕಡಿಮೆ ಮಾಡಲಾಗುತ್ತಿವೆ. ಸಾರ್ವಜನಿಕ ವಲಯದ ಉದ್ಯಮಗಳನ್ನು ಖಾಸಗೀಕರಣ ಮಾಡಲಾಗುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳ ಹಣ ಹೂಡಿಕೆಯನ್ನು ತೆರೆದ ಬಾಹುಗಳಿಂದ ಸ್ವಾಗತಿಸಲಾಗುತ್ತಿದೆ. ಅವರುಗಳು ಹಾಕುವ ಪ್ರತಿಯೊಂದು ಷರತ್ತನ್ನು ಒಪ್ಪಿಕೊಂಡು ದೇಶದ ಜನತೆಯ ಹಿತಾಸಕ್ತಿಯನ್ನೇ ಗಾಳಿಗೆ ತೂರಿ ಬಿಡಲಾಗಿದೆ. ವಿದೇಶೀ ಬಂಡವಾಳದಾರರಿಗೆ ಎಲ್ಲ ತರಹದ ರಿಯಾಯ್ತಿಗಳನ್ನು ನೀಡಲಾಗುತ್ತಿದೆ. ಉತ್ತಮ ತಂತ್ರಜ್ಞಾನದ ಹೆಸರಿನಲ್ಲಿ ದೇಶೀ ಸಂಶೋಧನೆಗಳಿಗೆ ವಿಜ್ಞಾನ ತಂತ್ರಜ್ಞಾನಗಳಿಗೆ ಇದುವರೆಗೆ ನೀಡಿದ್ದ ಎಲ್ಲ ಬೆಂಬಲಗಳನ್ನು ವಾಪಸ್ಸು ಪಡೆಯಲಾಗುತ್ತಿದೆ.

ಐ.ಎಂ.ಎಫ್ ವಿಶ್ವಬ್ಯಾಂಕ್‌ಗಳ ಅಣತಿಯಂತೆ ನರಸಿಂಹಮ್ ಸಮಿತಿ ವರದಿ, ಚೆಲ್ಲಯ್ಯ ಸಮಿತಿ ವರದಿ ಇವುಗಳನ್ನು ಜಾರಿಗೆ ತರಲಾಗುತ್ತಿದೆ. ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆಯಲಾಗುತ್ತಿದೆ. ಕರಪದ್ಧತಿಯನ್ನೇ ಸುಧಾರಿಸುವ ನೆಪದಲ್ಲಿ ಶ್ರೀಮಂತರಿಗೆ ಕಡಿಮೆ ತೆರಿಗೆ, ಬಡಜನತೆಯ ಮೇಲೆ ಹೆಚ್ಚಿನ ತೆರಿಗೆಗಳನ್ನು ಹೇರಲಾಗುತ್ತಿದೆ.

ಸಾಮ್ರಾಜ್ಯಶಾಹಿಗಳಿಗೆ ಮತ್ತು ವಿದೇಶೀ ಬಂಡವಾಳಿಗರಿಗೆ ಮೂರನೇ ಜಗತ್ತಿನ ಶೋಷಣೆಗೆ ಅನುಕೂಲವಾಗುವಂತೆ ಗ್ಯಾಟ್ ಸಂಸ್ಥೆಯ ಡಂಕೆಲ್ ಮಹಾಶಯ ಮಂಡಿಸಿದ ಪ್ರಸ್ತಾಪಗಳನ್ನು ಮರುಮಾತನಾಡದೆ ಒಪ್ಪಿಕೊಳ್ಳಲಾಗುತ್ತಿದೆ. ದೇಶದ ಸ್ವಾವಲಂಬನೆ ಅಭಿವೃದ್ಧಿ ಜನರ ಹಿತ ಎಲ್ಲವನ್ನು ವಿಶ್ವಬ್ಯಾಂಕ್, ಐ.ಎಂ. ಎಫ್ ಸಾಲಗಳಿಗೆ ಮಾರಿರುವ ಸರ್ಕಾರ ಡಂಕೆಲ್ ಪ್ರಸ್ತಾಪಗಳನ್ನು ಒಪ್ಪಿಕೊಳ್ಳುವುದರಲ್ಲಿ ದೇಶದ ಹಿತ ಅಡಗಿದೆ ಎಂಬ ಪ್ರಚಾರಕ್ಕೆ ತೊಡಗಿದೆ.

ಜನಗಳ ಹಿತ, ದೇಶದ ಹಿತಗಳನ್ನು ಗಾಳಿಗೆ ತೂರಿದ ಆರ್ಥಿಕನೀತಿ

ಕಾರ್ಮಿಕ ಕಾನೂನುಗಳಲ್ಲೇ ಬದಲಾವಣೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಕಾರ್ಮಿಕರನ್ನು ಬೇಕಾಬಿಟ್ಟಿ ಮಡಿಸಿಕೊಳ್ಳುವ ಸ್ಥಿತಿಯನ್ನು ಹಿಂಬಾಗಿಲಿನಿಂದ ಆಗಲೇ ತರಲಾಗಿದೆ. ಉದ್ದಿಮೆಗಳನ್ನು ಮುಚ್ಚಲು ಈಗ ಯಾರ ಅನುಮತಿಯ ಅಗತ್ಯವೂ ಇಲ್ಲ. ಉದ್ದಿಮೆದಾರರು ಉದ್ದಿಮೆಗಳನ್ನು ರೋಗಪೀಡಿತಗೊಳಿಸಲು ಎಲ್ಲ ಅನುಕೂಲಗಳನ್ನೂ ಮಾಡಿಕೊಡಲಾಗಿದೆ ನಿರುದ್ಯೋಗ ಹೆಚ್ಚಿಸಲು ಎಲ್ಲ ಪ್ರೋತ್ಸಾಹ ನೀಡಲಾಗುತ್ತಿದೆ.

ಫೆರಾದಂತಹ ಕಾನೂನುಗಳನ್ನು ನೆಪಮಾತ್ರಕ್ಕೆ ಎಂಬಂತೆ ಮಾಡಿ ಆಮದನ್ನು ಸುಲಭಗೊಳಿಸಲಾಗಿದೆ. ರೂಪಾಯಿಯ ಪೂರ್ಣ ಪರಿವರ್ತನಶೀಲತೆಯ ಹೆಸರಿನಲ್ಲಿ ದೇಶದ ಆರ್ಥಿಕವನ್ನೇ ಡೋಲಾಯಮಾನ ಪರಿಸ್ಥಿತಿಗೆ ತಂದಿಡಲಾಗಿದೆ. ಉದ್ದಿಮೆದಾರರಿಗೆ ಅಬ್ಕಾರಿ ಸುಂಕ ಕಡಿತ ಇತ್ಯಾದಿ ಹಲವು ಹದಿನೆಂಟು ರಿಯಾಯ್ತಿಗಳನ್ನು ನೀಡಲಾಗಿದೆ.

ಇವೆಲ್ಲವಕ್ಕೆ ವಿರುದ್ಧವಾಗಿ ಈ ರಿಯಾಯ್ತಿಗಳ ಎಲ್ಲ ಭಾರವನ್ನು ಬಡಜನತೆಯ ಹೆಗಲಿಗೆ ಹೊರಿಸಲಾಗಿದೆ. ಬೆಲೆಯೇರಿಕೆ ನಿರಂತರವಾಗಿ ಆಗುತ್ತಲೇ ಇರುವಾಗ ಹಣದುಬ್ಬರ ಕಡಿಮೆಯಾಗುತ್ತಿದೆ ಎಂಬ ಸುಳ್ಳು ಪ್ರಚಾರ ಮಾಡಲಾಗುತ್ತಿದೆ.

ಒಟ್ಟಾರೆ ಬಡವರನ್ನು ಇನ್ನೂ ಬಡವರನ್ನಾಗಿ ಶ್ರೀಮಂತರನ್ನು ಇನ್ನೂ ಶ್ರೀಮಂತರನ್ನಾಗಿ, ಶ್ರೀಮಂತರ ಸಂಖ್ಯೆ ಕಡಿಮೆ ಮಾಡಿ ಬಡವರ ಸಂಖ್ಯೆ ಹೆಚ್ಚಿಸುವ ಎಲ್ಲ ತರಹದ ಆರ್ಥಿಕ ನೀತಿಗಳನ್ನು ತರಲಾಗುತ್ತಿದೆ. ಈ ಎಲ್ಲ ನೀತಿಗಳನ್ನು ವಿರೋಧಿಸಿ ಪರ್ಯಾಯ ಆರ್ಥಿಕ ನೀತಿಗೆ ನಾವು ಒತ್ತಾಯಿಸುತ್ತೇವೆ.

"ಹದ್ದು ಮೀರುತ್ತಿದ್ದೀಯೇ
ಕೋಟಿ ಕೋಟಿ ಜನ
"ಭಾರತ್ ಬ

ದೇಶದ ಐಕ್ಯತೆಯನ್ನು, ಜನಸಾಮಾನ್ಯರ ಹಿತಾಸಕ್ತಿಗಳ ಜೀವಿ ವಿಭಾಗಗಳ ಬಲವಾದ ಐಕ್ಯತೆ ಬೆಸೆಯಬೇಕು ಎಂಬ ಮೂರ್ತರೂಪ ದೊರೆಯಿತು. ಅಂದು ದೆಹಲಿಯ ತಲಕಟೋ ಕೂಲಿಗಾರರ, ಸಾರ್ವಜನಿಕ ಉದ್ದಿಮೆಗಳ ಅಧಿಕಾರಿಗಳ, ವಿಜ್ಞಾ ಹೆಚ್ಚು ಪ್ರತಿನಿಧಿಗಳು ಒಂದು ವಿಶಾಲ ಐಕ್ಯವೇದಿಕೆಯ - "ಶೋ ವಿರುದ್ಧ ಸಾಮೂಹಿಕ ಸಂಘಟನೆಗಳ ವೇದಿಕೆ" ಯ ಹಿತಾಸಕ್ತಿಗಳ ರಕ್ಷಣೆಗಾಗಿ ಇದುವರೆಗೆ ಪ್ರತ್ಯೇಕವಾಗಿ ಹೋ ಮೊದಲ ಬಾರಿಗೆ ಒಂದುಗೂಡಿಸಿದ ಹೋರಾಟದ ಕಾರ್ಯಕ್ರ ಹಗಳ, ಮುಖ್ಯವಾಗಿ ದುಡಿಯು ಜನಗಳ 56 ಸಾಮೂಹಿಕ ಸ ವಿಗಳು ಸಮರಾಂಗಣಕ್ಕೆ ಧುಮುಕುನಂತೆ ಪ್ರೇರೇಪಿಸಿರುವ ಜೈ ಕರೆ ನೀಡಿರುವ ಈ ವೇದಿಕೆ ಸರಕಾರದ ಮುಂದಿಟ್ಟ 20 ಬೇಡಿಕೆ ಅದಕ್ಕೆ ದುಡಿಯುವ ಜನಗಳ ಪರಿಹಾರವನ್ನೂ ಸೂಚಿಸಿರುವ ಒಂದೊಂದಾಗಿ ನಮ್ಮ ಓದುಗರ ಮುಂದೆ ಬಿಡಿಸಿಡಲು ಪ್ರಯ

ಬೇಡಿಕೆ 2 :

ಬಹುರಾಷ್ಟ್ರೀಯ ಕಂಪನಿಗಳು ಮತ್ತು ಭಾರತದ ದೊಡ್ಡ ಬಂಡವಾಳಿಗರಿಗೆ ನೀಡಿರುವ ಎಲ್ಲ ರಿಯಾಯ್ತಿಗಳನ್ನು ಹಿಂತೆಗೆದುಕೊಳ್ಳಬೇಕು.

ಬ್ಯಾಂಕ್-ಫಂಡ್ ಆರ್ಥಿಕ ನೀತಿ ಬಹುರಾಷ್ಟ್ರೀಯ ಭಾರತದ ದೊಡ್ಡ ಬಂಡವಾಳಿ ರಿಯಾಯ್ತಿಗಳನ್ನು ನೀಡುತ್ತಾ

1. ಬಹುರಾಷ್ಟ್ರೀಯ/ ಭಾರತೀಯ ಕಂಪನಿಗಳಲ್ಲಿ ಹೊಂದಬಹುದು. ಅಂದರೆ ಅವು ಪೂರ್ಣ ಹತೋಟಿಗೆ ತೆ

2. ವಿದೇಶೀ ಕಂಪ ಹೊರಸಾಗಿಸಬಹುದು.

3. ಫೆರಾ ಕಾನೂ ಗೊಳಿಸಲಾಗಿದೆ. ಇದರಿ ನಿರ್ಬಂಧ ಇಲ್ಲವಾಗಿದೆ.

4. ಯಂತ್ರೋಪಕರ ರೂಪದಲ್ಲೂ ಆಮದು

ಐ.ಎಂ.ಎಫ್ ವಿಶ್ವಬ್ಯಾಂಕ್‌ಗಳ ಒತ್ತಡಕ್ಕೆ ಮಣಿದು ದೇಶದ ಕಾರ್ಮಿಕ ರಂಗದಲ್ಲಿ ಅಲ್ಲೋಲ ಕಲ್ಲೋಲವೆಬ್ಬಿಸಿರುವ ನಿರ್ಗಮನ ನೀತಿ (ಎಕ್ಸಿಟ್ ನೀತಿ) ಯನ್ನು ಸರ್ಕಾರ ತಂದಿದೆ. ಈ ನೀತಿಗೆ ಪೂರಕವಾಗಿ ಸರ್ಕಾರ 'ರಾಷ್ಟ್ರೀಯ ಪುನರುಜ್ಜೀವನ ನಿಧಿ' ಎಂಬ ನಿಧಿಯನ್ನು ಸ್ಥಾಪಿಸಿದೆ. ಸರ್ಕಾರ ಹೇಳುವಂತೆ ಹೊಸ ಆರ್ಥಿಕ ನೀತಿಯ ಫಲವಾಗಿ ಅಂದರೆ ಉದ್ದಿಮೆಗಳ ಆಧುನೀಕರಣದ ಫಲವಾಗಿ ಕಾರ್ಮಿಕರ ಸ್ಥಾನ ಪಲ್ಲಟವಾಗುತ್ತದೆ. ಅಂತಹ ಕಾರ್ಮಿಕ ಶಕ್ತಿಗೆ ಪುನಃ ತರಪೇತು ನೀಡಿ ಅವರನ್ನು ಪುನರ್ನೇಮಕ ಮಾಡಲು ಈ ನಿಧಿ ಎನ್ನಲಾಗುತ್ತಿದೆ. ಈ ನಿಧಿಯ ಮೊತ್ತ ಈಗಾಗಲೇ 2,200 ಕೋಟಿ ರೂಪಾಯಿಗಳು. ಇದರಲ್ಲಿ ವಿಶ್ವಬ್ಯಾಂಕಿನವರದ್ದು 1,000 ಕೋಟಿ ರೂಪಾಯಿಗಳ ಪಾಲು.

ಸರ್ಕಾರದ ಬೊಗಳೆ ಏನಿದ್ದರೂ ನಿಜವಲ್ಲಿ ದುಡಿಯುವ ಕಾರ್ಮಿಕನನ್ನು ಮನೆಗೆ ಕಳುಹಿಸುವ ನೀತಿ ಇದು. ಅದಕ್ಕೆ ಕಾರ್ಮಿಕ ಕಾಯಿದೆ ತ್ತಗಳನ್ನು ಸರ್ಕಾರ

ಒಂದು ಅ ಟಿತ ವಲಯಕ್ಕೆ ದರೆ 20,000 ಕೋ ಬೀಳುತ್ತದೆ. ಆದ ರೂಪಾಯಿಗಳನ್ನು ಗಿದೆ. ಅಂದರೆ ಕಾ ಒದ್ದೆ ಬಟ್ಟೆಯೇ ಗತಿ

ಆಧುನೀಕರಣ ಜ್ಞಾನ ಅದಕ್ಕೆ ತಕ್ಕಂತೆ ಕಾರ್ಮಿಕ ಶಕ್ತಿ ಲಾಭ ಹೆಚ್ಚು ಹೊರ ಹಾಕಬೇಕಲ್ಲ

ಇಂತಹ ಬ

ಬೇಡಿಕೆ : 4

ರಿಟ್ರೆಂಚ್‌ಮೆಂಟ್ ಮಾಡುವುದು ಮತ್ತು ಕೈಗಾರಿಕಾ ಘಟಕಗಳನ್ನು ಮುಚ್ಚುವುದು ನಿಲ್ಲಿಸಬೇಕು

'ಹೊಸ ಆರ್ಥಿಕ ನೀತಿಗಳಿಂದ ಕಾರ್ಮಿಕರು ಖಂಡಿತಾ ಕೆಲಸ ಕಳಕೊಳ್ಳುವುದಿಲ್ಲ ಅವರ ಕೆಲಸದ ಮಟ್ಟ ಉತ್ತಮಗೊಳ್ಳುತ್ತದೆ 'ಎಂದು ಪ್ರಧಾನ ಮಂತ್ರಿಗಳು ಅಪ್ಪಣೆ ಕೊಡಿಸುತ್ತಿದ್ದಂತೆ ಅತ್ತ ವಸ್ತ್ರೋದ್ಯಮ ರಾಜ್ಯ ಮಂತ್ರಿ ಸಂಸತ್ತಿನಲ್ಲಿ ಉದ್ದಿಮೆಯನ್ನು ಸರಿಪಡಿಸುವ ಸಮಗ್ರ ಕಾರ್ಯ ತಂತ್ರ"ವನ್ನು ಸರಕಾರ ಸಿದ್ಧಪಡಿಸಿದೆಯೆಂದರು. ಇದನ್ನು ಮೊದಲು ಕಾರ್ಮಿಕ ಸಂಘಗಳು ಉದ್ದಿಮೆದಾರರು ಹಾಗೂ ಸರಕಾರದ ಪ್ರತಿನಿಧಿಗಳಿರುವ ತ್ರಿಪಕ್ಷೀಯ ಸಮಿತಿಯಲ್ಲಿ ಚರ್ಚಿಸಲಾಗುವುದು ಎಂಬ ಅವರ ಆಶ್ವಾಸನೆಯಂತೂ ಮರೆತೇ ಹೋಗಿತ್ತು ಆದಿರಲಿ. "ಈ ಕಾರ್ಯ ತಂತ್ರ"ವಾದರೂ ಏನು? ಸ್ವಯಂ ನಿವೃತ್ತಿ ಯೋಜನೆಯ ಪ್ರಕಾರ 80 ಸಾವಿರ ಕಾರ್ಮಿಕರನ್ನು ರಿಟ್ರೆಂಚ್ ಮಾಡುವುದು, ಹಲವು ಗಿರಣಿಗಳನ್ನು ಮುಚ್ಚುವುದು!

ಇದೇ ರೀತಿ ನರಸಿಂಹಂ ಸಮಿತಿ ಬ್ಯಾಂಕಿಂಗ್ ವಲಯದಲ್ಲಿ 3 ಲಕ್ಷ ನೌಕರರು ಅನಗತ್ಯವಾಗಿದ್ದಾರೆ ಎಂದಿತ್ತು. ರೈಲ್ವೇಯಲ್ಲಿ ಸಿಬ್ಬಂದಿ ಸಂಖ್ಯೆಯನ್ನು 16 ಲಕ್ಷದಿಂದ 12 ಲಕ್ಷಕ್ಕೆ ಇಳಿಸಬೇಕೆಂದು, ಅಂದರೆ 4 ಲಕ್ಷ ಕಾರ್ಮಿಕರನ್ನು ಮನೆಗೆ ಕಳಿಸಬೇಕೆಂದು ನಿರ್ದೇಶನ ನೀಡಲಾಗಿದೆ. ರಸಗೊಬ್ಬರ ನೀತಿಯಿದಾಗಿ ಆ ಉದ್ದಿಮೆಯ 50 ಸಾವಿರ ಕಾರ್ಮಿಕರ ಭವಿಷ್ಯದ ಮೇಲೆ ಪ್ರಶ್ನೆ ಚಿಹ್ನೆ ಬಿದ್ದಿದೆ. ಖರ್ಚು ಉಳಿಸುವ ಹೆಸರಲ್ಲಿ ಸರಕಾರೀ ಇಲಾಖೆಗಳಲ್ಲಿ ಹಲವನ್ನು ಮುಚ್ಚುವ ಯೋಚನೆ ನಡೆದಿದೆ. ಈ ಮೂಲಕ ಸಾವಿರಾರು ನೌಕರರ ರಿಟ್ರೆಂಚ್‌ಮೆಂಟ್‌ನ ಭಯ ಹರಡಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲಿ ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸಣ್ಣ ಪ್ರಮಾಣದ ಉದ್ದಿಮೆಗಳು ಈ ಸರಕಾರದ ಹೊಸ ನೀತಿಗಳಿಂದಾಗಿ ದೊಡ್ಡ ಬಂಡವಾಳದ ತಿಮಿಂಗಿಲಗಳ ಪಾಲಾಗಿಯೋ, 'ಉದಾರ' ವಾತಾವರಣದಲ್ಲಿ ಸ್ಪರ್ಧಿಸಲಾರದೆ ಮುಚ್ಚಿಯೋ ಉದ್ಯೋಗಾವಕಾಶಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಚ್ಚಿ ಹಾಕಲಾಗುತ್ತಿದೆ. ಬಂಡವಾಳ ಶಾಹಿಗಳ, ಆಡಳಿತದ ದುರಾಡಳಿತದಿಂದ 'ರೋಗಗ್ರಸ್ತ'ವಾದ ಉದ್ದಿಮೆಗಳನ್ನು ಮುಚ್ಚಲು ಮುಕ್ತ ಅವಕಾಶ ನೀಡಲು ಸರಕಾರ ಇತ್ತೀಚೆಗೆ ಕೈಗೊಂಡಿರುವ ಕ್ರಮಗಳಿಂದಾಗಿ ಇನ್ನೂ 10 ಲಕ್ಷ ಕಾರ್ಮಿಕರು ಬೀದಿಪಾಲಾಗುತ್ತಾರೆ.

ಭಾರತದ ಉದ್ದಿಮೆಗಳನ್ನು ನಾಶ ಮಾಡಿ ಈ ದೇಶವನ್ನು ಒಂದು ಕೈಗಾರಿಕಾ ಮರುಭೂಮಿಯಾಗಿ ಮಾಡ ಹೊರಟಿರುವ ನೀತಿಗಳಿದಾಗಿ ಹಾಡುಹಗಲೇ ಲಕ್ಷಾಂತರ ಉದ್ಯೋಗಾವಾಕಾಶಗಳ ಕೊಲೆ ಸಾಗಿದೆ.

ಉದ್ಯೋಗಾವಕಾಶಗಳನ್ನೆಲ್ಲಾ ಹಾಡು ಹಗಲೇ ಚಚ್ಚಿ ಹಾಕುತ್ತಿರುವ ನೀತಿಗಳು

ಕಾರ್ಮಿಕರು ತಂತಮ್ಮ ಉದ್ದಿಮೆಗಳಲ್ಲಿ ಇದನ್ನು ಪ್ರತಿರೋಧಿಸಲೂ ಆರಂಭಿಸಿದ್ದಾರೆ. ರೈಲ್ವೆಯಲ್ಲಿ ಸರಕಾರದ ಆರ್ಥಿಕ ನೀತಿಗಳನ್ನು ವಿರೋಧಿಸುವ ಇಂಟಕ್‌ನ ಮುಖಂಡ ಕೂಡಾ ರೈಲ್ವೆಯಲ್ಲಿ ಖಾಸಗೀಕರಣದ ಪ್ರಸ್ತಾಪಗಳ ಮೂಲಕ ಉದ್ಯೋಗವಾಕಾಶಗಳನ್ನು ತೀವ್ರವಾಗಿ ಕಡಿತ ಮಾಡುವ ಪ್ರಯತ್ನ ಗಂಭೀರ ರೂಪ ತಾಳುತ್ತಿದೆ ಎಂದು ಚಿಂತೆ ವ್ಯಕ್ತಮಾಡಬೇಕಾಗಿ ಬಂದಿದೆ.

ರೈಲ್ವೇಯ ಕಲ್ಲಿದ್ದಲು ಬೂದಿ, ಹಾಗೂ ರೈಲಿನಿಂದ ಹಡಗಿಗೆ ಸಾಮಾನು ಸಾಗಿಸುವ ಕೆಲಸದಲ್ಲಿ ದುಡಿಯುವ ಕಾಂಟ್ರಾಕ್ಟ್ ಕಾರ್ಮಿಕರು ಈ ಕೆಲಸಗಳು ಸದಾ ಇರುವಂತಾದ್ದರಿಂದ ತಮ್ಮನ್ನು ಖಾಯಂಗೊಳಿಸಬೇಕು ಎಂದು ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದರೂ ರೈಲ್ವೆ ಇಲಾಖೆ ಕಿವಿಗೊಟ್ಟಿರಲಿಲ್ಲ. ಈಗ ಉಗಿಯಂತ್ರದ ಬಳಕೆ ನಿಲ್ಲಿಸಿದ್ದರಿದ ಈ ಕಾರ್ಮಿಕರಿಗೆ ಕೆಲಸವಿಲ್ಲದಾಗಿ ಬೀದಿಪಾಲಾಗಿದ್ದಾರೆ. ಅವರು ನ್ಯಾಯಾಲಯದ ಮೊರೆ ಹೊಕ್ಕಾಗ ಕಾರ್ಮಿಕರಿಗೆ ಸೂಕ್ತ ಪರ್ಯಾಯ ಕೆಲಸ ಕೊಡಬೇಕಾದದ್ದು ಮಾನವೀಯ ದೃಷ್ಟಿಯಿಂದ ಒಳ್ಳೆಯದು ಎಂದು ಸುಪ್ರಿಂ ಕೋರ್ಟ್ ಮಾರ್ಚ್ 1993 ರಲ್ಲಿ ರೈಲ್ವೇ ಇಲಾಖೆಗೆ ಸಲಹೆ ಮಾಡಿದೆ.

ಐ.ಎಂ.ಎಫ್ ಪ್ರಭುಗಳಿಗೆ ತಮ್ಮನ್ನು ಮಾರಿಕೊಂಡ ಈ ಆಳರಸರಲ್ಲಿ 'ಮಾನವೀಯ ದೃಷ್ಟಿ'ಯೆಂಬುದು ಎಂದೋ ಇಂಗಿ ಹೋಗಿದೆ. ಇತ್ತೀಚೆಗೆ ಸರಕಾರ ನೇಮಿಸಿದ ರೋಗಗ್ರಸ್ತ ಕೈಗಾರಿಕೆಗಳ ಕುರಿತಾದ ಗೋಸ್ವಾಮಿ ಸಮಿತಿ ಐ.ಎಂ.ಎಫ್ ಬಯಸಿದ ವರದಿ ಸಲ್ಲಿಸಿ ಗುತ್ತೇದಾರಿಗಳಿಗೆ, ವಿದೇಶೀ ಕಂಪೆನಿಗಳಿಗೆ ತಮ್ಮ ಮನ ಬಂದಂತೆ ವರ್ತಿಸಲು ಪೂರ್ಣ ಅವಕಾಶ ಕೊಡಬೇಕೆಂದು ಸಲಹೆ ಮಾಡಿದೆ.



"ಐ.ಎಂ.ಎಫ್ ಶರತ್ತುಗಳನ್ನು ಸದೆಬಡಿಯುತ್ತೇವೆ" ನವಂಬರ್ 25,1992 ಚಾರಿತ್ರಿಕ "ಪಾರ್ಲಿಮೆಂಟ್ ಚಲೋ"ದಲ್ಲಿ ಮೊಳಗಿದ ಘೋಷಣೆ, ಬೆಸೆದ ಐಕ್ಯತೆ.

ಬೇಡಿಕೆ 11

ಈಗಿನ ಮೇಲುವರ್ಗಗಳ ಪರವಾದ ಶಿಕ್ಷಣ ನೀತಿಯನ್ನು ರದ್ದುಮಾಡಿ ಸಾರ್ವತ್ರಿಕ ಉಚಿತ ಪ್ರಾಥಮಿಕ ಶಿಕ್ಷಣವನ್ನೂ ದಮನ ಶಿಕ್ಷಣ ಅವಕಾಶವನ್ನು ಒದಗಿಸಬಲ್ಲ ಒಂದು ವೈಜ್ಞಾನಿಕ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಿಕ್ಷಣ ನೀತಿಯನ್ನು ಜಾರಿಗೊಳಿಸಬೇಕು. ವಾರ್ಷಿಕ ಬಜೆಟ್‌ನ 10 ಶೇ. ವನ್ನು ಶಿಕ್ಷಣಕ್ಕೆ ಮಿಸಲಿಡಬೇಕು.

ಮಾನವ ಉನ್ನತಿಗೆ ಶಿಕ್ಷಣ ಅಗತ್ಯ ಅಂದ ಮಾತ್ರಕ್ಕೆ ಶಿಕ್ಷಣ ಇಲ್ಲದವರು ಅನಾಗರಿಕರು ಎಂದು ಇದರ ಅರ್ಥವಲ್ಲ. ಆದರೆ ತನ್ನ ಸುತ್ತ ಮುತ್ತಲ ವಿದ್ಯಮಾನವನ್ನು ಅರಿಯಲು ಶಿಕ್ಷಣ ಅತ್ಯಾವಶ್ಯಕ. ಆಧುನಿಕ ಯುಗದಲ್ಲಿ ಅದು ಉದ್ಯೋಗದ ಸಾಧನವಾಗಿಯೂ ಪರಿಣಮಿಸಿದೆ.

ಎಲ್ಲರಿಗೂ ಶಿಕ್ಷಣ

ಆದರೆ ಇಷ್ಟೊಂದು ಮಹತ್ವವು ಶಿಕ್ಷಣಕ್ಕೆ ನಮ್ಮಲ್ಲಿರುವ ಸ್ಥಾನವೇನು? ಅದು ಕಾಲ ಕಾಲಾಂತರದಿಂದ ಒಂದು ನಿರ್ದಿಷ್ಟ ವಿಭಾಗದ ಸೊತ್ತಾಗಿ ಉಳಿದು ಬರುತ್ತಿದೆ. ಒಂದು ಕಾಲದಲ್ಲಿ ಉಚ್ಚ ಜಾತಿ-ವರ್ಣೀಯರಿಗೆ ಮೀಸಲಾಗಿದ್ದ ಶಿಕ್ಷಣ ಈಗ ಉಳ್ಳವರ ಸೊತ್ತು ಎಂಬಂತಾಗಿದೆ. ಉನ್ನತ ಶಿಕ್ಷಣವಂತೂ ಮಾರುಕಟ್ಟೆಯಲ್ಲಿ ಬಿಕರಿಗಿಟ್ಟ ಮಾಲಿನಂತಾಗಿದೆ.

ಹೊಸ ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ನೋಡುವಾಗ ಆ ನೀತಿಯ ಕರಾಳ ಛಾಯೆ ಶಿಕ್ಷಣದ ಮೇಲೆಯೂ ಬಿದ್ದಿದೆ. 'ಯುವ ನೇತಾರ' ರಾಜೀವ್‌ಗಾಂಧಿಯ ಕನಸಿನ ಕೂಸಾದ ಹೊಸ ಶಿಕ್ಷಣ ನೀತಿ (ಎನ್.ಇ.ಪಿ.) ಶಿಕ್ಷಣವನ್ನು ಜನಸಾಮಾನ್ಯರಿಂದ ದೂರ ಒಯ್ಯುವ ಉದ್ದೇಶವನ್ನು ಹೊಂದಿದೆ.

ಶಿಕ್ಷಣಕ್ಕೆ ಸಿಗಬೇಕಾಗದ ಆದ್ಯತೆ ಸಿಗುತ್ತಿಲ್ಲ. ಅದಕ್ಕೆ ಸಿಗುತ್ತಿರುವುದು ಕೊನೆಯ ಪ್ರಾಶಸ್ತ್ಯ 1991-92 ರ ಕೇಂದ್ರ ಬಜೆಟ್ ಶಿಕ್ಷಣಕ್ಕಾಗಿ 977 ಕೋಟಿ ರೂ. ಗಳನ್ನು ತೆಗೆದಿರಿಸಿತ್ತು. 1992-93 ರ ಬಜೆಟ್‌ನಲ್ಲಿ ಅದು 952 ಕೋ. ರೂಗೆ ಇಳಿಯಿತು. ಹೀಗೆ ಯೋಜನೆಯಿಂದ ಯೋಜನೆಗೆ, ಬಜೆಟ್‌ನಿಂದ ಬಜೆಟ್‌ಗೆ ಶಿಕ್ಷಣದ ವೆಚ್ಚ ಇಳಿಯುತ್ತಲೇ ಹೋಗಿದೆ. (ಕೆಲವು ಸಂದರ್ಭಗಳನ್ನು ಹೊರತುಪಡಿ ಖಾಸಗೀಕರಣ ನಮ್ಮ ಶಿಕ್ಷಣ ವ್ಯವಸ್ಥೆಯ ದೊಡ್ಡ ಕಪ್ಪು ಕಲೆಯಾಗಿ ಅದನ್ನು ತೊಡೆಯುವ ಬದಲು ಖಾಸಗೀಕರಣದ ಉತ್ಸಾಹ ಈ ಪವಿತ್ರ ಕ್ಷೇತ್ರವನ್ನೂ ದುರ್ಗಂಧಮಯಗೊಳಿಸಲು ಸರಕಾರಗ ಬೇಕಾದ ಎಲ್ಲವನ್ನು ಮಾಡುತ್ತಿವೆ. 14 ವರ್ಷ ವಯೋಮಿತಿವರೆಗೆ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ ನೀಡಬೇಕೆಂಬ ಸಂವಿಧಾನದ ಇನ್ನೂ ವಾಸ್ತವದಲ್ಲಿ ಮೂರ್ತ ರೂಪ ಪಡೆದಿಲ್ಲ.

ಇನ್ನು ದೊರೆಯುವ ಶಿಕ್ಷಣವಾದರೂ ಎಂಥದ್ದು? ಅದು ತೀ ಅವೈಜ್ಞಾನಿಕವಾದದ್ದು. ವಾಸ್ತವಿಕತೆಗೆ ದೂರವಾದದ್ದು. ಜೀವ ಸಂಬಂಧವಿಲ್ಲದ್ದು. ವಿಜ್ಞಾನ ಅಗಾಧವಾಗಿ ಬೆಳೆದರೂ ಅವೈಜ್ಞಾ ಆಲೋಚನೆಗಳು ಪಠ್ಯ ಪುಸ್ತಗಳಲ್ಲಿ ಹಣಕಿ ಹಾಕುತ್ತವೆ. ಮಕ್ಕಳ ಮ ಸ್ಸನ್ನು ಅರಳಿಸುವುದಕ್ಕಿಂತ ಅವರಲ್ಲಿ ಸಂಕುಚಿತ ಭಾವನೆಗಳನ್ನು ಹು ಸಲು ಪಠ್ಯ ಪುಸ್ತಕಗಳು ಕಾರಣವಾಗುತ್ತಿವೆ. ಇತಿಹಾಸವನ್ನು ತಿರುಚು ದಕ್ಕಂತೂ ಮಿತಿಯೇ ಇಲ್ಲವಾಗಿದೆ. ಕೋಮುವಾದಿ ಪಕ್ಷಗಳು ಅಧಿ ರಕ್ಕೆ ಬಂದರಂತೂ ಮುಗಿದೇ ಹೋಯಿತು. ಬಿಜೆಪಿ ಅಧಿಕಾರದಲ್ಲಿ ನಾಲ್ಕು ರಾಜ್ಯಗಳನ್ನು ಅದಕ್ಕೆ ದೃಷ್ಟಾಂತವನ್ನಾಗಿ ನೀಡಬಹುದು.

ಒಟ್ಟಿನಲ್ಲಿ ಪ್ರತಿಯೊಬ್ಬರಿಗೆ ಶಿಕ್ಷಣದ ಅವಕಾಶವಿಲ್ಲ. ದೊ ಯುವ ಶಿಕ್ಷಣ ಸರಿಯಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಜ ಕನಸು ಕಂಡಿದ್ದು ಇದನ್ನಲ್ಲ. ಎಲ್ಲರಿಗೂ ಉತ್ತಮವಾದ ಶಿಕ್ಷಣ ದೊ ಯಬೇಕೆಂಬ ಉದಾತ್ತ ಧ್ಯೇಯವಿತ್ತು. ಅದನ್ನು ಸಾಕಾರಗೊಳಿಸ ಇನ್ನೂ ಹೋರಾಟವನ್ನು ನಡೆಸಬೇಕಾಗಿದೆ. ಕೇಂದ್ರ-ರಾಜ್ಯ ಸರಕಾ ಗಳು ಶಿಕ್ಷಣಕ್ಕೆ ಸಲ್ಲತಕ್ಕ ಮಹತ್ವನ್ನು ನೀಡುವಂತೆ ವಾರ್ಷಿಕ ಬಜೆಟ್ ಶೇ. 10 ವನ್ನು ಶಿಕ್ಷಣಕ್ಕೆ ತೆಗೆದಿಡುವಂತೆ ಒತ್ತಡ ತರಬೇಕಾಗಿದೆ.

...ರಸಿಂಹರಾವ್" ಎಂದು ...ಎಚ್ಚರ ವೀಯುವ ...ದ್" ಏಕೆ?

...ಾಡಿಕೊಳ್ಳಲು, ದೇಶದ ಪ್ರಗತಿ ಸಾಧಿಸಲು ಎಲ್ಲಾ ಶ್ರಮ ...ಿನಗಳ ಆಕಾಂಕ್ಷೆಗೆ ಎಪ್ರಿಲ್ 15,1993 ರಂದು ಒಂದು ...ಾಂಗಣದಲ್ಲಿ ಸೇರಿದ್ದ ಕಾರ್ಮಿಕರ ನೌಕರರ, ರೈತರ, ಕೃಷಿ ... ವಿದ್ಯಾರ್ಥಿಗಳ ಯುವ ಜನರ, ಮಹಿಳೆಯರ 7,000ಕ್ಕೂ ...ರ **ಆರ್ಥಿಕ ನೀತಿಗಳು ಹಾಗೂ ಕೋಮುವಾದದ** ...ೆಯನ್ನು ಘೋಷಿಸಿದರು. ಸ್ವತಂತ್ರ ಭಾರತದಲ್ಲಿ ತಂತಮ್ಮ ...ದ್ದ ದೇಶದ ಸಾಮೂಹಿಕ ಸಂಘಟನೆಗಳನ್ನೆಲ್ಲಾ ಮೊತ್ತ ...ಪಿಸಿದ ಐತಿಹಾಸಿಕ ವೇದಿಕೆಯಿದು. ವಿವಿಧ ಜನಸಮೂ ...ೆಗಳು ರಚಿಸಿಕೊಂಡ, ದೇಶದ ಕೋಟಿ-ಕೋಟಿ ಶ್ರಮಜೀ ...ೋ (ಆಗಸ್ಟ್ 19) 'ಭಾರತ್ ಬಂದ್' (ಸಪ್ಟೆಂಬರ್9) ಗೆ ...ೇಶದ ಸಮಸ್ಯೆಗಳನ್ನು ಸಮಗ್ರವಾಗಿ ತೆರೆದಿಟ್ಟಿರುವ, ಜತೆಗೆ ...ಕೆಗಳು. ಇಲ್ಲಿ ಅವುಗಳನ್ನು ಮುಂದಿನೆರಡು ಸಂಚಿಕೆಯಲ್ಲಿ ...ಗಿದೆ.

ಬೇಡಿಕೆ : 5

ವೇತನ ಸ್ತಂಭನದ ಪ್ರಯತ್ನಗಳನ್ನೆಲ್ಲಾ ನಿಲ್ಲಿಸಬೇಕು ಸರಕಾರೀ ಇಲಾಖೆಗಳನ್ನು ಮುಚ್ಚುವುದು ನಿಲ್ಲಬೇಕು. ಎಲ್ಲರಿಗೂ ಸಾಮೂಹಿಕ ಚೌಕಾಸಿಯ ಹಕ್ಕುಗಳು ಇರಲೇಬೇಕು.

ಸುಖ-ಸಮೃದ್ಧಿ ತಂದು ಹಾಲಿನ ಹೊಳೆ ಹರಿಸುತ್ತದೆಯೆಂದು ಡಂಗುರ ಸಾರಿದ ಸರಕಾರದ ನೀತಿಗಳು ಸಂಕಷ್ಟಗಳ ಹೊರೆ ಹೇರಿ ಬಡವರ ಕಣ್ಣೀರಿನ ಹೊಳೆ ಹರಿಸಲಾರಂಭಿಸಿವಾಗ ಸರಕಾರ ತನ್ನ ಮಾನ ಉಳಿಸಿಕೊಳ್ಳಲು ಬಲಿಪಶುಗಳನ್ನು ಹುಡುಕಬೇಕಲ್ಲವೇ? ನರಸಿಂಹರಾವ್ ಸರಕಾರ ಆ ಕೆಲಸವನ್ನು ಆಗಲೇ ಆರಂಭಿಸಿದೆ. ಜೊತೆಗೆ ಸಾಲಗಾರರ ಅಂದರೆ ಐ.ಎಂ.ಎಫ್ ನ ಅಪ್ಪಣೆ ಬೇಕೆ- ಖಾಸಗಿ ಬಂಡವಾಳಗಾರರ ಲಾಭ ಹೆಚ್ಚಿಸಲೇಬೇಕು! ಅಂದರೆ ದುಡಿಯುವ ಜನಗಳ ಆದಾಯದ ಮೇಲೆ ಆದಾಯದ ಮೇಲೆ ಪ್ರಹಾರ ನಡೆಸಬೇಕು. ಆದ್ದರಿಂದ ನರಸಿಂಹರಾವ್ ಸರಕಾರದ ಕೆಂಗಣ್ಣು ಸರಕಾರಿ ನೌಕರರ, ಸಂಬಳ, ತುಟ್ಟಿಭತ್ಯೆಗಳ ಇತರ ಸೌಲಭ್ಯಗಳ ಮೇಲೆ ಆಗಲೇ ಬಿದ್ದಿದೆ.

ದೇಶದ ಆರ್ಥಿಕ ಬಹಳ ಕಷ್ಟದಲ್ಲಿದೆ, ಆದ್ದರಿಂದ ದೇಶ ತನ್ನ ವೆಚ್ಚಗಳನ್ನು ಕಡಿತಮಾಡಿಕೊಳ್ಳಬೇಕು, ಸರಳ ಜೀವನ ನಡೆಸಬೇಕು ಎಂದು ಉಪದೇಶ ನೀಡಿದ ನಮ್ಮ ಸರಕಾರ ಡಿಸೆಂಬರ್ 1991 ರಲ್ಲಿ ಇದನ್ನು ಹೇಗೆ ಸಾಧಿಸಬಹುದು ಎಂದು ಪರಿಶೀಲಿಸಲು ಒಂದು ಸಮಿತಿ ನೇಮಕಗೊಂಡಿತು. ಒರಿಸ್ಸಾ ಮುಖ್ಯಮಂತ್ರಿ ಬಿಜು ಪಟ್ನಾಕ್ ಅಧ್ಯಕ್ಷರಾಗಿದ್ದ ಇದರ ಇತರ ಸದಸ್ಯರೆಂದರೆ ಆಗ ಉತ್ತರ ಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಕಲ್ಯಾಣ್‌ಸಿಂಗ್, ಹರ್ಯಾಣದ ಕಾಂಗ್ರೆ ಮುಖ್ಯಮಂತ್ರಿ ಭಜನ್ ಲಾಲ್ ಇತ್ಯಾದಿ. ಎಪ್ರಿಲ್ 1993 ರಲ್ಲಿ ಈ ಸಮಿತಿ ತನ್ನ ವರದಿಯನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಸಲ್ಲಿಸಿತು. ಇದರ ಮುಖ್ಯ ಅಂಶವೇನು ಗೊತ್ತೆ? ನೌಕರರು ಸತತ ಹಣದುಬ್ಬರದಿಂದ ಪರಿಹಾರ ಪಡೆಯಲು ಕೇಳುತ್ತಿರುವ ವೇತನ ಹೆಚ್ಚಳ, ತುಟ್ಟಿಭತ್ಯೆ ಹೆಚ್ಚಳ ಇತ್ಯಾದಿಗಳನ್ನು ಒಂದು ವರ್ಷ ನಿಲ್ಲಸಬೇಕು; ಬೋನಸ್, ಪ್ರವಾಸ ಸೌಲಭ್ಯ ಇತ್ಯಾದಿಗಳನ್ನು ನಿಲ್ಲಿಸಬೇಕು. ಈಗಿರುವ ತುಟ್ಟಿಭತ್ಯೆ ಸೂತ್ರವನ್ನು ಮರುಪರೀಕ್ಷಿಸಬೇಕು. ಅಂದರೆ ಕಡಿಮೆ

ಕಪ್ಪು ಹಣ ಹೊರಗೆಳೆಯಲಾರದ ಸರಕಾರದ ಕೆಂಗಣ್ಣು ಸಂಬಳದ ಮೇಲೇಕೆ?

ಮಾಡಬೇಕು. ಇದು ಕೇವಲ ಸರಕಾರೀ ನೌಕರರಿಗಷ್ಟೇ ಸೀಮಿತಗೊಳ್ಳುವುದಿಲ್ಲ, ಎಲ್ಲಾ ಕಾರ್ಮಿಕರ ಮೇಲೂ ಬರಲಿರುವ ಏಟು. ಇದಲ್ಲದೆ ವಿದ್ಯುತ್, ಸಾರಿಗೆ ಇತ್ಯಾದಿಗಳ ಬೆಲೆ ಹೆಚ್ಚಿಸಬೇಕು ಇತ್ಯಾದಿ ಈ ಸಮಿತಿಯ ಮುಖ್ಯ ಸಲಹೆಗಳು. ಸಿರಿವಂತರ ಐಷಾರಾಮದ ಜೀವನಕ್ಕೆ ಕಡಿವಾಣ ಹಾಕುವ ಕಪ್ಪುಹಣ ಹೊರಗೆಳೆಯುವ ಒಂದೇ ಒಂದು ಮಾತು ಇಲ್ಲ. ಪಶ್ಚಿಮಬಂಗಾಳ ಮತ್ತು ಇನ್ನೊಂದು ರಾಜ್ಯದ ಪ್ರತಿ

ಪುಟ 6 ನೋಡಿ

ಬೇಡಿಕೆ 6 :

ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳ ಶೇರು ಖಾಸಗಿಯವರಿಗೆ ಮಾರಾಟ ಮಾಡುವ ಹಾಗೂ ಖಾಸಗೀಕರಿಸುವ ಎಲ್ಲಾ ಕ್ರಮಗಳನ್ನು ಹಿಂತೆಗುದುಕೊಳ್ಳಬೇಕು

ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳು ದಕ್ಷವಲ್ಲ. ಖಾಸಗಿ ಕ್ಷೇತ್ರದ ಕಾರ್ಖಾನೆಗಳು ಹೆಚ್ಚು ದಕ್ಷ ಎಂಬ ಪ್ರಚಾರ ರಾಜೀವ ಸರ್ಕಾರದ ಉದಾರೀಕರಣದ ನೀತಿಯ ಜತೆ ಆರಂಭವಾದ ಸುಳ್ಳುಗಳ ಕಂತೆ. ಆಳುವ ವರ್ಗಗಳು ಅವರ ಸರಕಾರ ಈ ಸುಳ್ಳನ್ನು ಜನಪ್ರಿಯಗೊಳಿಸಲು ಪತ್ರಿಕೆ, ರೇಡಿಯೋ, ಟಿವಿ, ಇತರೆ ಮಾಧ್ಯಮಗಳಿಂದ ಪ್ರಯತ್ನಿಸುತ್ತಿವೆ. ಇದು ಯಾವುದೇ ಅಂಕಿ ಅಂಶಗಳ ಮೇಲೆ ಆಧರಿಸಿದ್ದಲ್ಲ. ಈಗ ರೋಗಗ್ರಸ್ತವಾಗಿರುವ 2 ಲಕ್ಷಕ್ಕಿಂ

ದೇಶದ ಆಸ್ತಿಯ ಇಂತಹ ಲೂಟಿಯೇಕೆ?

ತಲೂ ಹೆಚ್ಚು ಕಾರ್ಖಾನೆಗಳು ಖಾಸಗಿ ಕ್ಷೇತ್ರದಲ್ಲಿರುವವೇ? ಸಾರ್ವಜನಿಕ ಕ್ಷೇತ್ರದಲ್ಲಿರುವ ಕೆಲವು ರೋಗಗ್ರಸ್ತ ಕಾರ್ಖಾನೆಗಳು(ಉದಾಹರಣೆ ಎನ್.ಟಿ.ಸಿ. ಮಿಲ್ಲುಗಳು) ಹಿಂದೆ ಖಾಸಗಿ ಕ್ಷೇತ್ರದಲ್ಲಿದ್ದು ರಾಷ್ಟ್ರೀಕೃತವಾದವುಗಳು.

ಆದರೂ ಸರಕಾರ ಉದಾರೀಕರಣ ನೀತಿಯ ಭಾಗವಾಗಿ ಐ.ಎಂ.ಎಫ್ ಆಣತಿಯಂತೆ ಖಾಸಗೀಕರಣದ ನೀತಿ ಅನುಸರಿಸುತ್ತಿದೆ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಉಕ್ಕು, ತೈಲ, ವಿದ್ಯುತ್ ಉಪಕರಣಗಳು, ರಕ್ಷಣಾ ಉಪಕರಣಗಳು, ಇತ್ಯಾದಿ ಆಯಕಟ್ಟಿನ ಕ್ಷೇತ್ರಗಳಲ್ಲಿ ಭಾರತ ತನ್ನ ಕಾಲ ಮೇಲೆ ನಿಲ್ಲಬಲ್ಲ ಕ್ಷಮತೆ ಸಾಧಿಸಿವೆ. ಇದರ ಬೆನ್ನು ಮುರಿಯದೆ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಭಾರತದಲ್ಲಿ ಮಾರುಕಟ್ಟೆ ಪಡೆಯಲು ಸಾಧ್ಯವಿಲ್ಲ- ಅದೂ ಈ ಕಂಪನಿಗಳಿಗೆ ಬೇಕಾದ ಶರತ್ತಿನ ಮೇಲೆ. ಅಲ್ಲದೆ ಸಾರ್ವಜನಿಕ ಕ್ಷೇತ್ರದಲ್ಲಿ ಹೂಡಲಾಗಿರುವ ಭಾರಿ ಬಂಡವಾಳದ ಒಂದು ಭಾಗವನ್ನು ಲೂಟಿ ಮಾಡುವುದೂ ಬೂರ್ಜ್ವಾವರ್ಗದ ಆಶಯ. ಇದನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒದಗಿಸುವ ಆಮಿಷ ಒಡ್ಡುವುದು ಇದರ ಉದ್ದೇಶ. ಆದ್ದರಿಂದ ಸರಕಾರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ತೊಡಗಿಸಲು ಹಣವಿಲ್ಲ. ಇನ್ನು ಮೇಲೆ ಕೈಗಾರಿಕೆಗಳು ಮಾರುಕಟ್ಟೆಯಿಂದಲೇ ಹಣ ಪಡೆದು ತೊಡಗಿಸಬೇಕು ಎನ್ನುತ್ತಿದೆ. ಅಲ್ಲದ ಸರಕಾರ ತನ್ನ ಅಪಾಯ-ವೆಚ್ಚ ತೂಗಿಸಲು ಶೇಕಡಾ 20 ರಷ್ಟು ಸಾರ್ವಜನಿಕ ಕ್ಷೇತ್ರದ ಶೇರುಗಳನ್ನು ಮಾರಾಟ ಮಾಡುವ ಮೂಲಕ ಸಂಪನ್ಮೂಲಗಳನ್ನು ಶೇಖರಿಸುವ ನೀತಿ 1991 ರಿಂದ ಆರಂಭಿಸಿದೆ. ನರಸಿಂಹರಾವ್ ಸರ್ಕಾರದ 1991 ಬಜೆಟ್‌ನಲ್ಲಿ ಮೊದಲ ಬಾರಿಗೆ ಈ ನೀತಿ ಹಾಕಿಕೊಳ್ಳಲಾಯಿತು.

ಆದರೆ ಸಾರ್ವಜನಿಕ ಕ್ಷೇತ್ರದ ಶೇರು ಮಾರಾಟ ಸರಕಾರ ನಿರ್ವಹಿಸಿದ ರೀತಿ ಇನ್ನೊಂದು 'ಶೇರು ಹಗರಣ' ಎಂದು ಅಂಕಿ ಅಂಶಗಳ ಮೂಲಕ ಸಿಎಜಿ ವರದಿ ಬಯ

ಪುಟ 6ನೋಡಿ

...ತ ಹೊಸ ...ಗಳು ಮತ್ತು ...ಲ್ಲ ತರಹದ ... ಕಂಪನಿಗಳು ...ಷ್ಟು ಪಾಲು ...ಪನಿಗಳನ್ನು ...ಳ್ಳಬಹುದು. ... ಲಾಭವನ್ನು ...ರ್ಣ ಸ್ವದೇಶಿ ...ನ ...ೀನ ... ಬಂಡವಾಳ ...ಳ್ಳಬಹುದು.

ಅಂದರೆ ನಮ್ಮ ದೇಶೀ ತಂತ್ರಜ್ಞಾನಗಳಿಗೆ ತೀವ್ರ ಸ್ವರೂಪದ ಸ್ಪರ್ಧೆ ಉಂಟಾಗಿ ದೇಶೀ ಉದ್ಯಮಗಳು ನಶಿಸಿ ಹೋಗುತ್ತವೆ.

5. ಮೂವತ್ತೈದು ದೀರ್ಘ ಬಳಕೆ ವಸ್ತುಗಳಾದ ವಿಡಿಯೋ ಕ್ಯಾಮೆರಾ, ಟಿವಿ ರಿಸಿವರ್, ಟೆಲಿಫೋನ್, ಕಂಪ್ಯೂಟರ್ ಇತ್ಯಾದಿಗಳ ಮೇಲೆ ಆಮದು ಸುಂಕವನ್ನು ಶೇ. 255 ರಿಂದ ಶೇ. 150ಕ್ಕೆ ಇಳಿಸಿರುವುದು.

6. ಕರ ಪದ್ಧತಿಯನ್ನೇ ಸುಧಾರಣೆಗೊಳಿಸಿ ದೊಡ್ಡ ದೊಡ್ಡ ಕಂಪನಿಗಳಿಗೆ ಅತಿ ಕಡಿಮೆ ಕರ ಹೇರುವ ನಿರ್ಧಾರ ಮಾಡಿರುವುದು.

7. ಅಬ್ಕಾರಿ ಸುಂಕವನ್ನು ಕಡಿತಗೊಳಿಸಿ ಅದರ ಲಾಭವನ್ನು ಬಳಕೆದಾರರಿಗೆ ದಾಟಿಸದೇ ಇರುವುದು.

ಬೇಡಿಕೆ 7

ಕಾರ್ಮಿಕ- ವಿರೋಧಿ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು

ಅಂತಾರಾಷ್ಟ್ರೀಯ ಹಣಕಾಸು ವಲಯದ ಐರಾವಣ ಮೈರಾವಣರಾದ ಐ.ಎಂ.ಎಫ್- ವಿಶ್ವಬ್ಯಾಂಕ್ ನ ಅಪ್ಪಣೆಗಳಿಗೆ ದೇಶದ ಆರ್ಥಿಕವನ್ನು ಈಡುಮಾಡಿದ ಸರಕಾರ ಈಗ ಅದರ ಸಹಜ ಫಲವಾಗಿ ಈ ಅವಳಿ ರಕ್ಕಸರು 'ನಿಮ್ಮ ಕಾರ್ಮಿಕರು ನಾವು ಹೇಳಿದಂತೆ ಕೇಳುವಂತಿಲ್ಲದಿದ್ದರೆ ನಮ್ಮ ಸೂಪರ್‌ಲಾಭದ ಭರವಸೆ ಹೇಗೆ ಕೊಡುತ್ತೀರಿ' ಎಂದು ಪದೇ ಪದೇ ಕೇಳುತ್ತಿರುವುದರ ಪರಿಣಾಮವಾಗಿ ಅವರ ಬಯಕೆಯಂತೆ ಕಾರ್ಮಿಕ ಶಾಸನಗಳನ್ನೇ ಬದಲಿಸಹೊರಟಿದ್ದಾರೆ. ಆದರೆ ಕಾರ್ಮಿಕರ ಸಿಟ್ಟನ್ನು ಕಂಡ ಅವರಲ್ಲಿ ಅಳುಕು ಇನ್ನೂ ಇದ್ದಂತಿದೆ. ಆದ್ದರಿಂದ ಕಳ್ಳತನದಲ್ಲಿ ಅದನ್ನು ಮಾಡಬಯತ್ನಿಸುತ್ತಿದ್ದಾರೆ. ಕಳೆದ ಸಂಸತ್ ಅಧಿವೇಶನ ಮುಗಿದ ಕೂಡಲೇ ಈ ಬಗ್ಗೆ ಒಂದು ಸುಗ್ರೀವಾಜ್ಞೆ ಹೊರಡಿಸುವ ಊಹಾಪೋಹವನ್ನು ಅವರೇ ಹರಡಿಸಿದರು. ಇದುವರೆಗೆ ಆ ಸುಗ್ರೀವಾಜ್ಞೆ ಬಂದಿಲ್ಲ. ಆದರೆ ಅತ್ಯಂತ ಕಾರ್ಮಿಕ- ವಿರೋಧಿ ರೀತಿಯಲ್ಲಿ ಕೈಗಾರಿಕಾ ವಿವಾದ ಕಾಯ್ದೆಗೆ ವ್ಯಾಪಕ ತಿದ್ದುಪಡಿಗಳನ್ನು ನಡೆಸುವ ಸಿದ್ಧತೆ ಆಗಿದೆ ಎಂದು ಇದೇ ಮೇ ತಿಂಗಳಲ್ಲಿ ಕಾರ್ಮಿಕ ರಾಜ್ಯ ಮಂತ್ರಿ ಸಂಗ್ಮಾ ಸೂಚಿಸಿದರು.

ಕಳೆದ ವರ್ಷ ಜುಲೈನಲ್ಲಿ ಪ್ರಧಾನಮಂತ್ರಿಗಳು ಮುಷ್ಕರಗಳ ಮೇಲೆ ಸ್ವಲ್ಪ ಸಮಯ ನಿರ್ಬಂಧ ಹಾಕಿಕೊಳ್ಳಬೇಕೆಂದು ಈ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಸರ್ವ ಸಮ್ಮತಿ ಮೂಡಬೇಕೆಂದು ಕರೆ ನೀಡುವ ಹೆಸರಲ್ಲಿ ಕಾರ್ಮಿಕ ವರ್ಗವನ್ನು ಬೆದರಿಸಿದ್ದರು. ಕಾರ್ಮಿಕ ವರ್ಗ ಅದಕ್ಕೆ ಸೊಪ್ಪು ಹಾಕಲಿಲ್ಲ. ಅದಕ್ಕೆ ಮೊದಲು ಅವರ ಗೃಹಮಂತ್ರಿಗಳು ಎನ್.ಎಸ್.ಎ. ಮತ್ತು ಮಾಸಾದಂತಹ ಕರಾಳ ಶಾಸನಗಳನ್ನು ಮತ್ತೆ ತರಲು ಯತ್ನಿಸಿದ್ದರು. ರಾಷ್ಟ್ರೀಯರಂಗ-ಎಡಪಕ್ಷಗಳ ಬಲವಾದ ವಿರೋಧದಿಂದ ಈ ಮುಷ್ಕರಗಳನ್ನು ಮುರಿಯುವ ಕಾರ್ಮಿಕ-ವಿರೋಧಿ ಶಾಸನಗಳನ್ನು ತರಲಾಗಲಿಲ್ಲ. ಆದರೆ ಮುಷ್ಕರಗಳನ್ನು ಪ್ರತಿಬಂ

ಶೋಷಣೆ, ಅನ್ಯಾಯ ಪ್ರತಿಭಟಿಸಿದಂತೆ ಕಾರ್ಮಿಕರ ಕಾಲುಗಳಿಗೆ ಸಂಕೋಲೆ

ಧಿಸುವ ಶಾಸನ ತರುವ ಪ್ರಯತ್ನ ನಡೆದೇ ಇದೆ.

ಹೊಸ ಕೈಗಾರಿಕಾ ಶಾಸನ ತರುವ ಮೊದಲು ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚನೆ ನಡೆಸುವುದಾಗಿ ಕಾರ್ಮಿಕ ಮಂತ್ರಿಗಳು ಆಶ್ವಾಸನೆ ನೀಡಿದ್ದರೂ ಮೇಲೆ ಹೇಳಿದ ಅವಳಿ ರಕ್ಕಸರ ಅಪ್ಪಣೆಗಳನ್ನು ಪಾಲಿಸಲು ಏಕಪಕ್ಷೀಯವಾಗಿ ಈ ಶಾಸನವನ್ನು ತಯಾರಿಸಿ ಜಾರಿ ಮಾಡುವ ಸನ್ನಾಹ ನಡೆದಿದೆ. ಒಂದು ಉದ್ದಿಮೆಯಲ್ಲಿ ಯೂನಿಯನ್ ರಚಿಸುವ ವಿಧಾನದಿಂದ ಹಿಡಿದು ಒಂದು ಉದ್ದಿಮೆಯನ್ನು ಮುಚ್ಚುವ ವಿಧಾನದವರೆಗೂ ವ್ಯಾಪಕ ಅಂಶಗಳನ್ನು ಒಳಗೊಂಡ ತಿದ್ದುಪಡಿ ಮಸೂದೆ ಸಿದ್ಧವಾಗಿದೆಯಂತೆ.

ಈ ಮಸೂದೆಯ ಕೆಲವು ಮುಖ್ಯ ಅಂಶಗಳು ಈಗಿರುವ

(i) ಕೈಗಾರಿಕಾ ವಿವಾದಗಳ ಶಾಸನದಲ್ಲಿ ಒಂದು ಉದ್ದಿಮೆಯನ್ನು ಮುಚ್ಚಲು ಕನಿಷ್ಟ 90 ದಿನಗಳ ಮೊದಲು ಸಂಬಂಧಪಟ್ಟ ಸರಕಾರದ ಅನುಮತಿ ಕೇಳಬೇಕೆಂದಿದೆ. ಈ ಅಂಶವನ್ನು ತೆಗೆದು ಹಾಕುವ ಯೋಚನೆ ಸರಕಾರಕ್ಕಿದೆ. ಅಂದರೆ ಕಾರ್ಮಿಕರನ್ನು ಬೀದಿಗೆಸೆಯಲು ಬಾಗಿಲು ತೆರೆದು ಕೊಡುವ ಯೋಚನೆಯಿದು. ಈಗಾಗಲೇ ಮುಚ್ಚಿರುವ ಕಾರ್ಖಾನೆಗಳ 10 ಲಕ್ಷ ಕಾರ್ಮಿಕರು ಈ ಒಂದೇ ತಿದ್ದುಪಡಿಯಿಂದ ಬೀದಿ ಪಾಲಾಗುತ್ತಾರೆ.

(ii) ಈ ತಿದ್ದುಪಡಿ ವಿದೇಶೀ ಕಂಪೆನಿಗಳಿಗೆ ಒಂದು ಉದ್ದಿಮೆಯಲ್ಲಿರುವ ಬಂಡವಾಳವನ್ನು ತಮ್ಮ ಮನಬಂದಂತೆ ಆ ಉದ್ದಿಮೆಯಿಂದ ತೆಗೆದು ಬೇರೆಡೆಗೆ ಸಾಗಿಸಲು, ದೇಶದಿದ ಹೊರಗೆ ಕೂಡಾ ಒಯ್ಯಲು ಅವಕಾಶ ನೀಡುತ್ತದೆ. ಅಂದರೆ ಶ್ರೀಮಂತ ದೇಶಗಳ ಸಾಲಕ್ಕಾಗಿ ಪರಸ್ಪರ ಸ್ಪರ್ಧಿಸುತ್ತಿರುವ ಬಡ

ಪುಟ 6 ನೋಡಿ

...ಕಂಪನಿಗಳ ಕಾಯಿದೆ ...ದ್ದುಪಡಿ ತರುವ ಪ್ರಯ...ಿ ಮಾಡುತ್ತಲೇ ಇದೆ. ... ಪ್ರಕಾರ ಸುಸಂಘ...ಯನ್ನು ತರುವುದಾ...ಬಾಯಿಗಳ ಅವಶ್ಯಕತೆ ...ರ 2,200 ಕೋಟಿ ...ಕೊಡಿಸಲು ಸಾಧ್ಯವಾ...ಗೆ ಹೊಟ್ಟೆಯ ಮೇಲೆ ...ದೆ. ...ಸರಿನಲ್ಲಿ ಹೊಸ ತಂತ್ರ...ೀಕರಣ ಇವಕ್ಕೆ ಕಡಿಮೆ ...ಂದ ...ಡವಾಳಿಗರ ...ಇರುವ ...ರ್ಮಿಕರನ್ನು ...ಕ್ಕೇ ಈ ನೀತಿ. ... ರದ್ದಾಗಲೇಬೇಕು.

ಬೇಡಿಕೆ 3 :

ನಿರ್ಗಮನ
ನೀತಿ ಮತ್ತು
ರಾಷ್ಟ್ರೀಯ
ಪುನರುಜ್ಜೀವನ
ನಿಧಿಗಳನ್ನು
ತೊಡೆದು
ಹಾಕಬೇಕು

ಬೇಡಿಕೆ 12 :

ಉದ್ಯೋಗದ ಹಕ್ಕು ಮೂಲಭೂತ ಹಕ್ಕು ಎಂಬ ಖಾತರಿ ನೀಡಬೇಕು ಉದ್ಯೋಗವಿಲ್ಲದವರಿಗೆ ಉದ್ಯೋಗ ಭತ್ಯೆನೀಡಬೇಕು

ಪ್ರಕೃತಿ ಸಂಪನ್ಮೂಲವನ್ನು ಮಾನವೋಪಯೋಗಿಯನ್ನಾಗಿ ಮಾಡುವ ಪ್ರಕ್ರಿಯೆಯೇ ಉದ್ಯೋಗ. ಅದಕ್ಕೆ ಸಂಬಂಧಿಸಿದ ಸೇವಾಕ್ಷೇತ್ರವೂ ಇದರ ವ್ಯಾಪ್ತಿಗೆ ಬರುತ್ತದೆ ಮಾನವ ಜೀವನ ನಿರ್ವಹಣೆಗೆ ಉದ್ಯೋಗ ಅಗತ್ಯ ಎಂಬುದು ಇದರಿಂದ ಅರ್ಥವಾಗುತ್ತದೆ. ಇಂಥ ಒಂದು ಅವಶ್ಯಕತೆಯಿಂದ ವಂಚಿತವಾಗುವ ಸ್ಥಿತಿಯೇ ನಿರುದ್ಯೋಗ ಇದು ಬಂಡವಾಳಶಾಹಿ ವ್ಯವಸ್ಥೆಯ ಅನಿಷ್ಟ ಕೂಸು. ಅತ್ಯಂತ ಮುಂದುವರಿದ ಬಂಡವಾಳಶಾಹಿ ದೇಶದಿಂದ ಹಿಡಿದು ಬಂಡವಾಳಶಾಹಿ ಪಥದಲ್ಲಿ ಸಾಗಿರುವ ಬಡದೇಶಗಳವರೆಗೆ ಈ ಪಿಡುಗು ಸರ್ವೆ ಸಾಮಾನ್ಯವಾಗಿದೆ. ನಿರುದ್ಯೋಗ ಶಬ್ದಕೋಶದಲ್ಲಿಲ್ಲದ, ಸ್ಥಾನವಿದ್ದ ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳಲ್ಲಿ ಮುಕ್ತ ಮಾರುಕಟ್ಟೆ ಪದ್ಧತಿ ಕಾಲಿಡುತ್ತಿದ್ದಂತೆ ನಿರುದ್ಯೋಗದ ಮಾರಿ ಕಾಣಿಸಿಕೊಂಡಿದೆ.

ಇವೆಲ್ಲ ಏನೇ ಇರಲಿ, ಭಾರತದ ನಿರುದ್ಯೋಗ ಸಮಸ್ಯೆಯತ್ತ ಒಂದು ಪಕ್ಷಿ ನೋಟ ಹರಿಸೋಣ.

ದೇಶದ ನಿರುದ್ಯೋಗಿಗಳ ಹಾಲಿ ಸಂಖ್ಯೆ ಸುಮಾರು 13 ಕೋಟಿ. ಇದರಲ್ಲಿ ಶಿಕ್ಷಿತರೂ ಇದ್ದಾರೆ. ಸಾಮಾನ್ಯ ಪದವೀಧರರಲ್ಲದೆ ವೈದ್ಯಕೀಯ, ಎಂಜಿನಿಯರಿಂಗ್, ಪಾಲಿಟೆಕ್ನಿಕ್ ಮೊದಲಾದ ವೃತ್ತಿಪರ ಶಿಕ್ಷಣ ಪಡೆದವರೂ ಈ ಪಡೆಯಲ್ಲಿ ಇದ್ದಾರೆ. ಹಲವಾರು ಕಾರಣಗಳಿಗಾಗಿ, ಮುಖ್ಯವಾಗಿ ಸರಕಾರದ ಅಸಮರ್ಪಕ ನೀತಿಗಳಿಂದಾಗಿ ಲಕ್ಷಾಂತರ ಕೈಗಾರಿಕಾ ಘಟಕಗಳು ಅಸ್ವಸ್ಥಗೊಂಡು ಮುಚ್ಚಿ ಹೋಗಿ ಲಕ್ಷಾಂತರ ಕಾರ್ಮಿಕರು ಹಾಗೂ ಅವರ ಕುಟುಂಬಗಳು ಬೀದಿ ಪಾಲಾಗುತ್ತಿವೆ.

ನಾವು ಅಧಿಕಾರವಹಿಸಿಕೊಂಡಾಗ ಪಡೆದದ್ದು ಒಂದು 'ಗಂಭೀರ ಸ...' ಎಂದು ಸದಾ ಮೆಲುಕು ಹಾಕುವ ಹಣಕಾಸು ಮಂತ್ರಿಗಳು ಹೆಚ್ಚುತ್ತಿರುವ ನಿರುದ್ಯೋಗ ಕೂಡಾ ಈ 'ಗಂಭೀರ ಸನ್ನಿವೇಶ' ದ ಭಾಗವಾಗಿತ್ತು. ಎಂದು ಮಾತ್ರ ಎಂದೂ ಹೇಳಿಲ್ಲ. 1978-88 ರಲ್ಲಿ ತಮ್ಮ ದೇಶದ ಆರ್ಥಿಕದ ಬೆಳವಣಿಗೆ 3.5 ಶೇ. ದಿಂದ 5.3 ಶೇ ಕ್ಕೆ ಏರುತ್ತಿದ್ದಾಗಲೂ ಉದ್ಯೋಗವಕಾಶಗಳ ದರ 2-8 ಶೇ ದಿಂದ 1.3. ಶೇ. ಕ್ಕೆ ಇಳಿಯಿತು. ಉತ್ಪಾದನೆ ಏರಿತು. ಲಾಭ ಏರಿತು. ಶೇರು ಬೆಲೆಗಳು ಗಗನ ಮುಟ್ಟಿದವು. ಉದ್ಯೋಗಾವಕಾಶ ಮಾತ್ರ ಸಂಕುಂಚಿತಗೊಂಡಿತು ಏಕೆ? ಮನಮೋಹನ್ ಸಿಂಗರಿಗೆ ಅದು ಬೇಕಿಲ್ಲ.

ಕೈಗಾರಿಕಾ ರಂಗದಲ್ಲಿ ಉದ್ಯೋಗಾವಕಾಶದ ಭವಿಷ್ಯ ಮಸಕಾಗಿದೆ. ಸೇವಾಕ್ಷೇತ್ರದಲ್ಲಿಯೂ ಪರಿಸ್ಥಿತಿ ಒಳ್ಳೆಯದೇನಿಲ್ಲ. ಕೇಂದ್ರ ಸರಕಾರದ ಸಂಸ್ಥೆಗಳಲ್ಲಿ ಶೇಕಡಾ 10 ರಿಂದ 20 ರಷ್ಟು ಉದ್ಯೋಗಿಗಳನ್ನು

ಉದ್ಯೋಗದ ಹಕ್ಕು ಮೂಲಭೂತವಾದದು

ತೆಗೆದು ಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಳೆದ ಒಂದು ದಶಕದಿಂದ ನೇಮಕಾತಿ ಮೇಲೆ ನಿರ್ಬಂಧ ವಿಧಿಸಲಾಗಿದ್ದು ಇದೀಗ ಹೀಗೆ ಮಾಡಿ ಗಾಯದ ಮೇಲೆ ಬರೆ ಎಳೆಯಲಾಗುತ್ತಿದೆ. ಖಾಸಗೀಕರಣಕ್ಕೆ ಬಲವಾದ ಪ್ರತಿಪಾದನೆ, ಅದರಲ್ಲೂ ಮುಖ್ಯವಾಗಿ ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳನ್ನು ಬಹುರಾಷ್ಟ್ರೀಯರಿಗೆ ವಹಿಸಿಕೊಡುವ ಪ್ರಸ್ತಾವದಿಂದ ಲಾಭಗಳಿಕೆಗೆ ಪ್ರಾಧ್ಯಾನತೆ ಸಿಕ್ಕಿ ನೌಕರರ ಸಂಖ್ಯೆಗೆ ಕೊಡಲಿಯೇಟು ಬೀಳುವುದು ನಿಶ್ಚಿತ. ಆಧುನೀಕರಣದ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕಂಪ್ಯೂಟರೀಕರಣವನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಯುವಜನ ಭವಿಷ್ಯದ ಮೇಲೆ ಕಾರ್ಮೋಡ ಕವಿದಂತಾಗಿದೆ. ಸ್ವಯಂ ಉದ್ಯೋಗದಿಂದ ಸಮಸ್ಯೆ ಪರಿಹಾರವಾಗುತ್ತದೆನ್ನುವುದು ಬೂಟಾಟಿಕೆಯ ಮಾತೇ ಸರಿ.

ಐ.ಎಂ.ಎಫ್ -ವಿಶ್ವಬ್ಯಾಂಕ್‌ನ ನಿರ್ದೇಶನಗಳಿಗನುಸಾರವಾಗಿ ನೀತಿಯನ್ನು ರೂಪಿಸಲಾಗುತ್ತಿದೆಯೇ ಹೊರತು ದೇಶದ ನೈಸರ್ಗಿಕ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಗೆ ವಿವೇಕಯುತವಾದ ಕ್ರಮಗಳನ್ನು ಸರಕಾರ ಕೈಗೆತ್ತಿಕೊಳ್ಳುತ್ತಲೇ ಇಲ್ಲ. ಇದಕ್ಕೆ ನಮ್ಮ ಕಾಲಬುಡದಲ್ಲೇ ಇರುವ ವಿಜಯನಗರ ಉಕ್ಕಿನ ಕಾರ್ಖಾನೆಯ ದುಸ್ಥಿತಿಯನ್ನು ಉದಾಹರಿಸಬಹುದು. ವೈಜ್ಞಾನಿಕ ರೀತಿಯಲ್ಲಿ ಭೂ ಸುಧಾರಣೆ ಜಾರಿಯಾಗದಿರುವುದು ಸಮಸ್ಯೆಯ ಇನ್ನೊಂದು ದೊಡ್ಡ ಮೂಲವಾಗಿದೆ.

ಒಂದೆಡೆ ಅರ್ಹ ವಯಸ್ಕರು ಉದ್ಯೋಗವಿಲ್ಲದೆ ತೊಳಲಾಡುತ್ತಿರುವಾಗ ಅತೀ ಚಿಕ್ಕ ವಯಸ್ಸಿನ ಬಾಲಕ ಬಾಲಕಿಯರು ದಯನೀಯ ಸ್ಥಿತಿಯಲ್ಲಿ ದುಡಿಯುವ ವಿಪರ್ಯಾಸ ಇಲ್ಲಿದೆ. ಭಾರತದಲ್ಲಿ ಸುಮಾರು ಎರಡು ಕೋಟಿ ಮಂದಿ ಬಾಲ ಕಾರ್ಮಿಕರಿದ್ದು ಈ ವಿಚಾರದಲ್ಲಿ ಜಗತ್ತಿನಲ್ಲಿ ಮೊದಲ ಸ್ಥಾನದಲ್ಲಿದೆ.

ವೈಯುಕ್ತಿಕವಾಗಿ ವ್ಯಕ್ತಿಯೊಬ್ಬನ(ಳ)ನ್ನು ಹಿಂಡಿ ಹಿಪ್ಪೆಮಾಡುವ, ಪ್ರೀತಿ ಪ್ರೇಮದ ವೃಕ್ಷಕ್ಕೆ ವಿಷವುಣಿಸುವ ಕೌಟುಂಬಿಕ ಸಂಬಂಧಗಳಲ್ಲಿ ಹುಳಿ ಹಿಂಡುವ, ಮನುಷ್ಯನ- ಮನುಷ್ಯ ಸಂಬಂಧದಲ್ಲಿ ಬಿರುಕು ತರುವುದು ಸೇರಿದಂತೆ ಅನೇಕ ಸಾಮಾಜಿಕ ಕ್ಷೋಭೆಗಳಿಗೆ ಕಾರಣವಾಗಿರುವ ನಿರುದ್ಯೋಗ ಸಮಸ್ಯೆಯೆಂಬ ಆಕ್ಟೋಪಸ್ ಹಿಡಿತದಿಂದ ಸಮಾಜವನ್ನು ಮುಕ್ತಗೊಳಿಸಬೇಕು. ಉದ್ಯೋಗದ ಹಕ್ಕು ಮೂಲಭೂತ ಹಕ್ಕೆಂದು ಸಂವಿಧಾನದಲ್ಲಿ ಸೇರಿಸಿ ಅದನ್ನು ಅನುಷ್ಠಾನಕ್ಕೆ ತರುವುದರಿಂದ ಮಾತ್ರವೇ ಈ ದಿಕ್ಕಿನಲ್ಲಿ ಮಹತ್ವವಾದುದನ್ನು ಸಾಧಿಸಬಹುದು.

ಬೇಡಿಕೆ 13 :

ಭೂಮಿಯ ಕೇಂದ್ರೀಕರಣ ತಪ್ಪಿಸಿ ಭೂರಹಿತರಲ್ಲಿ ವಿತರಿಸುವ ಆಮೂಲಾಗ್ರ ಭೂ ಸುಧಾರಣೆ ತರಬೇಕು. ಗಂಡ ಹೆಂಡತಿಯರ ಜಂಟಿ ಹೆಸರುಗಳಲ್ಲಿ ಖಾತರಿ. ಪಟ್ಟಾಗಳನ್ನು ನೀಡಬೇಕು. ನಗರ ಪ್ರದೇಶಗಳಲ್ಲೂ ಸ್ಲಂ ಗುಚ್ಚಗಳನ್ನು ಸ್ಥಳಾಂತರಿಸಿದಾಗ ಇಂತಹ ಜಂಟಿ ಪಟ್ಟಾಗಳನ್ನು ನೀಡಬೇಕು.

ಸ್ವಾತಂತ್ಯ ಬಂದು ನಾಲ್ಕು ದಶಕಗಳಿಗೂ ಹೆಚ್ಚಾಗಿದ್ದರೂ ಇಂದಿಗೂ ಶೇ. ಹತ್ತರಷ್ಟು ಜನ ಜಮೀನುದಾರರು ದೊಡ್ಡ ರೈತರು ಶೇ. 50 ಕ್ಕೂ ಹೆಚ್ಚು ಭೂಮಿಯ ಒಡೆತನ ಹೊಂದಿದ್ದಾರೆ. ಇನ್ನುಳಿದ ಶೇ. 90 ರಷ್ಟು ಜನ ಶೇ. 50 ರಷ್ಟು ಭೂಮಿಯ ಒಡೆತನ ಹೊಂದಿದ್ದಾರೆ.

ಕೃಷಿ ಕೂಲಿಕಾರರ ಸಂಖ್ಯೆ ಏರುತ್ತಲೇ ಇದೆ. 1951 ರಲ್ಲಿ ರೈತರ ಸಂಖ್ಯೆಗೆ ಹೋಲಿಸಿದರೆ ಶೇ. 39 ರಷ್ಟಿದ್ದ ಕೃಷಿಕೂಲಿಕಾರರ ಸಂಖ್ಯೆ 1991 ರಲ್ಲಿ ರೈತರ ಸಂಖ್ಯೆಯ ಶೇ. 67 ರಷ್ಟಕ್ಕೆ ಏರಿತ್ತು. ಅಂದರೆ ಸರ್ಕಾರದ ನೀತಿಗಳಿಂದಾಗಿ ರೈತರು ಭೂಮಿಯಿಂದ ಸತತವಾಗಿ ಹೊರದಬ್ಬಲ್ಪಡುತ್ತಿದ್ದಾರೆ.

ಕೇಂದ್ರ ಸರ್ಕಾರ ಭೂ ರಹಿತರಿಗಾಗಿ ಹಂಚಲು 600 ಲಕ್ಷ ಎಕರೆ ಭೂಮಿಯನ್ನು ಗುರುತಿಸಿದ್ದರೂ ಕೂಡಾ ತಾನು ವಶಪಡಿಸಿಕೊಂಡಿರುವುದು ಬರೇ 62 ಲಕ್ಷ ಎಕರೆ ಮಾತ್ರ. ಅದರಲ್ಲಿಯೂ ರೈತರಿಗೆ ಹಂಚಿರುವುದು 48 ಲಕ್ಷ ಎಕರೆ. ಈ 48 ಲಕ್ಷ ಹಂಚಿಕೆಯಲ್ಲಿ ಬಹುಭಾಗ ನಡೆದಿರುವುದು ಪ. ಬಂಗಾಳ ಮತ್ತು ಕೇರಳಗಳ ರಾಜ್ಯದಲ್ಲಿ ಮಾತ್ರ.

ಕೃಷಿ ರಂಗದಲ್ಲಿರುವ ಅರೆ ಪಾಳೇಗಾರಿ ಸ್ವಭಾವದಿಂದಾಗಿ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಯುತ್ತಲಿದೆ. ಆಧುನಿಕ ಕೃಷಿ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಕೃಷಿ ಕೂಲಿಕಾರರ ಅದರಲ್ಲೂ ಹೆಚ್ಚಾಗಿ ಮಹಿಳೆಯರ ನಿರುದ್ಯೋಗ ಹೆಚ್ಚಿದೆ. ಇಂತಹ ಪರಿಸ್ಥಿತಿಗಳ ಪರಿಣಾಮಗಳನ್ನು ಮಹಿಳೆಯರು ಹೆಚ್ಚಾಗಿ ಅನುಭವಿಸಬೇಕಾಗುತ್ತದೆ. ಆದ್ದರಿಂದಲೇ ವಿಶ್ವಸಂಸ್ಥೆಯಂತಹ ಅನೇಕ ಸಂಸ್ಥೆಗಳು, ಜಮೀನಿನ ಪಟ್ಟಾವನ್ನು ಗಂಡಸಿನ ಹೆಸರಿಗೆ ನೀಡುವ ಬದಲು ಜಂಟಿಯಾಗಿ ಗಂಡ ಹೆಂಡತಿಯರ ಹೆಸರಿಗೆ ನೀಡಲು ಶಿಫಾರಸ್ಸು ಮಾಡಿವೆ. ಆದ್ದರಿಂದಲೇ ಜಮೀನು ಹಂಚಿಕೆಯ ಸಮಯದಲ್ಲಿ ಪಟ್ಟಾಗಳನ್ನು ಜಂಟಿಯಾಗಿ ನೀಡಬೇಕೆಂದು ನಾವು ಒತ್ತಾಯಿಸುತ್ತೇವೆ.

ನಗರ ಪ್ರದೇಶಗಳ ಸ್ಲಂಗಳಲ್ಲಿನ ಕತೆಯೂ ಇದೇ. ಇಂತಹ ಸ್ಲಂ ನಿವಾಸಿಗಳನ್ನು ಮರುವಸತಿ ಮಾಡುವಲ್ಲಿಯೂ ಸಹ ಗಂಡ ಹೆಂಡತಿಯರ ಹೆಸರಿಗೆ ಜಂಟಿ ಪಟ್ಟಾ ನೀಡಬೇಕೆಂದು ನಾವು ಒತ್ತಾಯ ಮಾಡುತ್ತೇವೆ.



-- ವಿಶ್ವ

ರಾಜಸ್ತಾನದಲ್ಲಿ ದಲಿತರ ಮೇಲೆ ದೌರ್ಜನ್ಯ

ಪರಿಶಿಷ್ಟ ಜಾತಿ ಜನರ ಮೇಲೆ ಭಾರೀ ದೌರ್ಜನ್ಯವೊಂದು ನಡೆದ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ದಕ್ಷಿಣ ರಾಜಸ್ತಾನದ ಮಂಡಲ್ ಎಂಬ ಸಣ್ಣ ಪಟ್ಟಣವೇ ಮೇಲ್ಜಾತಿಯವರ ಅಟ್ಟಹಾಸವನ್ನು ಮೂಕವಾಗಿ ಅನುಭವಿಸಿದ ಊರಾಗಿದೆ.

ಸಂಸಿ ಎಂಬುದು ಪರಿಶಿಷ್ಟ ಜಾತಿಯಲ್ಲಿನ ಒಂದು ಪಂಗಡ. ಈ ಜನರು ವಾಸಿಸುತ್ತಿದ್ದ ಇಡೀ ಪ್ರದೇಶವೇ ಸುಮಾರು 3000 ಜನರ ಕ್ಷಿಪ್ತ ಮೇಲ್ಜಾತಿ ಜನರ ಗುಂಪಿನ ದುಷ್ಕೃತ್ಯಗಳಿಂದ ತತ್ತರಿಸಿ ಹೋಗಿದೆ. ಜುಲೈ 11 ರ ರಾತ್ರಿ ಈ ಹೇಯ ಆಕ್ರಮಣ ನಡೆಯಿತು (ಭಿಲ್ವಾರಾ ಜಿಲ್ಲೆಯ ಮಂಡಲ್ ಪಟ್ಟಣದ ಒಂದು ಮೂಲೆಯಲ್ಲಿ ಸಂಸಿ ಪ್ರದೇಶವಿದೆ) ಆಕ್ರಮಣ ನಡೆಸಿದ ಮೇಲ್ಜಾತಿಯ ಮಂದಿ ಸಂಸಿ ಜನರ ಮನೆಗಳನ್ನು ಸುಟ್ಟು ಹಾಕಿದರು ಹಾಗೂ ಲೂಟಿ ಮಾಡಿದರು.

ಅಪಾಯವರಿತ ಸಂಸಿಯ ಬಹುತೇಕ ಜನರು ಕತ್ತಲೆಯಲ್ಲಿ ಪಾರಾಗಿ ಪ್ರಾಣವುಳಿಸಿಕೊಂಡರು. ತಮ್ಮ ಪ್ರದೇಶಕ್ಕೆ ಹಿಂದಿರುಗಿ ಬರಲು ಈಗಲೂ ನಿರಾಕರಿಸುತ್ತಿದ್ದಾರೆ. ವರ್ತಕರು ಹಾಗೂ ಜಾಟ್ ರೈತರು ಪಟ್ಟಣದಲ್ಲಿ ಭಯದ ವಾತಾವರಣವನ್ನು ಉಂಟುಮಾಡಿರುವುದು ಇದಕ್ಕೆ ಕಾರಣವಾಗಿದೆ.

ಹಣಕಾಸಿನ ವಿಷಯದಲ್ಲಿ ಇಬ್ಬರು ಸಂಸಿ ಯುವಕರು ಮತ್ತು ಒಬ್ಬ ವರ್ತಕನ ಮಧ್ಯೆ ಉಂಟಾದ ಸಣ್ಣ ಜಗಳವೇ ಈ ದೊಡ್ಡ ಅನಾಹುತದ ಮೂಲ ಎಂದು ಹೇಳಲಾಗಿದೆ.

ದಲಿತರ ಮೇಲೆ ದೇಶಾದ್ಯಂತ ನಡೆಯುತ್ತಿರುವ ದೌರ್ಜನ್ಯಗಳ ಪಟ್ಟಿಯಲ್ಲಿ ಮಂಡಲ್ ಗ್ರಾಮ ಸೇರ್ಪಡೆಯಾಗಿದೆ.

ತ್ರಿಪುರಾ ಉಗ್ರಗಾಮಿಗಳ ದುಷ್ಕೃತ್ಯ

ಅಖಿಲ ತ್ರಿಪುರಾ ಬುಡಕಟ್ಟು ಪಡೆ (ಎ.ಟಿ.ಟಿ.ಎಫ್)ಗೆ ಸೇರಿದ ದುಷ್ಕರ್ಮಿಗಳು ಶಿಕ್ಷಕನೊಬ್ಬನನ್ನು ಶಾಲಾ ಕೊಠಡಿಯಲ್ಲೇ ಕೊಂದು ಹಾಕಿದ ಘೋರ ಘಟನೆಯೊಂದು ಜು. 21ರಂದು ಉತ್ತರ ತ್ರಿಪುರಾ ಜಿಲ್ಲೆಯ ಸುಧರಂಬರಾದಲ್ಲಿ ನಡೆದಿದೆ.

ತರಗತಿಗಳು ನಡೆಯುತ್ತಿದ್ದಾಗ ಕೊಠಡಿಗೆ ನುಗ್ಗಿದ ಉಗ್ರಗಾಮಿಗಳು ಶಿಕ್ಷಕ ನಾರಾಯಣ ಫಿಲ್‌ರನ್ನು ವಿದ್ಯಾರ್ಥಿಗಳ ಎದುರಿನಲ್ಲೇ ಕಡಿದು ಕೊಂದು ಹಾಕಿದರು.

ಭ್ರಷ್ಟಾಚಾರ ವಿರೋಧಿ ಹೋರಾಟಕ್ಕೆ ಜಯ

ಕೇರಳದ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಜಯರಾಮ ಪಡಿಕ್ಕಲ್‌ರ ಮೇಲಿನ ಭ್ರಷ್ಟಾಚಾರ ಆರೋಪಗಳು ಸಾಬೀತಾಗಿದ್ದ ವಿಷಯವನ್ನು 'ಐಕ್ಯರಂಗ'ದ ಕಳೆದ ಸಂಚಿಕೆಯಲ್ಲಿ ಓದಿರುವಿರಿ. ತನಿಖಾ ವರದಿಯನ್ನು ಫಲಿತಾಂಶವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಪತ್ರಿಕೆ 'ದೇಶಾಭಿಮಾನಿ' ಬಹಿರಂಗಪಡಿಸಿತ್ತು. ವಿಷಯ ಈಗ ಅಧಿವೇಶನ ನಡೆಯುತ್ತಿರುವ ಕೇರಳ ವಿಧಾನ ಸಭೆಯಲ್ಲಿ ಪ್ರಸ್ತಾವಕ್ಕೆ ಬಂದು ಭಾರೀ ವಿವಾದ ಉಂಟಾಗಿತ್ತು.

ಇದೀಗ, ರಜೆ ಮೇಲೆ ತೆರಳುವಂತೆ ಪಡಿಕ್ಕಲ್ ಮತ್ತು ಇಂಟೆಲಿಜೆನ್ಸ್ ವಿಭಾಗದ ಅಡಿಷನಲ್ ಡಿ.ಜಿ.ಪಿ. ಟಿ.ವಿ. ಮಧುಸೂದನ್‌ನರಿಗೆ ಕೇರಳ ಸರಕಾರ ಸೂಚಿಸಿದೆ. ಡಿ. ಜಿ.ಪಿ.ಯ ಕಾರ್ಯಭಾರವನ್ನು ನಿರ್ವಹಿಸುವಂತೆ ಇಂಟೆಲಿಜೆನ್ಸ್ ಐ.ಜಿ. ಎನ್. ಕೃಷ್ಣನ್ ನಾಯಕರಿಗೆ ನಿರ್ದೇಶನ ಕೊಟ್ಟಿದೆ.

ಪೊಲೀಸ್ ಇಲಾಖೆ ಉನ್ನತ ಮಟ್ಟದ 'ಒಡೆದ ಮನೆಯಾಗಿದೆ' ಎಂದು ಕಾಂಗ್ರೆಸ್ ನಾಯಕರು ಕೂಡ ಟೀಕಿಸುತ್ತಿದ್ದಾರೆ. ಪಡಿಕ್ಕಲ್ ಮತ್ತು ಮಧುಸೂದನನ್ ಇಬ್ಬರೂ ಕರುಣಾಕರನ್ ಆಪ್ತರು ಹಾಗೂ ತುರ್ತುಪರಿಸ್ಥಿತಿ ಅವಧಿಯಲ್ಲಿ ದೌರ್ಜನ್ಯಗಳನ್ನು ನಡೆಸಿದವರು ಎಂಬುದು ಗಮನಿಸಬೇಕಾದ ವಿಚಾರ. ರಾಜ್ಯದಲ್ಲಿ ಕಾಂಗ್ರೆಸ್ ಸಾಂಸ್ಥಿಕ ಚುನಾವಣೆಗಳು ನಡೆದಾಗಲೂ ಇವರಿಬ್ಬರು ಅದರಲ್ಲಿ ಹಸ್ತಕ್ಷೇಪ ಮಾಡಿದ್ದರು. ಅದನ್ನು ಕರುಣಾಕರನ್ ವಿರೋಧಿ ಬಣದ ಎ.ಕೆ. ಅಂತೋಣಿ ಕಟುವಾಗಿ ಟೀಕಿಸಿದ್ದರು.

ಭ್ರಷ್ಟರೆಂದು ಸಾಬೀತಾದ ಅಧಿಕಾರಿಗಳನ್ನು ರಜೆಯ ಮೇಲೆ ಕಳಿಸಿರುವುದು ಶಿಕ್ಷೆಯ ಅಂಗವಾಗಿದೆ. ಇದು ಕೇರಳ ಜನರ ಭ್ರಷ್ಟಾಚಾರ ವಿರೋಧಿ ಚಳುವಳಿಗೆ ಸಂದ ವಿಜಯವಾಗಿದೆ.

ಡಿ.ವೈ.ಎಫ್.ಐ ಜಾಥಾಗಳು

ಕೇರಳದ ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್ ಸರಕಾರದ ಭ್ರಷ್ಟ ವ್ಯವಹಾರಗಳು ಮತ್ತು ಅದು ಯುವಜನರಿಗೆ ಮಾಡಿರುವ ದ್ರೋಹಕ್ಕೆ ಪ್ರತಿಭಟನೆ ವ್ಯಕ್ತಪಡಿಸಲು ಡಿ. ವೈ.ಎಫ್.ಐ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಾಥಾಗಳನ್ನು ನಡೆಸಿತು. ಜುಲೈ 19 ರಿಂದ 21ರವರೆಗೆ ಒಟ್ಟು ಮೂರು ದಿಗಳ ಕಾಲ ನಡೆದ ಜಾಥಾಗಳಲ್ಲಿ ಸುಮಾರು 60 ಸಾವಿರ ಕಾರ್ಯಕರ್ತರು ಭಾಗವಹಿಸಿದ್ದರು. ಇದು ಡಿ.ವೈ.ಎಫ್.ಐ ಚಳುವಳಿಯ ಎರಡನೇ ಹಂತದ ಕಾರ್ಯಕ್ರಮವಾಗಿತ್ತು.

ಕಲ್ಲಿಕೋಟೆಯಲ್ಲಿ ಜಾಥಾದಲ್ಲಿ ಪಾಲ್ಗೊಂಡ ಕಾರ್ಯಕರ್ತರನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಇ.ಕೆ. ನಯನಾರ್ ಮಾತನಾಡಿದರು. ಸಮಸ್ಯೆಗಳನ್ನು ಈಗಲೇ ಪರಿಹರಿಸದಿದ್ದರೆ ಡಿ.ವೈ.ಎಫ್.ಐ ಮತ್ತು ಇತರ ವಿಭಾಗಗಳ ವ್ಯಾಪಕ ಹೋರಾಟವನ್ನು ಕರುಣಾಕರನ್ ಸರಕಾರ ಎದುರಿಸಬೇಕಾಗುತ್ತದೆಂದು ನಾಯನಾರ್ ಎಚ್ಚರಿಕೆ ನೀಡಿದರು.

ಉತ್ತರ ಭಾರತದಲ್ಲಿ ಪ್ರಕೃತಿ ವಿಕೋಪ

ಹರ್ಯಾಣ, ಪಂಜಾಬ್, ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ, ಗುಜರಾತ್ ಮತ್ತು ಇತರ ಕೆಲವು ರಾಜ್ಯಗಳು ಮಳೆಯ ಪ್ರಕೋಪದಿಂದ ನಲುಗುತ್ತಿವೆ. ಇತ್ತೀಚೆಗೆ ಬಂದ ವರದಿಗಳ ಪ್ರಕಾರ ಈ ಬಾರಿಯ ಈ ಪ್ರಕೃತಿ ವಿಕೋಪಕ್ಕೆ ಇದುವರೆಗೆ ಬಲಿಯಾದವರ ಸಂಖ್ಯೆ ಒಂದು ಸಾವಿರವನ್ನು ದಾಟಿದೆ. ಸಾವಿರಾರು ಮನೆಗಳು ಭಾಗಶಃ ಹಾಗೂ ಪೂರ್ಣವಾಗಿ ನಾಶವಾಗಿ ಅನೇಕಾನೇಕ ಕುಟುಂಬಗಳು ಬೀದಿಪಾಲಾಗಿವೆ.

ಈ ಹಿನ್ನೆಲೆಯಲ್ಲಿ ಜನರಿಗೆ ತುರ್ತು ಪರಿಹಾರಗಳನ್ನು ಒದಗಿಸಲಿಕ್ಕಾಗಿ ಈ ಎಲ್ಲಾ ರಾಜ್ಯಗಳಲ್ಲಿನ ಆಡಳಿತ ಯಂತ್ರಗಳು ಚುರುಕುಗೊಂಡು ಯುದ್ಧೋಪಾದಿಯಲ್ಲಿ ಕಾರ್ಯಾಚರಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ (ಎ.ಐ.ಕೆ.ಎಸ್.) ಮತ್ತು ಅಖಿಲ ಭಾರತ ಕೃಷಿ ಕೂಲಿಗಾರರ ಸಂಘ (ಎ.ಐ.ಎ. ಡಬ್ಲ್ಯುಯು)ಗಳು ಒತ್ತಾಯಿಸಿವೆ.

ಜನಸಾಮಾನ್ಯರಿಗೆ, ಅದರಲ್ಲೂ ವಿಶೇಷವಾಗಿ ಭೂರಹಿತ ಬಡವರು ಕೃಷಿಕೂಲಿಗಾರರು ತುಂಬಾ ತೊಂದರೆಗೆ ಒಳಗಾಗಿದ್ದು ಅವರಿಗೆ ಸಾಕಷ್ಟು ಪರಿಹಾರಗಳನ್ನು ತುರ್ತಾಗಿ ಒದಗಿಸಬೇಕೆಂದು ಅವು ಆಗ್ರಹಪಡಿಸಿವೆ.

ಅವು ಈ ಸಂಬಂಧ ನವದೆಹಲಿಯಲ್ಲಿ ಒಂದು ಹೇಳಿಕೆಯನ್ನು ನೀಡಿವೆ. ಕಾಲುವೆಗಳು ಹಾಗೂ ಒಡ್ಡುಗಳು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಒಡೆದು ಹೋಗಿ ಜನರಿಗೆ ಸಂಕಷ್ಟ ಉಂಟಾಗಿರುವ ಪ್ರಕರಣಗಳಲ್ಲಿ ಅಂಥ ಅಧಿಕಾರಿಗಳನ್ನು ಗುರುತಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಉಭಯ ಸಂಘಟನೆಗಳು ಆಗ್ರಹಪಡಿಸಿವೆ.

ಕೇಂದ್ರ ಸರಕಾರದ ಸತತ ಉದಾಸೀನತೆ ಹಾಗೂ ಪ್ರವಾಹ ನಿಯಂತ್ರಣ ಮತ್ತು ಭೂಮಿಯ ಮೇಲ್ಭಾಗದ ನೀರನ್ನು ಬಳಸಿಕೊಳ್ಳುವ ನೀರಾವರಿ ಯೋಜನೆಗಳ ಬಗ್ಗೆ ಅವರ ನಿರ್ಲಕ್ಷ್ಯ ಧೋರಣೆ ಈ ಅನಾಹುತದಲ್ಲಿ ಪಾತ್ರವಹಿಸಿವೆ. ಅದು ಖಂಡನೀಯ ಎಂದು ರೈತ ಸಂಘ ಮತ್ತು ಕೃಷಿ ಕೂಲಿಗಾರರ ಸಂಘಟನೆಗಳು ಅಭಿಪ್ರಾಯಪಟ್ಟಿವೆ.

ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳು ಪರಿಹಾರ ಕಾರ್ಯದಲ್ಲಿ ಧುಮುಕುವಂತೆ ಅವು ವಿನಂತಿಸಿವೆ.

ರಾಷ್ಟ್ರೀಯ ಏಕತೆಯಲ್ಲಿ ರೈಲ್ವೆ ಮಾರ್ಗ ವಿಸ್ತರಣೆಯ ಪಾತ್ರ

* ಅಗರ್ತಲಾವರೆಗೆ ರೈಲ್ವೆ ಸಂಪರ್ಕವನ್ನು ವಿಸ್ತರಿಸಬೇಕು ಹಾಗೂ ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಕೇಂದ್ರ ಸರಕಾರ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಪಡಿಸಿ ಯುವಜನರು ಇತ್ತೀಚೆಗೆ ಅಗರ್ತಲಾದಲ್ಲಿ ಬೃಹತ್ ಮಹಾಪ್ರದರ್ಶನ ನಡೆಸಿದರು. ಡಿ.ವೈ.ಎಫ್ ಐ ಮತ್ತು ಬುಡಕಟ್ಟು ಯುವಜನ ಫೆಡರೇಷನ್ (ಟಿ.ವೈ.ಎಫ್) ಸಂಯುಕ್ತವಾಗಿ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದವು. ಬುಡಕಟ್ಟು ಮತ್ತು ಬುಡಕಟ್ಟೇತರ ಯುವಜನರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಡಿ.ವೈ.ಎಫ್.ಐ ಅಧ್ಯಕ್ಷ ಎಂ.ಎ. ಬೇಬಿ ಮತ್ತು ಪ್ರಧಾನ ಕಾರ್ಯದರ್ಶಿ ಮಹ ಎದ್ ಸಲೀಂ ಚಳುವಳಿಗಾರರನ್ನುದ್ದೇಶಿಸಿ ಮಾತನಾಡಿದರು. ರಾಜ್ಯದ ಅಭಿವೃದ್ಧಿಗಾಗಿ ಯುವಜನರು ಮುಂದಿಟ್ಟಿರುವ ಬೇಡಿಕೆಗಳಿಗೆ ಅವರು ಪೂರ್ಣ ಬೆಂಬಲ ವ್ಯಕ್ತಪಡಿಸಿದರು. ರಾಜ್ಯವನ್ನು ಕಡೆಗಣಿಸುತ್ತಿರುವ ಕೇಂದ್ರವನ್ನು ಅವರು ತರಾಟೆಗೆ ತೆಗೆದುಕೊಂಡರು.

ರೈಲ್ವೆ ಮಾರ್ಗದ ವಿಸ್ತರಣೆಯಿಲ್ಲದೆ ಈ ವಲಯದ ಅಭಿವೃದ್ಧಿ ಅಸಾಧ್ಯ ಎಂದು ಸಲೀಂ ಅಭಿಪ್ರಾಯಪಟ್ಟರು. ರಾಷ್ಟ್ರೀಯ ಏಕತೆ ಸಾಧನೆಗೆ ರೈಲ್ವೆ ಮಾರ್ಗದ ವಿಸ್ತರಣೆ ಹಾಗೂ ತ್ವರಿತ ಕೈಗಾರಿಕಾ ಅಭಿವೃದ್ಧಿ ಅಗತ್ಯ ಎಂದು ಪ್ರತಿಪಾದಿಸಿದರು. ತ್ರಿಪುರಾ ರಾಜ್ಯದ ಯುವಜನರ ಈ ಮಹತ್ವದ ಬೇಡಿಕೆಗಳನ್ನು ಸಂಸತ್ತಿನಲ್ಲಿ ಪ್ರಸ್ತಾವಿಸುವುದಾಗಿ ಉಭಯ ನಾಯಕರು ಹೇಳಿದರು. ಅವರಿಬ್ಬರೂ ರಾಜ್ಯಸಭೆಯ ಸದಸ್ಯರಾಗಿದ್ದಾರೆ.

ಮಹಿಳೆಯ ಅಪೂರ್ವ ವಿಜಯ

ಫರೀದ್‌ಕೋಟ್ ತನ್ನ ನಡತೆ ಚೆನ್ನಾಗಿಲ್ಲ ಎಂಬ ನಿರ್ಣಯವೊಂದನ್ನು ಅಂಗೀಕರಿಸಿದ ಗ್ರಾಮಪಂಚಾಯತ್‌ನ ವಿರುದ್ಧ ಮಹಿಳೆಯೊಬ್ಬರು ನ್ಯಾಯಾಲಯಕ್ಕೆ ದೂರು ಸಲ್ಲಿಸಿ ಜಯಗಳಿಸಿದ ಕುತೂಹಲಕಾರಿ ಘಟನೆಯೊಂದು ನಡೆದಿದೆ. ಇಲ್ಲಿನ ಮುಕ್ತಸರ್‌ನ ಪ್ರಥಮ ದರ್ಜೆ ನ್ಯಾಯಾಲಯ ಮಹಿಳೆಯ ದಾವೆಯನ್ನು ಎತ್ತಿ ಹಿಡಿದು ಒಟ್ಟು 33 ಮಂದಿಯನ್ನು ಅಪರಾಧಿಗಳೆಂದು ಪರಿಗಣಿಸಿ ಒಂದು ವರ್ಷದ ಶಿಕ್ಷೆ ವಿಧಿಸಿತು. ಮಾತ್ರವಲ್ಲದೆ ಪ್ರತಿಯೊಬ್ಬರು ಮಹಿಳೆಗೆ ತಲಾ ಒಂದು ಸಾವಿರ ರೂಪಾಯಿ ನೀಡಬೇಕೆಂದೂ ತೀರ್ಪು ನೀಡಿತು.

'ಆದಿವಾಸಿ ಸಾಕ್ಷರತೆ ಒಂದು ಕಪಟ ನಾಟಕ'

ಕೇರಳದ ತಿರುವನಂತಪುರ ಜಿಲ್ಲೆಯ ಆದಿವಾಸಿ ಪ್ರದೇಶಗಳಲ್ಲಿ ನಡೆಸಲಾದ ಸಾಕ್ಷರತಾ ಕಾರ್ಯಕ್ರಮ ತೀರಾ ನಿಷ್ಪ್ರಯೋಜಕ- ಹೀಗೆಂದು ಆಪಾದನೆ ಮಾಡಿರುವವರು ಬೇರಾರೂ ಅಲ್ಲ, ಸ್ವತಃ ಆದಿವಾಸಿ ನಾಯಕ ಹಾಗೂ ಚರುಮೂಡು ಯುವ ಕಾಂಗ್ರೆಸ್ ನಾಯಕ ಭಾಸ್ಕರನ್ ಕಣಿ.

ಶಿಕ್ಷಕರು ನಿಯಮಿತವಾಗಿ ಬರುವುದಿಲ್ಲ. ವೇತನ ನೀಡುವುದಾಗಿ ಭರವಸೆ ನೀಡಲಾಗಿತ್ತು. ಆ ಆಶ್ವಾಸನೆಯನ್ನು ಪಾಲಿಸದಿರುವುದರಿಂದ ಕಲಿಸುವವರು ಬರುತ್ತಲೇ ಇಲ್ಲ. ಕಾರ್ಯಕ್ರಮದ ಶೇಕಡ 10 ರಷ್ಟು ಕೂಡಾ ಅನುಷ್ಠಾನಗೊಂಡಿಲ್ಲ ಎಂದು ಕಣಿ ಹೇಳಿದ್ದಾರೆ.

ಆದಿವಾಸಿ ಪ್ರದೇಶಗಳು ಇನ್ನು ಅನಕ್ಷರತೆಯ ಕಗ್ಗತ್ತಲಲ್ಲಿ ತೊಳಲಾಡುತ್ತಿದ್ದರೂ ಅಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಲಾಗಿದೆಯೆಂದು ಸರಕಾರ ಘೋಷಿಸಿದೆ ಎಂದು ಕಣಿ ಟೀಕಿಸಿದ್ದಾರೆ. ದೇಶದಲ್ಲೇ ಮೊದಲನೆ ಸಂಪೂರ್ಣ 'ಸಾಕ್ಷರ ರಾಜ್ಯ' ಎಂದು ಘೋಷಿಸಲ್ಪಟ್ಟ ಕೇರಳದಲ್ಲಿ ಆನಂತರ ಯು.ಡಿ.ಎಫ್. ಸರಕಾರ ಬಂದಾಗ ಮಾಡಿದ ಹಲವು ನಾಟಕಗಳಲ್ಲಿ 'ಆದಿವಾಸಿ ಸಾಕ್ಷರತೆ' ಎಂಬ ನಾಟಕವೂ ಒಂದು. ಕಾಂಗ್ರೆಸ್ ಮುಖಂಡನ ಈ ಅಭಿಪ್ರಾಯವನ್ನು ಅದರ ಹಿಂದಿರುವ ಕಪಟವನ್ನು ಬಯಲಿಗೆಳೆದಿದೆ. ಇದು ಕರುಣಾಕರನ್ ಸರಕಾರದ ಅವಾಂತರಗಳ ಇನ್ನೊಂದು ಮುಖವಾಗಿದೆ.

ಬೇಡಿಕೆ 5 :

ಪುಟ 5ರಿಂದ

ನಿಧಿಗಳು ಬಿಟ್ಟು ಉಳಿದೆಲ್ಲಾ ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸದಸ್ಯರು ಇದನ್ನು ಒಪ್ಪಿಕೊಂಡರಂತೆ. ಆದರೆ ಇದಕ್ಕೆ ಸಂಘಟಿತ ಕಾರ್ಮಿಕ ಆಂದೋಲನದಿಂದ ಬಂದ ಭಾರೀ ಪ್ರತಿಕ್ರಿಯೆಯನ್ನು ಕಂಡು ಸರಕಾರ ಸದ್ಯ ಇದನ್ನು ಜ್ಯಾರಿಗೆ ತರುವುದಿಲ್ಲ ಎಂದು ಹೇಳಿದೆ. ಆದರೆ ಐ.ಎಂ.ಎಫ್ ಚುಚ್ಚುತ್ತಲೇ ಇರುವಾಗ ಎಷ್ಟು ದಿನ ಸುಮ್ಮನಿರಬಲ್ಲದೋ ನೋಡಬೇಕು.

ಸಂಘಟಿತ ಕಾರ್ಮಿಕರು ಹೆಚ್ಚು ಸಂಬಳ ಕೇಳುವುದರಿಂದಾಗಿ ಹಣದುಬ್ಬರವಾಗುತ್ತಿದೆ. ಎಂದು ಸರಕಾರದ ಪ್ರಚಾರವಂತೂ ನಿಂತಿಲ್ಲ. ತಮಾಷೆಯೆಂದರೆ ಹಣದುಬ್ಬರ ಇಳಿಯುತ್ತಿದೆ ಎಂದು ಸರಕಾರವೇ ಸಾರುತ್ತಿರುವಾಗ ಹಣದುಬ್ಬರದ ನೆವ ಮುಂದೆ ಮಾಡಿ ವೇತನ-ತುಟ್ಟಿಭತ್ಯೆ ಮೇಲೆ ಪ್ರಹಾರ ಮಾಡುವ ಪ್ರಯತ್ನ ನಡೆದಿದೆ. ಭಾರತದಲ್ಲಿ ಸಂಬಳ ಹೆಚ್ಚಳದಿಂದ ಹಣದುಬ್ಬರ ಎಂದೂ ಆಗಿಲ್ಲ ಎಂದು ಸಾಬೀತಾಗಿದ್ದರೂ ದೇಶದ ಪ್ರಧಾನ ಮಂತ್ರಿಗಳಿಗೆ ಮುಂದಿನ 5 ವರ್ಷಗಳಲ್ಲಿ ತುಟ್ಟಿಭತ್ಯೆಗಾಗಿ 40 ಸಾವಿರ ಕೋಟಿ ರೂ. ಬೇಕಾಗುತ್ತಿದೆ ಎಂದು ತಿಳಿದಾಗ ಭಾರೀ ದಿಗಿಲಾಯಿತಂತೆ. ಆದರೆ ಪ್ರತಿ ವರ್ಷ 50 ಸಾವಿರ ಕೋಟಿ ರೂ. ಕಪ್ಪು ಹಣ ಸೃಷ್ಟಿಯಾಗುತ್ತಿದೆ ಎಂಬ ಬಗ್ಗೆ ಅವರಿಗೆ ಕೊಂಚವೂ ಬೇಸರ ಆಗುತ್ತಿಲ್ಲ. ವಾಸ್ತವವಾಗಿ 1986-87 ರಿಂದ 1991-82 ನಡುವೆ ಖಾಸಗೀ ಕಂಪನಿಗಳ ಒಟ್ಟು ಉತ್ಪಾದನೆಯಲ್ಲಿ ಸಂಬಳ ಸಾರಿಗೆಯ ಪಾಲು 12 ಶೇ. ದಿಂದ 8.7 ಶೇ. ಕ್ಕಿಳಿದಿದೆ. ಸಾರ್ವಜನಿಕ ವಲಯದಲ್ಲೂ ಅಷ್ಟೆ, ಉದಾಹರಣೆಗೆ ಎಲ್. ಐ.ಸಿ.ಯ ಒಟ್ಟು ಖರ್ಚಿನಲ್ಲಿ ವೇತನದ ಭಾಗ 1979-80 ರಲ್ಲಿ 9.2 ಶೇ ಇದ್ದಿದ್ದು 1991-92 ರಲ್ಲಿ 6.24 ಶೇ. ಕ್ಕಿಳಿದಿದೆ.

ದೇಶದ ಈಗಿನ ಪರಿಸ್ಥಿತಿಯಲ್ಲಿ ಖರ್ಚುಗಳ ಮೇಲೆ ಕಡಿವಾಣ ಹಾಕಬೇಕು ಎಂಬುದನ್ನು ದುಡಿಯುವ ಜನ ಅಲ್ಲಗಳೆಯುವುದಿಲ್ಲ. ಆದರೆ ಇದು ಮೇಲಿನಿಂದ ಆರಂಭವಾಗಬೇಕು. ಶ್ರೀಮಂತರ ದುಂದುವೆಚ್ಚಕ್ಕೆ ಮೊದಲು ಕಡಿವಾಣ ಹಾಕಬೇಕು. ಖಾಸಗೀ ವಲಯದ ತಿಮಿಂಗಿಲಗಳು ಸೂಪರ್ ಲಾಭ ಗಳಿಸುವುದಕ್ಕೆ ಕಡಿವಾಣ ಹಾಕಬೇಕು. ರೂಪಾಯಿಗಳ ತೆರಿಗೆ ವಂಚನೆಯನ್ನು ತಡೆಯಬೇಕು. ಇವನ್ನೆಲ್ಲಾ ಮಾಡುವ ಬದಲು ಇಂತಹವರಿಗೇ ಎಲ್ಲಾ ಸೌಲಭ್ಯಗಳನ್ನು ರಿಯಾಯ್ತಿಗಳನ್ನು ನೀಡುವ ಸರಕಾರಕ್ಕೆ ದುಡಿಯುವ ಜನಗಳ ಸಂಬಳದ ಮೇಲೆ ಕೆಂಗಣ್ಣು ಬೀರಲು ಏನು ಹಕ್ಕಿದೆ? ಆದ್ದರಿಂದ ದೇಶದ ಕಠಿಣ ಪರಿಸ್ಥಿತಿಯ ನೆವ ಮುಂದೆ ಮಾಡಿ ಕಾರ್ಮಿಕರು, ನೌಕರರು ಕೇಳುತ್ತಿರುವ ವೇತನ ಪರಿಷ್ಕರಣಗಳನ್ನು ನಿರಾಕರಿಸದೆ ಸಾಮೂಹಿಕ ಚೌಕಾಸಿಯ ಮೂಲಕ ವೇತನ ಮಾತುಕತೆಗಳು ನಡೆಯಲೇಬೇಕು ಎಂದು ದುಡಿಯುವ ಜನ ಆಗ್ರಹಪಡಿಸುತ್ತಿದ್ದಾರೆ

ಬೇಡಿಕೆ : 6

ಪುಟ 5ರಿಂದ

ಲುಪಡಿಸಿದೆ. ಶೇರು ಮಾರಾಟದ ಬಗ್ಗೆ ಸರ್ಕಾರವೇ ನಿರೂಪಿಸಿದ ನೀತಿಗಳು ಹಾಗೂ ನಿಯಮಾವಳಿಗಳನ್ನು ಮುರಿಯಲಾಗಿದೆ. ಸರ್ಕಾರಕ್ಕೆ ಒಟ್ಟು 10 ರಿಂದ 12 ಸಾವಿರ ಕೋಟಿ ರೂ. ಗಿಂತಲೂ ಹೆಚ್ಚು ನಷ್ಟವಾಗಿದೆ.

ಸರ್ಕಾರ ನಿರೂಪಿಸಿದ ನೀತಿಗಳಲ್ಲಿ 244 ಕೈಗಾರಿಕೆಗಳಲ್ಲಿ 44 ರ ಶೇರು ಮಾರಾಟ ಮಾತ್ರ ಮಾಡಬೇಕೆಂಬುದು ಒಂದು ವಿದ್ಯುತ್ ಉತ್ಪಾದನೆ ಮತ್ತು ಸಾಗಾಣಿಕೆ, ತೈಲ, ರಕ್ಷಣೆ ಮುಂತಾದ ಕ್ಷೇತ್ರದ ಕೈಗಾರಿಕೆಗಳ ಶೇರು ಮಾರಾಟ ಮಾಡಬಾರದು ಎಂಬುದೂ ನೀತಿಯ ಭಾಗವಾಗಿತ್ತು. ಆದರೆ ಅದನ್ನು ಉಲ್ಲಂಘಿಸಲಾಯಿತು. ಅದೇ ರೀತಿ ಈಗಾಗಲೇ ಸಾರ್ವಜನಿಕರಿಂದ ಶೇರು ಬಂಡವಾಳ ಶೇಖರಿಸುತ್ತಿದ್ದ ಕೈಗಾರಿಕೆಗಳಲ್ಲಿ ಸರ್ಕಾರಿ ಶೇರುಗಳ ಸಂಖ್ಯೆ ಈಗಾಗಲೇ ಕಡಿಮೆಯಾದ್ದರಿಂದ, ಅದರ ಶೇರುಗಳ ಮಾರಾಟ ಮಾಡಬಾರದು ಎಂದಿತ್ತು ಸರ್ಕಾರದ ಮಾರ್ಗದರ್ಶಕ ಸೂತ್ರ. ಆದರೆ ಇವೆಲ್ಲವನ್ನು ಶೇರು ಮಾರಾಟದಲ್ಲಿ ಗಾಳಿಗೆ ತೂರಲಾಯಿತು.

ಶೇರುಗಳ ಮಾರಾಟ ಎರಡು ಹಂತಗಳಲ್ಲಿ ನಡೆಯಿತು. ಒಂದು ಬಾರಿ ಡಿಸೆಂಬರ್ 1991 ರಲ್ಲಿ ಎರಡನೇ ಬಾರಿ ಫೆಬ್ರವರಿ 1992 ರಲ್ಲಿ ಆದರೆ ಸರಿಯಾದ ತಯಾರಿ ಇಲ್ಲದೆ, "ಗಡಿಬಿಡಿ"ಯಲ್ಲಿ ಶೇರುಗಳ ಮಾರುಕಟ್ಟೆ ಮಾರಾಟ ಮಾಡಿದ ರೀತಿಯಿಂದಾಗಿ ಅದಕ್ಕೆ ಬೆಲೆ ಬರದೆ ಹೋಯಿತು. ಸಾರ್ವಜನಿಕರಲ್ಲಿ ಈ ಶೇರುಗಳ ಬಗ್ಗೆ ಉತ್ಸಾಹ, ನಿರೀಕ್ಷೆಯ ವಾತಾವರಣ ಹುಟ್ಟಿಸದೆ ಶೇರುಗಳ ಮಾರಾಟ ತೊಡಗಿದ್ದನ್ನು ಸಿಎಜಿ ವರದಿ ಕಟುವಾಗಿ ಟೀಕಿಸಿದೆ. ಅಲ್ಲದೆ ಒಳ್ಳೆಯ ಬೆಲೆ ಬರುವ, ಅಷ್ಟೇನೂ ಆಕರ್ಷಕವಲ್ಲದ ಶೇರುಗಳ ಗುಂಪು ಮಾಡಿದ್ದು ಬೇಕಾಬಿಟ್ಟಿಯಾಗಿ ಮಾಡಿತ್ತು. ಅದನ್ನು ಮಾರುಕಟ್ಟೆಯಲ್ಲಿ ಹರಾಜು ಮಾಡಿದ ರೀತಿ ಇದಕ್ಕೆ ಪೈಪೋಟಿಯ ಅಭಾವದ ಸ್ಥಿತಿ ತೋರಿಸುತ್ತದೆ. (ಕಳೆದ ವಾರ 'ಐಕ್ಯರಂಗ' ನೋಡಿ)

ಇದಲ್ಲದೆ ಎಲ್ಲಾ ಶೇರುಗಳಿಗೂ ಕನಿಷ್ಠ ಬೆಲೆ ನಿಗದಿಪಡಿಸಿತ್ತು. ಮಾರ್ಗದರ್ಶಕ ಸೂತ್ರಗಳ ಪ್ರಕಾರ ಈ ಬೆಲೆಗಿಂತ ಕಡಿಮೆ ಬೆಲೆಗೆ ಹರಾಜಿನಲ್ಲಿ ಮಾರಾಟ ಮಾಡುವಂತಿಲ್ಲ. ಆದರೆ ಶೇರು ಮಾರಾಟವಾದಾಗ ಈ ನಿಯಮಗಳಿಗೆ ತೂರಿ ನಿಗದಿತ ಬೆಲೆಯ ಮೂರನೇ ಒಂದರಷ್ಟು ಬೆಲೆಗೆ ಶೇರು ಮಾರಾಟ ಮಾಡಲಾಯಿತು. ಶೇರು ಮಾರಾಟವನ್ನು ಸಾರ್ವಜನಿಕ ಕ್ಷೇತ್ರದ ಹಣಕಾಸು ಸಂಸ್ಥೆಗಳಿಗೆ ಸೀಮಿತಗೊಳಿಲಾಗಿತ್ತು. ಈ ಸಂಸ್ಥೆಗಳು ಸಾರ್ವಜನಿಕರಿಗೆ ಶೇರು ಮಾರಾಟ ಮಾಡುವ ಬಗ್ಗೆ ಮಾರ್ಗದರ್ಶಕ ಸೂತ್ರಗಳನ್ನು ಉಲ್ಲಂಘಿಸಲಾಯಿತು.

ಶೇರು ಮಾರಾಟದ 'ಗಡಿಬಿಡಿ' ಯ ಹಿಂದೆ ವ್ಯವಸ್ಥಿತ ಪಿತೂರಿ ಇರುವಂತೆ ಕಂಡು ಬರುತ್ತದೆ. ಬ್ಯಾಂಕರುಗಳು, ಶೇರು ದಲ್ಲಾಳಿಗಳು, ವಿದೇಶೀ ಬ್ಯಾಂಕುಗಳ ಪಿತೂರಿ.

ಸಿ.ಎ.ಜಿ. ಕೇವಲ 10 ಕಂಪನಿಗಳ ಶೇರು ಮಾರಾಟದಲ್ಲಿ ಸರಕಾರದ ನಿಗದಿತ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದ ಆಧಾರದ ಮೇಲೆ ಲೆಕ್ಕ ಹಾಕಿದ ನಷ್ಟ 1,856 ಕೋಟಿ ರೂ. ಆದರೆ ಆ ಶೇರುಗಳಿಗೆ ಬಂದ ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಸರಕಾರಕ್ಕೆ ಆದ ನಷ್ಟ 5,760 ಕೋಟಿ ರೂ. ಶೇರು ಮಾರಾಟವಾದ 30 ಸಾರ್ವತ್ರಿಕ ಕ್ಷೇತ್ರದ ಕಂಪನಿಗಳಲ್ಲಿ ಸರ್ಕಾರಕ್ಕೆ ಆದ ಒಟ್ಟು ನಷ್ಟ 10-12 ಸಾವಿರ ಕೋಟಿ ರೂ. ಸ್ವತಂತ್ರವಾಗಿ ವಿಶ್ಲೇಷಣೆ ಮಾಡಿದ ತಜ್ಞರು ಈ ಅಂದಾಜು ಮಾಡಿದ್ದಾರೆ.

ಇದು ಈ ವರ್ಷದ ಐ.ಎಂ.ಎಫ್. ಸಾಲದ 10 ಪಟ್ಟು. ಬ್ಯಾಂಕ್ ಶೇರು ಹಗರಣ ಹಾಗೂ ಸಾರ್ವಜನಿಕ ಕ್ಷೇತ್ರದ ಮಾರಾಟದ ಹಗರಣದಲ್ಲಿ ಸರ್ಕಾರಕ್ಕೆ ನಷ್ಟ (ಕೆಲವು ವ್ಯಕ್ತಿಗಳಿಗೆ ಆದ ಲಾಭ) ಗಮನಿಸಿದರೆ ಐಎಂಎಫ್ ಸಾಲವಿಲ್ಲದೆ ಭಾರತ ಸುಲಭವಾಗಿ ಆರ್ಥಿಕ ನಿರ್ವಹಣೆ ಮಾಡಬಹುದಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಖಾಸಗೀಕರಣದ, ಉದಾರೀಕರಣದ ನಿಜವಾದ ಸ್ವರೂಪವೂ ಗೊತ್ತಾಗುತ್ತದೆ.

(ವಿವರಗಳಿಗೆ ಕಳೆದವಾರ 'ಐಕ್ಯರಂಗ' ನೋಡಿ)

ಬೇಡಿಕೆ : 7

ಪುಟ 5ರಿಂದ

ದೇಶಗಳ ಕಾರ್ಮಿಕ ಶಕ್ತಿಯನ್ನು, ಸಂಪನ್ಮೂಲಗಳನ್ನು ಅತೀ ಅಗ್ಗದರದಲ್ಲಿ ಪಡೆಯಲು ವಿದೇಶೀ ಕಂಪೆನಿಗಳಿಗೆ ಆಹ್ವಾನ.

(iii) ಯಾವುದೇ ಉದ್ದಿಮೆಯಲ್ಲಿ ಕಾರ್ಮಿಕ ಸಂಘ ರಿಜಿಸ್ಟರ್ ಆಗಬೇಕಾದರೆ ಕನಿಷ್ಠ ಏಳು ಕಾರ್ಮಿಕರಿದ್ದರೆ ಸಾಕು ಎಂದಿದೆ. ಅದನ್ನು ಬದಲಿಸಿ ಶೇ 10 ಮಾಡುವ ಹವಣಿಕೆಯಿದೆ. ಅಂದರೆ 30 ಸಾವಿರರ ಕಾರ್ಮಿಕರಿರುವ ಕಾರ್ಖಾನೆಯೂ ಕನಿಷ್ಟ 3,000 ಸದಸ್ಯತ್ವವಿದ್ದರೆ ಮಾತ್ರ ಒಂದು ಯೂನಿಯನ್ ರಿಜಿಸ್ಟರ್ ಆಗುತ್ತದೆ. ಒಮ್ಮೆಲೇ ಇಷ್ಟು ಸದಸ್ಯತ್ವ ಪಡೆಯಲು ಮಾಲಕರೇ ಹುಟ್ಟುಹಾಕುವ ಸಂಘಗಳಿಗೆ ಮಾತ್ರ ಸಾಧ್ಯ. ಮುಖಂಡತ್ವದಲ್ಲಿ ಹೊರಗಿನವರು ಇಬ್ಬರಿಗಿಂತ ಹೆಚ್ಚಿರಬಾರದು ಎಂಬ ಶರತ್ತನ್ನು ಹಾಕಲಾಗುತ್ತಿದೆ. ಯೂನಿಯನ್ ಚಟುವಟಿಕೆಗಳಿಗಾಗಿ ಕಾರ್ಮಿಕ ಮುಖಂಡರನ್ನು ಕೆಲಸದಿಂದ ತೆಗೆದುಹಾಕಿದಾಗ ಅವರೂ ಹೊರಗಿನವರಾಗುತ್ತಾರೆ. ಈ ಮೂಲಕ ಅವರು ಯೂನಿಯನ್ ಮುಖಂಡತ್ವ ವಹಿಸದಂತೆ ಮಾಡುವ ತಂತ್ರ ಇದು.

(iv) ಮುಷ್ಕರದ ಹಕ್ಕನ್ನು, ಸಾಮೂಹಿಕ ಚೌಕಾಸಿಯ ಹಕ್ಕನ್ನು ಮತ್ತಷ್ಟು ಮೊಟಕು ಮಾಡಲು, ಕೈಗಾರಿಕಾ ವಿವಾದಗಳ ಪರಿಹಾರದಲ್ಲಿ ಸಂಬಂಧಪಟ್ಟ ಸರಕಾರಗಳ ಪಾತ್ರವನ್ನು ಕಡಿಮೆ ಮಾಡಿ ಮಾಲಕರಿಗೆ ಶೋಷಣೆಗೆ ಇನ್ನಷ್ಟು ಅವಕಾಶ ಕೊಡಲು ಬಹಳಷ್ಟು ಬದಲಾವಣೆಗಳನ್ನು ತಂದಿದೆ ಎಂದು ತಿಳಿದು ಬಂದಿದೆ.

ಹೊಸ ಆರ್ಥಿಕ ನೀತಿ ಬಂಡವಾಳಶಾಹಿಗಳಿಗೆ ಕಾರ್ಮಿಕರನ್ನು ಹಿಂಡಲು 'ಉದಾರತೆ' ತೋರಿದ್ದರೆ. ಕೈಗಾರಿಕಾ ಶಾಸನ ಆ ಶೋಷಣೆಯನ್ನು ಪ್ರತಿಭಟಿಸದಂತೆ ಕಾರ್ಮಿಕರ ಕಾಲುಗಳಿಗೆ ಸಂಕೋಲೆ ತೊಡಿಸ ಹೊರಟಿದೆ ಎಂಬ ಸಂಗತಿಯನ್ನು ಎಲ್ಲಾ ಕಾರ್ಮಿಕರ ಅರಿವಿಗೆ ತರಬೇಕಾಗಿದೆ. ಅತ್ಯಂತ ವ್ಯಾಪಕ ಟ್ರೇಡ್ ಯೂನಿಯನ್ ಐಕ್ಯತೆಯ ಮೂಲಕ ಈ ವಿನಾಶಕಾರೀ ಕೈಗಾರಿಕಾ ಶಾಸನವನ್ನು ಪ್ರತಿರೋಧಿಸಬೇಕಾಗಿದೆ.

ಜಪಾನಿನಲ್ಲಿ ನಡೆದ ಚುನಾವಣೆಯಲ್ಲಿ ಆಳುವ ಲಿಬರಲ್ ಡೆಮೊಕ್ರೆಟಿಕ್ ಪಕ್ಷ (ಎಲ್.ಡಿ.ಪಿ.) ಕಳೆದ 38 ವರ್ಷಗಳಲ್ಲಿ ಮೊದಲ ಬಾರಿಗೆ ಬಹುಮತ ಕಳೆದುಕೊಂಡಿದೆ. 511 ಸೀಟುಗಳಲ್ಲಿ 223 ಸೀಟುಗಳಿಸಿದೆ. ವಿರೋಧಿ ಸೋಶಲಿಸ್ಟ್ ಪಕ್ಷ ಸಹ ಗಮನರ್ಹಾವಾಗಿ ಬೆಂಬಲ ಕಳೆದುಕೊಂಡಿದೆ. 134 ಸೀಟುಗಳಿಂದ 70 ಕ್ಕೆ ಕುಸಿದಿದೆ. ಎಲ್.ಡಿ.ಪಿ.ಯಿಂದ ಸಿಡಿದು ಹೋದ 3 ಪಕ್ಷಗಳು 103 ಸೀಟುಗಳನ್ನು ಗಳಿಸಿವೆ. ಆದರೆ ಬಹುಮತ ಇರುವ ಯಾವುದೇ ಸಮ್ಮಿಶ್ರ ರಂಗ ಇನ್ನೂ ಹೊಮ್ಮದಿರುವುದರಿಂದ ರಾಜಕೀಯ ಅನಿಶ್ಚಿತತೆ ಕಾದಿದೆ.

ದಕ್ಷಿಣ ಪೂರ್ವ ಏಶಿಯಾದ ದೇಶಗಳ ಸಂಘಟನೆ ಆಸಿಯನ್ (ASEAN) ವಿದೇಶ ಮಂತ್ರಿಗಳ ಸಭೆ ಇತ್ತೀಚೆಗೆ ಸಿಂಗಾಪೂರ್‌ನಲ್ಲಿ ಸಭೆ ಸೇರಿತ್ತು. ಈ ಪ್ರದೇಶದಲ್ಲಿ ಅಣ್ವಸ್ತ್ರ - ಮುಕ್ತ ಪ್ರದೇಶ ಸಾಧಿಸುವ ಹಾಗೂ ಭದ್ರತಾ ವ್ಯವಸ್ಥೆ ಸ್ಥಾಪಿಸುವ ನಿರ್ಧಾರ ಕೈಗೊಂಡಿತ್ತು. ಕೆಂಬೋಡಿಯಾದ ಆಂತರಿಕ ವ್ಯವಹಾರಗಳಲ್ಲಿ ಅಮೇರಿಕ ಕೈಹಾಕಬಾರದೆಂದು ಅದು ಹೇಳಿದೆ

ಸೋಮಾಲಿಯಾದಲ್ಲಿ ಶಾಂತಿ ಪಾಲನಾ ವಿಶ್ವಸಂಸ್ಥೆ ಪಡೆ ಜನರಲ್ ಅದಿದ್‌ನ್ನು ಸೆರೆಹಿಡಿಯಲು ಯುದ್ಧ ಆರಂಭಿಸುರುವುದನ್ನು ವಿರೋಧಿಸಿ ಇಟಲಿ ತನ್ನ ಪಡೆಗಳನ್ನು ಹಿಂತೆಗೆದುಕೊಂಡಿದೆ. ಇಟಲಿಯ ಒಬ್ಬ ಸೇನಾಧಿಪತಿ ವಿಶ್ವಸಂಸ್ಥೆ ಪಡೆಯ ಅಮೇರಿಕನ್ ಮುಖ್ಯಸ್ಥನ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದ್ದಾರೆ. ಇಟಲಿಯನ್ ಜನರಲ್‌ನ್ನು ವಾಪಸು ಪಡೆಯಬೇಕೆಂಬ ಒತ್ತಾಯವನ್ನು ಇಟಲಿ ತಳ್ಳಿ ಹಾಕಿದೆ. ಸೋಮಾಲಿಯಾದಲ್ಲಿ ಶಾಂತಿಯ ಹೆಸರಲ್ಲಿ ಹಿಂಸಾತ್ಮಕ ಹಸ್ತಕ್ಷೇಪದಲ್ಲಿ ಅಮೇರಿಕ ಬೆಂಬಲ ಕಳೆದುಕೊಳ್ಳುತ್ತಾ ಒಂಟಿಯಾಗುತ್ತಿದೆ.

ಲೋಕ ಸಂಚಾರ

-- ಶರತ್ ಚಂದ್ರ

ಜಪಾನಿನಲ್ಲಿ ರಾಜಕೀಯ ಅನಿಶ್ಚಿತತೆ

ಜಪಾನಿನಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳು ಅನಿರೀಕ್ಷಿತ ಭಾರಿ ಬದಲಾವಣೆಗಳನ್ನೇನೂ ತಂದಿಲ್ಲ. 38 ವರ್ಷಗಳಿಂದ ಆಳುತ್ತಿದ್ದ ಲಿಬರಲ್ ಡೆಮಾಕ್ರಟಿಕ್ ಪಕ್ಷ (ಎಲ್.ಡಿ.ಪಿ.) ಮೊದಲ ಬಾರಿಗೆ ಬಹುಮತ ಕಳೆದುಕೊಂಡಿದೆ ನಿಜ. ಆದರೆ ಅದರ ಬೆಂಬಲ ಗಮನಾರ್ಹವಾಗಿ ಕಡಿಮೆ ಆಗಿಲ್ಲ. ಈ ಚುನಾವಣೆಯಲ್ಲಿ ರಾಜಕೀಯ ಭ್ರಷ್ಟಾಚಾರ ಪ್ರಮುಖ ವಿಷಯವಾಗಿತ್ತು. ಈ ಬಗ್ಗೆ ಸತತವಾಗಿ ಪ್ರಚಾರ ಮಾಡುತ್ತಾ ಬಂದ ವಿರೋಧ ಪಕ್ಷಗಳ ಬಲ ಗಮನಾರ್ಹವಾಗಿ ಜಾಸ್ತಿಯಾಗಿಲ್ಲ. ಪ್ರಮುಖ ವಿರೋಧ ಪಕ್ಷ ಜಪಾನಿ ಸೋಶಲಿಸ್ಟ್ ಪಕ್ಷದ ಬೆಂಬಲ 134 ಸೀಟುಗಳಿಂದ 70 ಕ್ಕೆ ಕುಸಿದಿದೆ. ಎಲ್.ಡಿ.ಪಿ. ಹಾಗೂ ಜಪಾನ್ ಸೋಶಲಿಸ್ಟ್ ಪಕ್ಷ ಕಳೆದುಕೊಂಡ ಸೀಟುಗಳು ಹೆಚ್ಚಾಗಿ, ಎಲ್.ಡಿ.ಪಿ.ಯಿಂದ ಸಿಡಿದು ಹೋದ ಮೂರು ಹೊಸ ಪಕ್ಷಗಳಿಗೆ ಹೋಗಿವೆ. ಈ ಮೂರು ಪಕ್ಷಗಳು ಒಟ್ಟಾಗಿ 103 ಸೀಟುಗಳಿಸಿವೆ. ಎಲ್.ಡಿ.ಪಿ.ಯಿಂದ ಹೊರ ನಡೆದು ಆ ಪಕ್ಷದ ಸರಕಾರದ ರಾಜೀನಾಮೆಗೆ ಕಾರಣವಾದ ಮಾಜಿ ಅರ್ಥಮಂತ್ರಿಯವರ ಜಪಾನ್ ರಿನ್ಯೂಯಲ್ ಪಾರ್ಟಿ 55 ಸೀಟುಗಳಿಸಿದೆ. ಇತರ ಎರಡು ಪಕ್ಷಗಳು ಜಪಾನ್ ನ್ಯೂ ಪಾರ್ಟಿ 35 ಸೀಟುಗಳನ್ನು, ಹಾರ್ಬಿಂಜರ್ ಪಾರ್ಟಿ 13 ಸೀಟುಗಳನ್ನುಗಳಿಸಿದೆ.

ಸೋಶಲಿಸ್ಟ್ ಪಕ್ಷದ ಇತರ ಬಣಗಳಾದ ಡೆಮೊಕ್ರಾಟಿಕ್ ಸೋಶಲಿಸ್ಟ್ ಪಕ್ಷ 15 ಸೀಟು, ಸೋಶಲಿಸ್ಟ್ ಡೆಮೊಕ್ರೆಟಿಕ್ ಫೆಡರೇಶನ್ 4 ಸೀಟುಗಳಿಸಿವೆ. ಜಪಾನಿ ಕಮ್ಯುನಿಸ್ಟ್ ಪಕ್ಷ 15 ಸೀಟುಗಳಿಸಿದೆ. ಕಳೆದ ಪಾರ್ಲಿಮೆಂಟಿನಲ್ಲಿ ಅದು 16 ಸೀಟು ಗಳಿಸಿತ್ತು. ಬೌದ್ಧಪಕ್ಷ ಕೊಮಿಟೊ 51 ಸೀಟು ಗಳಿಸಿದೆ.

ಚುನಾವಣೆ ಸೋತ ಮೇಲೂ ಎಲ್‌ಡಿಪಿಯ ನಾಯಕ ಮಿಯೊಜಾವಾ ಸರ್ಕಾರ ರಾಜಿನಾಮೆ ನೀಡದೆ ಅಧಿಕಾರದಲ್ಲಿ ಮುಂದುವರಿಯುತ್ತಿತ್ತು. ಆದರೆ ಆಮೇಲೆ ವಿರೋಧಪಕ್ಷಗಳ ಒತ್ತಾಯದ ಮೇರೆಗೆ ರಾಜಿನಾಮೆ ನೀಡಿದ್ದಾರೆ. ಆದರೆ ಸರ್ಕಾರ ರಚಿಸುವ ಆಸೆ ಬಿಟ್ಟುಕೊಟ್ಟಿಲ್ಲ. ವಿರೋಧ ಪಕ್ಷಗಳ ನಡುವೆ ಸಮ್ಮಿಶ್ರ ರಂಗದ ಬಗ್ಗೆ ಮಾತುಕತೆಗೆ ಆರಂಭವಾಗಿದ್ದರೂ ಇನ್ನೂ ಯಾವುದೇ ರಂಗ ಹೊಮ್ಮದಿರುವುದರಿಂದ ಎಲ್.ಡಿಪಿ. ಅಲ್ಪಸಂಖ್ಯಾತ ಸರಕಾರ ರಚಿಸುವ ಬಗ್ಗೆ ತೀವ್ರ ಯೋಚಿಸುತ್ತಿದೆ. ಅಲ್ಲದೆ ಎಲ್.ಡಿ.ಪಿ. ಬಣಗಳಾಗಿದ್ದು ಬೇರೆ ಪಕ್ಷಗಳಾದ ಜಪಾನ್ ನ್ಯೂ ಪಾರ್ಟಿ ಹಾಗೂ ಹಾರ್ಬಿಂಜರ್ ಪಾರ್ಟಿಗಳನ್ನು ಸಮ್ಮಿಶ್ರ ಸರಕಾರಕ್ಕೆ ಒಲಿಸಲು ಪ್ರಯತ್ನಿಸುತ್ತಿದೆ. ಈ ಎರಡು ಪಕ್ಷಗಳು ಸೇರಿ 48 ಸೀಟುಗಳನ್ನು ಗಳಿಸಿವೆ. ಐದು ವಿರೋಧಪಕ್ಷಗಳು- ಜಪಾನ್ ರಿನ್ಯೂಯಲ್ ಪಾರ್ಟಿ, ಜಪಾನ್ ಸೋಶಲಿಸ್ಟ್ ಪಕ್ಷ, ಬೌದ್ಧಪಕ್ಷ ಕೊಮಿಟೊ ಸೋಶಿಯಲ್ ಡೆಮೊಕ್ರಾಟಿಕ್ ಫೇಡರೇಶನ್, ಡೆಮೊಕ್ರಾಟಿಕ್ ಸೋಶಲಿಸ್ಟ್ ಪಕ್ಷ-ಗಳು ಸಮ್ಮಿಶ್ರ ರಂಗ ರಚಿಸಲು ನಿರ್ಧರಿಸಿವೆ. ಈ ಪಕ್ಷಗಳ ಒಟ್ಟು ಬಲ 195 ಆಗುತ್ತದೆ. ಈ ಐದು ಪಕ್ಷಗಳ ರಂಗ ಮೇಲೆ ಹೇಳಿದ 45 ಸೀಟುಗಳ ಬಲದ ಎಲ್.ಡಿ.ಪಿ.ಯ ಮಾಜಿ ಬಣಗಳಾದ ಎರಡು ಪಕ್ಷಗಳ ಬೆಂಬಲಕ್ಕೆ ಪ್ರಯತ್ನಿಸುತ್ತಿವೆ.

ಈ ಎರಡು ಬಣಗಳಲ್ಲಿ ಯಾರಾದರೂ ಸರ್ಕಾರ ರಚಿಸಿದರೂ ರಾಜಕೀಯ ಅನಿಶ್ಚಿತತೆ ಕಟ್ಟಿಟ್ಟ ಬುತ್ತಿ. ಇನ್ನೊಂದು ವರ್ಷದೊಳಗೆ ಮರುಚುನಾವಣೆಯಾದರೂ ಆಶ್ಚರ್ಯವಿಲ್ಲ.

ಎಲ್‌ಡಿಪಿಯ ಏಕಪಕ್ಷೀಯ ಅಧಿಕಾರ ಇಷ್ಟು ವರ್ಷಗಳ ಕಾಲ ಸ್ಥಿರವಾಗಿದ್ದುದು ಎರಡನೇ ಮಹಾಯುದ್ಧ ನಂತರ ಜಪಾನಿನ ರಾಜಕೀಯ ಪರಿಸ್ಥಿತಿಯ ವಿಶಿಷ್ಟತೆಯಿಂದ. ಎರಡನೇ ಮಹಾಯುದ್ಧದಲ್ಲಿ ಸೋತ ಜಪಾನನ್ನು ಅಮೇರಿಕನ್ ಪಡೆಗಳು ಕೆಲವು ವರ್ಷಕಾಲ ನೇರವಾಗಿ ಆಳಿದವು. ಆಮೇಲೆ ಆಗ ಇದ್ದ ಮೂರು ಬಲಪಂಥೀಯ ಪಕ್ಷಗಳಿಗೆ ಅಧಿಕಾರವಹಿಸಿಕೊಟ್ಟವು. ಮಹಾಯುದ್ಧನಂತರದ ವಿಶಿಷ್ಟ ಪರಿಸ್ಥಿತಿಯಲ್ಲಿ ಸೋಶಲಿಸ್ಟ್ ಪಕ್ಷ ಹಾಗೂ ಕಮ್ಯುನಿಸ್ಟ್ ಪಕ್ಷ ಜನಪ್ರಿಯವಾಗಿ ಬೆಳೆಯಲಾರಂಭಿಸಿತ್ತು. ಇದನ್ನು ತಡೆಗಟ್ಟಲು ಅಮೇರಿಕದ ಬೇಹುಗಾರ ಸಂಸ್ಥೆ ಸಿಐಎ ಆಗ ಇದ್ದ ಮೂರು ಬಲಪಂಥೀಯ ಪಕ್ಷಗಳನ್ನು ಒತ್ತಡ ಹಾಕಿ ಒಗ್ಗೂಡಿಸಿತು. ಈ ರೀತಿ ಸಿಐಎ ನೇರವಾಗಿ ಹುಟ್ಟುಹಾಕಿದ ಪಕ್ಷ ಎಲ್‌ಡಿಪಿ ಹುಟ್ಟಿನಿಂದಲೇ ಮೂರು ಬಣಗಳಿದ್ದ ಪಕ್ಷ ಅದು. ಸೋಶಲಿಸ್ಟರನ್ನು, ಕಮ್ಯುನಿಸ್ಟರನ್ನು ಬಗ್ಗು ಬಡಿಯಲು ಸಿಐಎ ಈ ಪಕ್ಷಕ್ಕೆ ನೇರ ಧನಸಹಾಯ ಮಾಡಿತ್ತು. 50ರ ದಶಕದಲ್ಲಿ ಸೋಶಲಿಸ್ಟ್ ಹಾಗೂ ಕಮ್ಯುನಿಸ್ಟ ಪಕ್ಷದ ಸದಸ್ಯರನ್ನು, ಕಾರ್ಯಕರ್ತರನ್ನು ದೇಶಾಬಿಟ್ಟಿಯಾಗಿ ಬಂಧಿಸಲಾಗುತ್ತಿತ್ತು. ಕಿರುಕುಳ ಕೊಡಲಾಗುತ್ತಿತ್ತು. ಜಪಾನಿ ರಾಜಕೀಯದಲ್ಲಿ ದುಡ್ಡಿನ ಪ್ರಭಾವ ಜೋರಾಗಿತ್ತು. ಜಪಾನಿ ಚುನಾವಣಾ ವ್ಯವಸ್ಥೆ ಇದಕ್ಕೆ ಪೂರಕವಾಗಿತ್ತು. ಎನ್ನಲಾಗಿದೆ. ಎಲ್.ಡಿ.ಪಿಗೆ ಜಪಾನ್ ಬೂರ್ಜ್ವಾ ವರ್ಗ ಪೂರ್ಣ ಬೆಂಬಲ ನೀಡಿದೆ. ಭಾರಿ ದೈತ್ಯ ಗಾತ್ರದ ಕೆಲವೇ ಜಪಾನಿ ಖಾಸಗಿ ಕಂಪನಿಗಳು ಇಡೀ ಜಪಾನ್ ಆರ್ಥಿಕವನ್ನು ನಿಯಂತ್ರಿಸುತ್ತಿವೆ. ಸರ್ಕಾರದ ಹಣಕಾಸು, ನೀತಿಗಳು, ಸಬ್ಸಿಡಿಯನ್ನು ಈ ಕಂಪನಿಗಳು ಬೇರೆ ಯಾವುದೇ ಅಭಿವೃದ್ಧ ಬಂಡವಾಳಶಾಹಿ ದೇಶಕ್ಕಿಂತಲೂ ಹೆಚ್ಚಾಗಿ ನೇರವಾಗಿ ನಿಯಂತ್ರಿಸುತ್ತವೆ. ಜಪಾನೀ ಸಮಾಜದ ಮೇಲಿನ ಅವುಗಳ ಹಿಡಿತವೂ ವಿಶಿಷ್ಟವಾದದ್ದು. ಇದಕ್ಕೆ ಜಪಾನಿ ಪಾಳೆಯಗಾರಿ ಪ್ರಭುಗಳ ಹೊಸ ಕೈಗಾರಿಕಾ ಗುಂಪುಗಳ ಒಡೆಯರಾಗಿದ್ದು ಕಾರಣ ಎನ್ನಲಾಗಿದೆ. ಜಪಾನಿ ಬೂರ್ಜ್ವಾವರ್ಗದ ನಿಯಂತ್ರಣ ಎಷ್ಟು ಬಿಗಿಯಾದ್ದೆಂದರೆ, ಇಡೀ ಜಪಾನನ್ನು ಜಪಾನಿ ಕಂಪನಿ ಲಿಮಿಟೆಡ್ ಎಂದು ಲೇವಡಿ ಮಾಡಲಾಗುತ್ತದೆ. ಇಂತಹ ವರ್ಗದ ಪಕ್ಷವಾದ ಎಲ್.ಡಿ.ಪಿ. ಸ್ವಾಭಾವಿಕವಾಗಿಯೂ ಕಳೆದ ನಾಲ್ಕು ದಶಕಗಳ ಕಾಲ ಸತತವಾಗಿ ಅಧಿಕಾರ ಚಲಾಯಿಸುತ್ತಿದೆ. ಜಪಾನ್‌ನ ಅಧಿಕಾರಶಾಹಿ, ರಾಜಕೀಯ ನಾಯಕರು ಹಾಗೂ ಬೂರ್ಜ್ವಾ ವರ್ಗದ ನಿಕಟ ಸಂಬಂಧದಿಂದಾಗಿ ಎಲ್.ಡಿ.ಪಿ. ಪಕ್ಷದಲ್ಲಿ ಹಣದ ಪ್ರಭಾವ ವಿಪರೀತವಾಗಿತ್ತು. ಇದು ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿ ಸಾಮಾನ್ಯವಾದರೂ, ಇಟಲಿಯಂತೆ ಜಪಾನಿನಲ್ಲಿ ವಿಶಿಷ್ಟ ರೂಪವಿತ್ತು ಇದಕ್ಕೆ

ಆದ್ದರಿಂದಲೇ ಎಲ್.ಡಿ.ಪಿ. ಈ ವರೆಗೆ ಹಲವಾರು ತೀವ್ರ ಭ್ರಷ್ಟಾಚಾರದ ಆಪಾದನೆಗಳನ್ನು ಎದುರಿಸುತ್ತಾ ಬಂದಿದೆ. ಇದರಲ್ಲಿ ಮೂರು ಪ್ರಮುಖ ಹಗರಣಗಳು ಸರ್ಕಾರ ಉರುಳಿಸುವಷ್ಟು ತೀವ್ರವಾಗಿದ್ದವು. 70ರ ದಶಕದಲ್ಲಿ ಕುಖ್ಯಾತವಾದ ಲಾಕ್‌ಹೀಡ್ ಪ್ರಕರಣದಲ್ಲಿ ಅಮೇರಿಕಾದ ವಿಮಾನ ತಯಾರಿಕಾ ಕಂಪನಿ ಲಾಕ್‌ಹೀಡ್ ಪ್ರಧಾನ ಮಂತ್ರಿ ತನಾಕಾಗೆ ಭಾರಿ ಲಂಚಕೊಟ್ಟಿದ್ದು ಬೆಳಕಿಗೆ ಬಂತು. ತನಾಕಾ ರಾಜೀನಾಮೆ ಕೊಡಬೇಕಾಗಿ ಬಂತು. ಇತ್ತೀಚೆಗಿನ ರಿಕ್ರೂಟ್ ಪ್ರಕರಣದಲ್ಲಿ ಪ್ರಧಾನ ಮಂತ್ರಿ ತಕೆಶಿತಾ ಸೇರಿದಂತೆ ಹಲವಾರು ಕ್ಯಾಬಿನೆಟ್ ಮಂತ್ರಿಗಳು ರಿಕ್ರೂಟ್ ಕಂಪನಿಯಿಂದ ಭಾರಿ ಲಂಚ ಸ್ವೀಕರಿಸಿ ಆ ಕಂಪನಿಗೆ ವಿಶೇಷ ಸವಲತ್ತು ಒದಗಿಸಿದ್ದರು ಎಂದು ಬೆಳಕಿಗೆ ಬಂತು. ಇತ್ತೀಚೆಗಿನ ಸಗಾವಾ ಪ್ರಕರಣದಲ್ಲಿ ಈ ಕಂಪನಿ ಹಿರಿಯ ಎಲ್.ಡಿ.ಪಿ. ನಾಯಕ ಕಾನೆಮಾರು ಸೇರಿದಂತೆ ಹಲವಾರು ಮಂತ್ರಿಗಳಿಗೆ ಭಾರಿ ಲಂಚಕೊಟ್ಟಿತ್ತು. ಇದರಿಂದಾಗಿ ಅದು ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳುತ್ತಿತ್ತು. ಅಲ್ಲದೆ ಈ ಕಂಪನಿ ಹಲವಾರು ಬಾರಿ ಎಲ್.ಡಿ.ಪಿ.ಯ ಆಂತರಿಕ ಜಗಳ ಪರಿಹರಿಸಲು ಜಪಾನಿನ ಮಾಫಿಯಾ ಯತುರುಖಾವನ್ನು ಬಳಸಿದ್ದು ಬೆಳಕಿಗೆ ಬಂತು.

ಎಲ್.ಡಿ.ಪಿ.ಯ ಈ ಭ್ರಷ್ಟ ಆಳ್ವಿಕೆಯಿಂದ ಜನ ಬೇಸತ್ತಿದ್ದರು. ಎಲ್.ಡಿ.ಪಿ.ಯ ಏಕಪಕ್ಷೀಯ ಆಳ್ವಿಕೆಯಲ್ಲಿ ನಿಜವಾದ ಪ್ರಜಾಪ್ರಭುತ್ವ ಯಾವುದೇ ಅರ್ಥದಲ್ಲೂ ಇರಲಿಲ್ಲ. ಆದರೆ ಈ ಅತೃಪ್ತಿ ಜಪಾನ್‌ನ 70 ರ 80 ರ ದಶಕದ ತಕ್ಕ ಮಟ್ಟಿಗಿನ ಆರ್ಥಿಕ ಬೆಳವಣಿಗೆ, ಕಡಿಮೆ ನಿರುದ್ಯೋಗದಿಂದಾಗಿ ನಿಯಂತ್ರಣದಲ್ಲಿತ್ತು. 1990 ರ ದಶಕದಲ್ಲಿ ಜಪಾನ್ ಸಹ ಇತರ ಬಂಡವಾಳಶಾಹಿ ದೇಶಗಳಂತೆ ತೀವ್ರ ಆರ್ಥಿಕ ಹಿಂಜರಿತ ಅನುಭವಿಸುತ್ತಿದೆ. ನಿರುದ್ಯೋಗ ಏರುತ್ತಿದೆ. ಇದರಿಂದಾಗಿ ಅತೃಪ್ತಿ ಭುಗಿಲೆದ್ದಿದೆ. ಇದರ ರಾಜಕೀಯ ರೂಪವೇ ಎಲ್.ಡಿ.ಪಿ.ಯಲ್ಲಿ ಆದ ಬಿಕ್ಕಟ್ಟು, ಆದರೆ ಇಟಲಿಯಂತೆ ಈ ಅತೃಪ್ತಿ ಒಂದು ಪ್ರಬಲ ಜನಾಂದೋಲನವಾಗಿ ರೂಪುಗೊಂಡಿಲ್ಲ. ಬದಲಾಗಿ ಈ ಅತೃಪ್ತಿ ಕಟ್ಟೆಯೊಡುವ ಮೊದಲೇ 'ಅರಮನೆ ಕಾದಾಟ'ಗಳು (ಅಂದರೆ ಆಳುವ ಮಂದಿಯೊಳಗೇ ಕಾದಾಟಗಳು) ಆರಂಭವಾದವು. ಎಲ್.ಡಿ.ಪಿ. ಜನಪ್ರಿಯತೆ ಕಳೆದುಕೊಂಡದ್ದನ್ನು ಮನಗಂಡ ಒಂದು ಬಣ ಭ್ರಷ್ಟಾಚಾರದ ವಿರುದ್ಧ ಹೋರಾಟದ ನೆಪದಲ್ಲಿ ತಮ್ಮ ಬೆಂಬಲ ಪುನಃ ಗಳಿಸಿಕೊಳ್ಳುವ ಪ್ರಯತ್ನ ನಡೆಸಿದರು. ಈ ಚುನಾವಣಾ ಫಲಿತಾಂಶಗಳನ್ನು ನೋಡಿದರೆ ಎಲ್.ಡಿ.ಪಿ. ಒಡೆಯುವ ಮೂಲಕ ಜನರ ಅತೃಪ್ತಿ ಎಡಪಕ್ಷಗಳ ಬೆಂಬಲವಾಗಿ ಮಾರ್ಪಾಡದಂತೆ ತಡೆಯುವುದರಲ್ಲಿ ಜಪಾನಿ ಬೂರ್ಜ್ವಾ ವರ್ಗ ಯಶಸ್ವಿಯಾಗಿದೆ. ಜಪಾನಿ ಬೂರ್ಜ್ವಾವರ್ಗ ಮುಖ್ಯವಾಗಿ ಎಲ್.ಡಿ.ಪಿ.ಯನ್ನು ಬೆಂಬಲಿಸಿದರೂ, ಎಲ್.ಡಿ.ಪಿ.ಯ ಇತರ ಬಣಗಳಿಗೂ ಬೂರ್ಜ್ವಾವರ್ಗದ ವಿಭಾಗವೊಂದರ ಬೆಂಬಲ ಸಿಕ್ಕಿದೆ.

ಈಗ ಸಮ್ಮಿಶ್ರ ರಂಗ ರಚಿಸಲು ಪ್ರಯತ್ನಿಸುತ್ತಿರುವ ಬಲ, ಮಧ್ಯಮ, ಎಡಪಕ್ಷಗಳ ನಡುವೆ ನೀತಿಗಳಲ್ಲಿ ಭಾರಿ ಭಿನ್ನತೆ ಇದೆ. ವಿದೇಶ ನೀತಿ, ಮಿಲಿಟರಿ ನೀತಿಗಳಲ್ಲಿ ಎಡಪಕ್ಷಗಳ ನಿಲುವು ಬಲ, ಮಧ್ಯಮ ಪಕ್ಷಗಳ ನಿಲುವಿಗಿಂತ ತೀರಾ ಭಿನ್ನವಾಗಿದೆ. ಆದ್ದರಿಂದ ಒಂದೇ ನೀತಿ ಉಳ್ಳ ಎರಡು ಪಕ್ಷ ವ್ಯವಸ್ಥೆ ತರುವ ಜಪಾನಿ ಬೂರ್ಜ್ವಾವರ್ಗದ ಕನಸು ಅಷ್ಟು ಸುಲಭದಲ್ಲಿ ನನಸಾಗಲಿಕ್ಕಿಲ್ಲ. ಈ ದೃಷ್ಟಿಯಿಂದಲೂ ಜಪಾನಿ ಕಮ್ಯುನಿಸ್ಟ್ ಪಕ್ಷ ಸಮ್ಮಿಶ್ರ ರಂಗ ರಚನೆಯಲ್ಲಿ ಭಾಗವಹಿಸಲಿಲ್ಲ. ಜಪಾನಿನ ಇಂದಿನ ರಾಜಕೀಯ ಬಿಕ್ಕಟ್ಟು ಜಪಾನಿನ ಹಾಗೂ ಜಗತ್ತಿನ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಿನ ನೇರಪರಿಣಾಮ.

ರಶ್ಯಾದಲ್ಲಿ ಫ್ಯಾಸಿಸ್ಟ್ ವಿರೋಧಿ ಸಮಾವೇಶ

1941, ಜೂನ್ 22 ರಂದು ಹಿಟ್ಲರ್ ಸೋವಿಯೆತ್ ಒಕ್ಕೂಟದ ಮೇಲೆ ಭಾರಿ ಆಕ್ರಮಣ ಆರಂಭ ಮಾಡಿದ್ದ. ಅದನ್ನು ಕೇವಲ ನಾಲ್ಕು ವರ್ಷಗಳಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟದ ಜನತೆ ಭಾರಿ ಬಲಿದಾನ ನೀಡಿ ಹಿಮ್ಮೆಟ್ಟಿಸಿದ್ದರು. 1993 ರ ಜೂನ್ 22 ರಂದು ಮಾಸ್ಕೋದಲ್ಲಿ ಫ್ಯಾಸಿಸ್ಟ್ ವಿರೋಧಿ ಸಮಾವೇಶವೊಂದು ಸೇರಬೇಕಾದ ಅಗತ್ಯ ಇಂದು ಒದಗಿ ಬಂದಿದೆ. ಇದು ದೇಶದೊಳಗೆ ಹುಟ್ಟಿಕೊಂಡಿರುವ ಫ್ಯಾಸಿಸ್ಟರನ್ನು ಎದುರಿಸಲು. ಜಗತ್ತಿನ ಅತ್ಯಂತ ಬಲಾಢ್ಯ ಮಿಲಿಟರಿ ಶಕ್ತಿ ಕೂದಲು ಕೂಡ ಕೊಂಕಿಸಲಾಗದ ಮಹಾನ್ ಸಮಾಜವಾದಿ ಪ್ರಭುತ್ವವನ್ನು, ಸೋವಿಯೆಟ್ ಕಮ್ಯುನಿಸ್ಟ್ ಪಕ್ಷವನ್ನು ಈ ಕೆಲವು ಮಾಜಿ ಸಿಪಿಎಸ್‌ಯು ನಾಯಕರು ನಾಶಮಾಡಿದರು. ಅವರ ನಾಯಕತ್ವದಲ್ಲಿ ಈಗ ಫ್ಯಾಸಿಸ್ಟ್ ಶಕ್ತಿಗಳು ಎಲ್ಲಾ ಗಣರಾಜ್ಯಗಳಲ್ಲಿ ತಲೆಎತ್ತಲಾರಂಭಿಸಿದ್ದಾರೆ. ಕಮ್ಯುನಿಸ್ಟರು, ಎಡಪಂಥೀಯ ಬಲವುಳ್ಳವರು, ದೇಶಪ್ರೇಮಿಗಳ ನರಬೇಟೆ ಆರಂಭವಾಗಿದೆ. ಹೆಚ್ಚಿನ ಗಣರಾಜ್ಯಗಳಲ್ಲಿ ಇತರ ಜನಾಂಗೀಯರನ್ನು ಎರಡನೇ ದರ್ಜೆಯ ನಾಗರಿಕರಂತೆ ಕಾಣುವ ಫ್ಯಾಸಿಸ್ಟ್ ನೀತಿ ಜಾರಿಗೆ ಬರುತ್ತಿದೆ. ಸಮಾವಾಜವಾದವನ್ನು ನಾಶಮಾಡಿದ ಪ್ರತಿ-ಕ್ರಾಂತಿ ನಡೆಸಿದ ಈ ನಾಯಕರಿಗೆ, ಶಕ್ತಿಗಳಿಗೆ ತಾವು ಪಡೆದಿರುವ ಅಧಿಕಾರವನ್ನೂ ಹೇಗಾದರೂ ಉಳಿಸಿಕೊಳ್ಳಲು ಫ್ಯಾಸಿಸ್ಟ್ ನೀತಿಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಇದಕ್ಕೆ ಜಾಗತಿಕ ಗುತ್ತೇದಾರಿ ಬಂಡವಾಳ ಮುಕ್ತವಾಗಿ ಕುಮ್ಮಕ್ಕು ಕೊಡುತ್ತಿದೆ. ವಿದೇಶಿ ಬಂಡವಾಳದ ಜತೆ ಸಹಕರಿಸುತ್ತಿರುವ ಬಂಡವಾಳಶಾಹಿಗಳು, ಕಾಳಸಂತೆ ಕೋರರು, ಮತ್ತು ಮಾಫಿಯಾ ಈ ಫ್ಯಾಸಿಸ್ಟ್ ಶಕ್ತಿಗಳ ವರ್ಗನೆಲೆ. ಇಸ್ಲಾಮಿಕ್ ಮೂಲಭೂತವಾದ ಸಹ ಈ ಶಕ್ತಿಗಳಿಗೆ ಸಹಾಯವಾಗಬಹುದು.

ಈ ಹಿನ್ನೆಲೆಯಲ್ಲಿ ನಡೆದ ಫ್ಯಾಸಿಸ್ಟ್ - ವಿರೋಧಿ ಸಮಾವೇಶ ಫ್ಯಾಸಿಸ್ಟ್-ಶಕ್ತಿಗಳ ಅಪಾಯದ ವಿಶಿಷ್ಟ ಸ್ವರೂಪ, ಅದನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರವಾಗಿ ಚರ್ಚಿಸಲು ಈ ಸಮಾವೇಶದಲ್ಲಿ ಮಾಜಿ ಸೋವಿಯೆಟ್ ಒಕ್ಕೂಟದ ಗಣರಾಜ್ಯಗಳಿಂದ ಬಂದ ಕಮ್ಯುನಿಸ್ಟ್, ಎಡಪಕ್ಷಗಳು ದೇಶಪ್ರೇಮಿ ಪಕ್ಷಗಳು ಭಾಗವಹಿಸಿದ್ದವು. 646 ಪ್ರತಿನಿಧಿಗಳು ಭಾಗವಹಿಸಿದ್ದವು. ಎಲ್ಲಾ ಕಡೆ ಫ್ಯಾಸಿಸ್ಟ್- ವಿರೋಧಿ ಸಮಿತಿಗಳನ್ನು ರಚಿಸಲು ಸಮಾವೇಶ ಕರೆ ನೀಡಿತು. ಎಲ್ಲಾ ರೀತಿಯ ರಾಜಕೀಯ ಪ್ರತಿಬಂಧ ತೆಗೆಯಲು ಹಾಗೂ ರಾಜಕೀಯ ಕೈದಿಗಳ ಬಿಡುಗಡೆಗೆ ಪ್ರಮುಖ ಆಂದೋಲನ ಆರಂಭಿಸಲೂ ಸಮಾವೇಶ ನಿರ್ಧರಿಸಿತು.

ಉತ್ತರ ಕನ್ನಡದಲ್ಲಿ ಕೋಮುವಾದಿಗಳಿಂದ ವ್ಯವಸ್ಥಿತ ಹಿಂಸಾಚಾರ

ಉತ್ತರ ಕನ್ನಡ : ಭಟ್ಕಳದಲ್ಲಿ ನಡೆಯುತ್ತಿರುವ ಕೋಮುಗಲಭೆಗಳನ್ನು ಪ್ರತಿಭಟಿಸುವ ನೆಪದಲ್ಲಿ ಜಿಲ್ಲೆಯ 'ಹಿಂದೂ ಜಾಗರಣಾ ವೇದಿಕೆ' ಜಿಲ್ಲೆಯಾದ್ಯಂತ ಜುಲೈ 26,1993 ರಂದು ಬಂದ್ ಆಚರಿಸಿದಾಗ ಜಿಲ್ಲೆಯ ಅನೇಕ ಬಾಗಗಳಲ್ಲಿ ನಡೆದ ಕೊಲೆ ಲೂಟಿ, ಚೂರಿ ಇರಿತಗಳಿಂದ ಕೂಡಿದ ಹಿಂಸಾಚಾರವನ್ನು 'ಚಿಂತನ' (ಉತ್ತರ ಕನ್ನಡ) ವೇದಿಕೆ ತೀವ್ರವಾಗಿ ಖಂಡಿಸಿದೆ. ಈ ಘಟನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅವು ಕೋಮುಶಕ್ತಿಗಳ ಪೂರ್ವನಿಯೋಜಿತ ಕೃತ್ಯ ಎಂದು ಸಾಬೀತಾಗುತ್ತಿವೆ.

ಹಿಂಸಾಚಾರ ನಡೆಸಿದ ಮತಾಂಧ ಶಕ್ತಿಗಳ ಹಿಂದೆ ಯಾವುದೇ ರಾಜಕೀಯ ಬೆಂಬಲವಿದ್ದರೂ ಲೆಕ್ಕಿಸದೇ ತಪ್ಪಿತಸ್ಥರ ಮೇಲೆ ಉಗ್ರಕ್ರಮಕೈಗೊಳ್ಳಬೇಕೆಂದು ಮತ್ತು ಹಿಂಸಾಚಾರ ಸಮಯದಲ್ಲಿ ಆಸ್ತಿ-ಪಾಸ್ತಿ ಪ್ರಾಣ ಕಳೆದುಕೊಂಡ ಬಡ ಅಮಾಯಕ ಜನರಿಗೆ ಸೂಕ್ತ ಪರಿಹಾರವನ್ನು ಶೀಘ್ರವಾಗಿ ಒದಗಿಸಬೇಕೆಂದು 'ಚಿಂತನ' ಸರಕಾರವನ್ನು ಒತ್ತಾಯಿಸುತ್ತದೆ.

ಮತಾಂಧ ಸಂಘಟನೆಗಳ ವಿಷಪೂರಿತ ಪ್ರಚಾರ ಮತ್ತು ಚಟುವಟಿಕೆಗಳನ್ನು ಎದುರಿಸಲು ಜಿಲ್ಲೆಯ ಎಲ್ಲ ವಿಚಾರಶೀಲರೂ ಒಂದಾಗಿ ಕಾರ್ಯನಿರ್ವಹಿಸಬೇಕೆಂದು 'ಚಿಂತನ' ವಿನಂತಿಸಿದೆ.

ಐಕ್ಯತೆ-ಸ್ವಾತಂತ್ರ್ಯ ರಕ್ಷಣೆ ವಾರಾಚರಣೆ ಯಶಸ್ಸಿಗೆ ನಿರ್ಧಾರ

ದಾಂಡೇಲಿ : ಸ್ವಾತಂತ್ರ್ಯ ದಿನದ ವೇಳೆಗೆ ಮುಕ್ತಾಯವಾಗುವಂತೆ ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯ ರಕ್ಷಿಸುವ ಬಗ್ಗೆ ಒಂದು ವಾರದ ಪ್ರಚಾರ ಪ್ರಕ್ಷೋಭೆ ನಡೆಸಬೇಕೆಂದು ರಾಷ್ಟ್ರೀಯ ಏಕತಾ ಆಂದೋಲನ ನೀಡಿದ ಕರೆಯನ್ನು ಉತ್ತರ ಕನ್ನಡ ಜಿಲ್ಲಾ ಸಿಪಿಐ(ಎಂ) ಘಟಕ ಸ್ವಾಗತಿಸಿದೆ.

ಜುಲೈ 11,1993 ರಂದು ದಾಂಡೇಲಿಯಲ್ಲಿ ನಡೆದ ಪಕ್ಷದ ಜಿಲ್ಲಾ ಸಮಿತಿಯ ಸಭೆ ಈ ಕುರಿತು ಒಂದು ಗೊತ್ತುವಳಿಯನ್ನು ಅಂಗೀಕರಿಸಿತು. ಜುಲೈ 26,1993 ರಂದು ಹಿಂದು ಜಾಗರಣಾ ವೇದಿಕೆಯ ಜಿಲ್ಲಾ 'ಬಂದ್' ಸಂದರ್ಭದಲ್ಲಿ ನಡೆದ ಹಿಂಸಾಚಾರ, ಲೂಟಿ, ಕೊಲೆಯನ್ನು ಸಭೆ ತೀವ್ರವಾಗಿ ಖಂಡಿಸಿತು. ಈ ಎಲ್ಲಾ ಪೂರ್ವನಿಯೋಜಿತ ಘಟನೆಗಳು ಮತೀಯ ಉದ್ದೇಶವನ್ನು ಮತ್ತಷ್ಟು ಉದ್ರೇಕಿಸಿ, ಕೋಮು ಪರಿಸ್ಥಿತಿಯನ್ನು ಮತ್ತಷ್ಟು ಕದಡುವ ಸಾಧನಗಳೆಂದು ಅಭಿಪ್ರಾಯಪಟ್ಟಿವೆ.

ಕೋಮುವಾದಿಗಳಿಂದ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳಿಂದ ಅಪಾಯಕ್ಕೊಳಗಾಗಿರುವ ಸ್ವಾತಂತ್ರ್ಯ ಹಾಗೂ ಐಕ್ಯತೆಯ ರಕ್ಷಣೆಯ ಈ ವಾರಾಚರಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಪಕ್ಷದ ಎಲ್ಲಾ ಘಟಕಗಳಿಗೂ ಸದಸ್ಯರಿಗೂ ಪಕ್ಷ ಸೂಚಿಸಿದೆ.

ಜಿಲ್ಲೆಯ ಎಲ್ಲಾ ಕಾರ್ಮಿಕ, ವಿದ್ಯಾರ್ಥಿ, ಯುವಜನ, ರೈತ ಸಂಘಟನೆಗಳು ಈ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಪಕ್ಷ ಕೇಳಿಕೊಂಡಿದೆ.

ಮೂಡಬಿದ್ರೆ ಅಸಂಘಟಿತ ಕಾರ್ಮಿಕರ ಸಭೆ

ಮೂಡಬಿದ್ರೆ : ಮೂಡಬಿದ್ರೆ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಮೂಡಬಿದ್ರೆ ಪ್ರದೇಶ ಅಸಂಘಟಿತ ಕಾರ್ಮಿಕರ ಸಮಸ್ಯೆಯನ್ನು ವಿವರಿಸಿದರು.

ಅಧ್ಯಕ್ಷತೆಯನ್ನು ಬಿ. ಲೋಕಯ್ಯವಹಿಸಿದ್ದರು. ಸಂಘದ ಕೋಶಾಧಿಕಾರಿ ಪ್ರದೀಪ್ ಕುಮಾರ್ ವಂದಿಸಿದರು.

ಸಿ.ಐ.ಟಿ.ಯು ಸಭೆ

ಮೈಸೂರು : ಸಿಐಟಿಯು ಮೈಸೂರು ಜಿಲ್ಲಾ ಸಮಿತಿ ಸಭೆ ಜುಲೈ 15 ರಂದು ಸಮಿತಿಯ ಅಧ್ಯಕ್ಷ ಎಂ.ಎಸ್. ಉಗ್ರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ದಿನಗೂಲಿ ಕಾರ್ಮಿಕರ ಮೆರವಣಿಗೆ

ದಾಂಡೇಲಿ: ಅಸಂಘಟಿತ ಕಾರ್ಮಿಕರ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರಲು ಸಿಐಟಿಯು ಕರೆದ 24 ಗಂಟೆಗಳ ದೇಶವ್ಯಾಪಿ ಉದ್ಯಮ ಮುಷ್ಕರ ಅಂಗವಾಗಿ ದಾಂಡೇಲಿಯಲ್ಲಿ ದಿನಗೂಲಿ ಕಾರ್ಮಿಕರು ಜುಲೈ 14,1993 ರಂದು ಯಶಸ್ವಿ ಮುಷ್ಕರ ನಡೆಸಿದರು. ಅಂದು ಸುಮಾರು 500 ದಿನಗೂಲಿ ಕಾರ್ಮಿಕರು ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ತೆಗೆದು ತಮ್ಮ ಬೇಡಿಕೆಯ ಬಗ್ಗೆ ಘೋಷಣೆಗಳನ್ನು ಕೂಗಿದರು ಮತ್ತು ಪೇಪರ್ ಮಿಲ್ಲಿನ ಮುಖ್ಯ ಗೇಟಿನ ಎದುರಿಗೆ ಬಹಿರಂಗ ಸಭೆ ನಡೆಸಿದರು. ಬಹಿರಂಗ ಸಭೆಯನ್ನುದ್ದೇಶಿ ಡಬ್ಲ್ಯು.ಸಿ.ಪಿ.ಎಮ್. ಎಂಪ್ಲಾಯಿಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಸಾವಂತ್ ಮಾತನಾಡಿದರು ಮೆರವಣಿಗೆಯ ನೇತೃತ್ವವನ್ನು ಸಾವಂತ, ಮಾಧವ, ಕಲ್ಲುಟ್ಕರ, ಎಂ.ಬಿ. ನಾಯ್ಕ ಭೀಮರಾವ ವಹಿಸಿದ್ದರು.

ತುಮ್ಮನ ಕಟ್ಟೆ ನೇಕಾರರ ಹೋರಾಟ


ತುಮ್ಮನ ಕಟ್ಟೆ: ನೂಲುಸಿಗದೆ ತುಮ್ಮಿನ ಕಟ್ಟೆ ನೂರಾರು ಕೈಮಗ್ಗ ನೇಕಾರರು ಕಂಗಲಾಗಿದ್ದಾರೆ. ಜುಲೈ 14,1993 ರಂದು ಊರಲ್ಲಿ ಮೆರವಣಿಗೆ ನಡೆಸಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಚೇರಿ ಎದುರು ದಿನವಿಡೀ ಧರಣಿ ಸತ್ಯಾಗ್ರಹ ನಡೆಸಿದರು. ಮೆರವಣಿಗೆ ನೇತೃತ್ವವನ್ನು ಕಾಂ. ಲಕ್ಕಣ್ಣ ಸತ್ಯಪ್ಪನವರ, ಗಂಗಪ್ಪ, ಗಂಗಾಮತ ಕಾಶಪ್ಪ, ಬಣಗಾರ, ಬಸಪ್ಪ ನಂಜಪ್ಪನವರ, ಸಾಂತನವರ, ಕಸುಬ ಸಪ್ಪ, ಸಣ್ಣಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಬಹಿರಂಗ ಸಭೆಯನ್ನು ಉದ್ದೇಶಿ ಎಫ್.ಎಫ್ ಕ್ಯಾದಗಿ ಮಾತನಾಡಿದರು. ನಂತರ ಕೇಂದ್ರ ಸರಕಾರ ಹತ್ತಿ-ನೂಲನ್ನು ರಫ್ತು ಮಾಡಿ ನೇಕಾರರಿಗೆ ನೂಲು ಸಿಗದಂತೆ ಮಾಡುತ್ತದೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನಿರ್ಲಕ್ಷದ ಅಸಮರ್ಪಕ ಕಾರ್ಯ ನಿರ್ವಹಣೆ ಒಂದು ಕಡೆ, ಇನ್ನೊಂದೆಡೆ ರಾಜ್ಯದ ಮಂತ್ರಿ ಎಚ್.ಕೆ. ಪಾಟೀಲರು ಲಕ್ಷಾಂತರ ಕೈಮಗ್ಗ ನೇಕಾರರ ನೂಲಿನ ಮತ್ತು ಇತರ ಸಮಸ್ಯೆಗಳಿಗೆ ಗಮನ ಕೊಡದಿರುವುದರಿಂದ ಕೈಮಗ್ಗ ನೇಕಾರರ ಮೇಲೆ ಉಪವಾಸ ಬೀಳುವ ಪ್ರಸಂಗ ಬಂದಿದೆ ಎಂದು ಟೀಕಿಸಿದರು.

ತಕ್ಷಣ ಕೈಮಗ್ಗ ನೇಕಾರರ ಸಮಸ್ಯೆಗಳಿಗೆ ರಾಜ್ಯ ಸರಕಾರ ಮತ್ತು ಕೆ.ಎಚ್.ಡಿ.ಸಿ. ನಿಗಮ ಗಮನ ಹರಿಸಿ ಶಾಶ್ವತ ಯೋಜನೆಯ ರೂಪಿಸದಿದ್ದರೆ ತೀವ್ರತರದ ಹೋರಾಟ ಮಾಡುತ್ತೇವೆಂದು ಘೋಷಿಸಿ ಅವರು ಜವಳಿ ಉದ್ದಿಮೆಯನ್ನು ರಾಷ್ಟ್ರೀಕರಿಸುವಂತೆ ಒತ್ತಾಯಿಸಿದರು.

KRNM/BGS-405 MAG(2) PRB DECR 319-78/79

ಇನ್ನು ಮಾತುಕತೆಗೂ ವಿದೇಶೀಯರ ಕೃಪೆ ಬೇಕು



ಮುಂಬಯಿ ಮತ್ತು ದೆಹಲಿಯ ದೂರಸಂಪರ್ಕ ಸೇವೆ ಸಲ್ಲಿಸಲಾಗುತ್ತಿರುವ ಎಂಟಿಎನ್‌ಎಲ್. (ಮಹಾನಗರ ಟೆಲಿಫೋನ್ ನಿಗಮ ನಿಯಮಿತ) ನ ಶೇರುಗಳನ್ನು ಮಾರಲಾಗುತ್ತಿದೆ. ವಿದೇಶೀ ಪಾಲುದಾರರು ಹೊಸ ತಂತ್ರಜ್ಞಾನ ತರಲಿದ್ದಾರೆ ಎಂಬ ನೆಪದಲ್ಲಿ ಈ ಮಾರಾಟ ಮಾಡಲಾಗುತ್ತಿದೆ. ಸಾರ್ವಜನಿಕ ವಲಯದ ಉದ್ಯಮಗಳ ಶೇರುಗಳ ಮಾರಾಟ ಮಾಡುವಾಗ 120 ಕೋಟಿ ರೂಪಾಯಿಗಳ ಶೇರುಗಳನ್ನು ಆಗಲೇ ಮಾರಿಯಾಗಿದೆ. ಈಗ 100 ಕೋಟಿ ರೂಪಾಯಿಗಳ ಶೇರುಗಳನ್ನು ವಿದೇಶೀಯರಿಗೆ ಮಾರಲಾಗುತ್ತಿದೆ. ಒಟ್ಟು 800 ರೂಪಾಯಿಗಳ ಶೇರು ಬಂಡವಾಳಕ್ಕೆ ಅನುಮತಿಯಿರುವ ಈ ನಿಗಮದ ಹಾಲಿ ಇರುವ ಬಂಡವಾಳ 600 ಕೋಟಿ ರೂಪಾಯಿಗಳು. ಹಂತ ಹಂತವಾಗಿ ಖಾಸಗಿಯವರಿಗೆ ವಿದೇಶೀಯರಿಗೆ ಈ ನಿಗಮವೇ ಮಾರಾಟವಾಗಲಿದೆ. ಆಮೇಲೆ ಮಹಾನಗರಗಳ ವಾಸಿಗಳು ಬಡವರಾರೂ ಫೋನ್ ಮಾಡುವಂತಿರುವುದಿಲ್ಲ. ಯಾಕೆಂದರೆ ಅವು ವಿದೇಶೀಯರ ಕೈಯಲ್ಲಿರುತ್ತವೆ. ಅವರು ನಿರ್ಧರಿಸುವ ಬೆಲೆ ನೀಡಲೇಬೇಕಾಗುತ್ತದೆ.

ವಿದೇಶೀ ಹಣ ಹೂಡಿಕೆಗೆ ಅನುಮೋದನೆ

ಕೇಂದ್ರ ಸರ್ಕಾರ ಮತ್ತೆ 70 ಕೋಟಿ ರೂಪಾಯಿಗಳಷ್ಟು ವಿದೇಶೀ ಹಣಹೂಡಿಕೆ ಪ್ರಸ್ತಾಪಗಳನ್ನು ಅನುಮೋದಿಸಿದೆ. ಇದನ್ನು ಸರ್ಕಾರದ ಅನುಮೋದನೆ ಎಂದು ಕರೆದರೂ ಇದು ಅನುಮೋದನೆಯಲ್ಲ. ಸರ್ಕಾರ ಒಡ್ಡಿರುವ ಭಿಕ್ಷಾ ಪಾತ್ರೆಗೆ ಬಂದು ಬಿದ್ದಿರುವ ವಿದೇಶೀ ಬಿಕ್ಷೆ.

ಇಲ್ಲಿಯವರೆಗೆ ಈ ಭಿಕ್ಷೆಯ ಒಟ್ಟು ಪ್ರಮಾಣ 1700 ಕೋಟಿ ರೂಪಾಯಿಗಳಷ್ಟಾಗಿದೆ. ಆದರೆ ಈ ಭಿಕ್ಷೆಗೆ ಎಂತಹ ಪ್ರಭಾವವಿರುತ್ತದೆಂದರೆ ದೇಶದ ಸಂಪತ್ತನ್ನೆಲ್ಲ ಇದು ಕೊಳ್ಳೆ ಹೊಡೆದುಕೊಂಡು ಹೋಗುತ್ತದೆ.

ಮಧ್ಯಮರ ಸಲಹೆ

ಪೂರ್ಣವಾಗಿ ಮಾರುಕಟ್ಟೆ ವ್ಯವಸ್ಥೆ ಅಂದರೆ ಸರ್ಕಾರದ ಹಸ್ತಕ್ಷೇಪ ಆರ್ಥಿಕ

ನರಸಿಂಹರಾವ್ ಸರಕಾರದ 26ನೇ ತಿಂಗಳಲ್ಲಿ

ದಲ್ಲಿ ಏನೇನೂ ಇರಕೂಡದೆಂಬುದು ಒಂದು ವಾದ. ಐ.ಎಂ.ಎಫ್ ವಿಶ್ವಬ್ಯಾಂಕ್ ಇತ್ಯಾದಿ ಸಾಮ್ರಾಜ್ಯಶಾಹಿಗಳ ಪ್ರತಿನಿಧಿಗಳು ಈ ವಾದ ಹೂಡುತ್ತಾರೆ.

ಆರ್ಥಿಕವನ್ನು ಜನತೆಯ ಸರ್ಕಾರವೇ ನಿರ್ಧರಿಸಬೇಕು, ರೂಪಿಸಬೇಕು ಮತ್ತು ಬೆಳೆಸಬೇಕು ಎಂಬುದು ಸಮಾಜವಾದದ ವಾದ.

ಆರ್ಥಿಕ ಸುಧಾರಣೆಯ ಈ ಸಮಯದಲ್ಲಿ ಎರಡೂ ಪದ್ಧತಿ ಒಟ್ಟಿಗೆ ಇರಬೇಕು ಎನ್ನುತ್ತಾರೆ ಭಾರತೀಯ ರಿಸರ್ವ್‌ಬ್ಯಾಂಕ್‌ನ ಆರ್ಥಿಕ ಸಲಹೆಗಾರ 'ಜಗ್ ಎಂ. ಚೋನಾ'

ಆದರೆ ಎರಡೂ ದೋಣಿಗಳಲ್ಲಿ ಕಾಲಿಟ್ಟವ ನಡು ನೀರಿಗೇ ಬೀಳುವುದು ಅಲ್ಲವೇ?

ಬಡ ಕಂದಮ್ಮಗಳ ಹೊಟ್ಟೆಯ ಮೇಲೆ ಹೊಡೆಯುವ ಸರ್ಕಾರ

ಕೇಂದ್ರ ಸರ್ಕಾರ ಈಗ ಅಮೇರಿಕದ ಬೆದರಿಕೆಗೆ ಬೆದರಿ ದೇಶದ ಬಡ ಕಂದಮ್ಮಗಳ ಹೊಟ್ಟೆಯ ಮೇಲೆ ಹೊಡೆಯ ಹೊರಟಿದೆ.

ಭಾರತದಿಂದ ಆಮದು ಮಾಡಿಕೊಳ್ಳುತ್ತಿದ್ದ ರತ್ನಗಂಬಳಿಗಳ ಮೇಲೆ ಅಮೇರಿಕ ನಿರ್ಭಂಧ ಹೇರಿದೆ. ಇದಕ್ಕೆ ಅದು ನೀಡಿರುವ ಕಾರಣ. 'ಭಾರತದ ಈ ಉದ್ಯಮದಲ್ಲಿ ಮಕ್ಕಳನ್ನು ಶೋಷಿಸಲಾಗುತ್ತಿದೆ.' ಆದ್ದರಿಂದ ಈ ರತ್ನಗಂಬಳಿಗಳನ್ನು ಆಮದು ಮಾಡಿಕೊಳ್ಳಕೂಡದು.

ನಮ್ಮ ಸರ್ಕಾರ ಅಮೇರಿಕದ ಈ ಹುಕುಮನ್ನು ಶಿರಸಾವಹಿಸಿ ಕ್ರಮ ಕೈಗೊಂಡಿದೆ. ಇನ್ನು ಮೂರೇ ತಿಂಗಳಲ್ಲಿ ಉತ್ಪಾದಕರು ಬಾಲ ಕಾರ್ಮಿಕರ ನೇಮಕಗಳನ್ನು ಪೂರ್ತಿಯಾಗಿ ಬಿಡಬೇಕು ಎಂದು ಸರ್ಕಾರ ಆಜ್ಞೆ ಮಾಡಿದೆ. ಎಷ್ಟೋ ಕುಟುಂಬಗಳ ಅನ್ನಕ್ಕೆ ಕನ್ನ.

ಅಂದರೆ ಬಾಲಕರನ್ನು ದುಡಿಸಿಕೊಳ್ಳುವುದು ಸರಿ ಎಂದಲ್ಲ. ದೇಶದ ಆರ್ಥಿಕ ಸ್ಥಿತಿ ಈ ಬಾಲಕರನ್ನು ಈ ಸ್ಥಿತಿಗೆ ತಳ್ಳಿದೆ. ಆಟ ಪಾಠಗಳಲ್ಲಿ ತೊಡಗಬೇಕಾದ ಕಂದಮ್ಮಗಳಿಗೆ ಆ ಅವಕಾಶವೇ ಇಲ್ಲ. ಈಗ ಹೊಟ್ಟೆಗೂ ಇಲ್ಲದ ಸ್ಥಿತಿ.

ಇದಕ್ಕೇನಾದರೂ ಬದಲಿ ವ್ಯವಸ್ಥೆ ಸರ್ಕಾರದ ಬಳಿ ಇದೆಯೇ ?ಇಲ್ಲ. ಇದ್ದರೆ ದೇಶದಾದ್ಯಂತ ಹೀನ ಸ್ಥಿತಿಯಲ್ಲಿ ಬಾಲಕರು ಏಕೆ ಬವಣೆ ಪಡುತ್ತಿದ್ದಾರೆ?

ನೌಕರರನ್ನು ಮನೆಗೆ ಕಳಿಸುವ ನೀತಿ : ವಿದೇಶಿ ಬ್ಯಾಂಕುಗಳ ಮೇಲ್ಪಂಕ್ತಿ

ನೌಕರರನ್ನು ಮನೆಗೆ ಕಳಿಸುವ ನೀತಿಯಲ್ಲಿ ವಿದೇಶೀ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಭಾರತದ ವಾಣಿಜ್ಯ ಬ್ಯಾಂಕುಗಳಿಗೆ ಮೇಲ್ಪಂಕ್ತಿ ಹಾಕಿಕೊಡಲಿವೆ. ಈಗಾಗಲೇ ಎರಡು ವಿದೇಶೀ ಬ್ಯಾಂಕುಗಳು ಜೂನ್ 1ನೇ ತಾರೀಖಿನಿಂದ ಸ್ವಯಂ ನಿವೃತ್ತಿ ಯೋಜನೆ ಎಂಬ ಯೋಜನೆ ತಂದು 57 ನೌಕರರನ್ನು ಮನೆಗೆ ಕಳುಹಿಸಿದ್ದಾರೆ. ಹೆಚ್ಚಿಗೆ ವೇತನ ಪಡೆವ ಈ ನೌಕರರಿಗೆ ಈ ನಿವೃತ್ತಿಯಿಂದ ದೊಡ್ಡ ಮೊತ್ತದ ಹಣ ದೊರಕಿರಬಹುದು.

ಇದೇ ಯೋಜನೆ ಭಾರತದ ಬ್ಯಾಂಕುಗಳಿಗೆ ಬಂದರೆ ನೌಕರರಿಗೆ ಹಿತಕರವಾಗಿಯಂತೂ ಇರುವುದಿಲ್ಲ. ಬಹುತೇಕ ನೌಕರರು ಬೀದಿಗೆ ಬೀಳಬೇಕಾಗುತ್ತದೆ.

ರಕ್ಷಣೆಯ ನೆಪದಲ್ಲಿ ಆಕ್ರಮಣಕ್ಕೆ ತೊಡಗಿದ ಅರ್ಥಮಂತ್ರಿ

ಶೇರು ಹಗರಣ



ನೇರ ತೆರಿಗೆಗಳ ಮಂಡಳಿಯ ಸದಸ್ಯ ಪಿ.ಕೆ. ಗುಪ್ತ ಹರ್ಷದ್ ಮೆಹ್ತನ ಆಸ್ತಿ ಪಾಸ್ತಿಗಳ ಮೇಲೆ ದಾಳಿ ನಡೆಸುವಲ್ಲಿ ಕೇದ್ರ ಅರ್ಥ ಸಚಿವಾಲಯ ಅಡೆತಡೆ ಒಡ್ಡಿತು ಎಂದು ಸಂಯುಕ್ತ ಸಂಸದೀಯ ಸಮಿತಿಗೆ ತಿಳಿಸಿದ್ದು ನೆನಪಿದೆಯಷ್ಟೆ. ಈ ಆಪಾದನೆಯನ್ನು ಅಲ್ಲಗಳೆಯಲು ಹೊರಟಿರುವ ನಮ್ಮ ಕೇಂದ್ರ ಅರ್ಥ ಮಂತ್ರಿ ಮನಮೋಹನಸಿಂಗರು ಪಿ.ಕೆ. ಗುಪ್ತ ನಿಷ್ಕ್ರಿಯರಾಗಿದ್ದರು, ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದೆಲ್ಲ ಆಕ್ರಮಣ ನಡೆಸತೊಡಗಿದ್ದಾರೆ. ತಾನು ಕಳ್ಳನಲ್ಲ ಎಂದು ಹೇಳುವುದು ಅದಕ್ಕೆ ಆಧಾರ ಪುರಾವೆ ನೀಡುವುದು ಸರಿ. ಆದರೆ ತಾನು ಕಳ್ಳನಲ್ಲ ಎಂದು ಸಿದ್ಧ ಮಾಡಲು ತನ್ನ ಕಳ್ಳತನ ಬಯಲಿಗೆಳೆದವನೇ ಕಳ್ಳ ಎಂಬುದು ಎಷ್ಟು ಸರಿ?

ಸರಿಯೋ ತಪ್ಪೋ ಮನಮೋಹನ ಸಿಂಗರಂತೂ ಆ ದಾರಿ ಹಿಡಿದ್ದಾರೆ. ಪಿ.ಕೆ. ಗುಪ್ತಾ ಸರಿಯಾದ ಉತ್ತರ ನೀಡಬಹುದು.

ಹರ್ಷದ್‌ನ ದುಬೈ ಸಂಬಂಧ

ಹರ್ಷದ್ ಮೆಹ್ತ ನರಸಿಂಹರಾಯರ ವಿರುದ್ಧ ಆಪಾದನೆ ಮಾಡಿದ ಮೇಲೆ ಆತನ ಮೇಲೆ ಪ್ರತೀಕಾರದ ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಮಾಡುತ್ತಿರುವಂತೆ ಕಾಣುತ್ತದೆ. ಮೆಹ್ತ ಸಂಭಾವಿತನೆಂದೇನೂ ಅಲ್ಲ.

ಈಗ ಹರ್ಷದ್ ಮೆಹ್ತನಿಗೆ ಯು.ಎ.ಐ.ಯಲ್ಲಿ ಆತನಿಗೆ ಸಂಪರ್ಕಗಳಿದ್ದವೆಂದು ತನಿಖೆದಾರರು ಅರಿತಿದ್ದಾರೆ. ಹವಾಳ ವ್ಯವಹಾರ (ಡಾಲರುಗಳ ಕಾಳಸಂತೆ ವ್ಯಾಪಾರ) ದಲ್ಲಿ ಭಾರತೀಯ ವ್ಯಾಪಾರಸ್ಥರೊಂದಿಗೆ ಸಂಪರ್ಕವಿತ್ತಂತೆ. ಈ ಹವಾಳ ವ್ಯವಹಾರಗಳ ವಿವರಗಳು ಇನ್ನೂ ಹೊರಬರಬೇಕಾಗಿವೆ.

ಹರ್ಷದ್‌ನ ಸಹಾಯಕನ ತಿರುಮಂತ್ರ

ಹರ್ಷದ್‌ನ ಸಹಾಯಕ ಮೋಹನ್ ಖಾಂಡೆಲ್‌ವಾಲ್ ಹರ್ಷದ್ ನರಸಿಂಹರಾಯರಿಗೆ ನೀಡಲು ಹಣದ ವ್ಯವಸ್ಥೆ ತಾನು ಮಾಡಲಿಲ್ಲ ಮತ್ತು ತನಗೆ ವೈಯುಕ್ತಿಕವಾಗಿ ಈ ವಿಷಯ ತಿಳಿದಿಲ್ಲ ಎಂದಿದ್ದಾನೆ ಸಂಯುಕ್ತ ಸಂಸದೀಯ ಸಮಿತಿಗೆ ಬರೆದಿರುವ ಪತ್ರದಲ್ಲಿ ಈ ವಿಷಯ ತಿಳಿಸಿದ್ದಾನೆ.

'ಖಾಂಡೇಲ್‌ವಾಲ್ 1992ರ ಜೂನ್ ಹನ್ನೆರಡರಂದು ಸಿಬಿಐ ಈ ವಿಷಯ ತಿಳಿಸಿದ್ದಾನೆ' ಎಂಬ ಹರ್ಷದ್ ಮೆಹ್ತನ ಹೇಳಿಕೆಗೆ ಪ್ರತಿಕ್ರಿಯಿಸುತ್ತ 'ಹರ್ಷದ್‌ನ ವ್ಯವಹಾರಗಳ ಬಗೆಗೆ ವಿವರವಾದ ಹೇಳಿಕೆ ನೀಡಿದ್ದೇನೆ ಅಷ್ಟೇ' ಎಂದಿದ್ದಾನೆ.

ಇನ್ನೂ ಕೆಲವೇ ದಿನಗಳಲ್ಲಿ ಸರ್ಕಾರದ ಸುಳ್ಳುಗಳನ್ನು ಬಯಲು ಮಾಡುತ್ತೇವೆ

ಮೇಲಿನ ಮಾತುಗಳನ್ನು ಹೇಳಿದವರು ಹರ್ಷದ್ ಮೆಹ್ತನ ವಕೀಲ ಮಹೇಶ್ ಜೇಠ್ಮಲಾನಿ. ಸರ್ಕಾರ ಹೇಳುತ್ತಿರುವ ಎಲ್ಲ ಸುಳ್ಳುಗಳನ್ನು ಬಯಲು ಮಾಡುವಂತಹ ಪುರಾವೆಗಳನ್ನು ಇನ್ನೂ ಕೆಲವೇ ದಿನಗಳಲ್ಲಿ ಹೊರ ಹಾಕುತ್ತೇವೆ. ಆನಂತರದಲ್ಲಿ ಸರ್ಕಾರ ಇನ್ನೂ ಸುಳ್ಳುಗಳನ್ನು ಹೇಳಿ ದಕ್ಕಿಸಿಕೊಳ್ಳಲಾಗುವುದಿಲ್ಲ ಎಂದಿದ್ದಾರೆ ಅವರು.


ಕಾಂಗ್ರೆಸ್‌ನ ಖದೀಮರು ಈ ಪುರಾವೆಗಳು ಯಾವುವು ಮತ್ತು ಅದನ್ನು ಅಲ್ಲಗಳೆಯಲು ಯಾವ್ಯಾವ ಸುಳ್ಳುಗಳು ಬೇಕೆಂದು ಆಗಲೇ ಯೋಚಿಸತೊಡಗಿರಬಹುದು.

ಹರ್ಷದ್‌ನನ್ನು ಭೇಟಿಯಾಗಲೇ ಇಲ್ಲವೆಂದು ಪ್ರಧಾನಿ

ಪ್ರಧಾನಿ ಮಂತ್ರಿ ಶ್ರೀ ನರಸಿಂಹರಾಯರು ಹರ್ಷದ್ ಮೆಹ್ತ ಒಂದು ಕೋಟಿ ರೂಪಾಯಿಗಳನ್ನು ನೀಡಿದೆನೆಂದು ಆಪಾದನೆ ಮಾಡಿದ ತಿಂಗಳುಗಳ ನಂತರ ಕೊನೆಗೂ ಧೈರ್ಯ ಮಾಡಿ ತಾವು ಹರ್ಷದ್ ಮೆಹ್ತನನ್ನು ಭೇಟಿಯಾಗಲೇ ಇಲ್ಲವೆಂದು ಹೇಳಿದ್ದಾರೆ. ಇಷ್ಟು ದಿನ ಈ ನಿರಾಕರಣೆ ಮಾಡದೇ ಇರುವುದಕ್ಕೆ ಅವರು ಹಲವು ಕುಂಟು ನೆಪಗಳನ್ನು ಹೇಳಿದ್ದಾರೆ.

ಹುಳ್ಳಗಿನ ಮನಸ್ಸಿನ ಈ ಕಳ್ಳ ತಾನು ಕಾನೂನುರೀತ್ಯ ಸಿಕ್ಕಿಹಾಕಿಕೊಳ್ಳುವುದಿಲ್ಲವೆಂದು ಖಾತ್ರಿ ಮಾಡಿಕೊಂಡ ನಂತರ ಈ ನಿರಾಕರಣೆ ಮಾಡಿರುವುದು ಹಸುಗೂಸಿಗೂ ಸ್ಪಷ್ಟವಾಗಿ ತೋರುತ್ತದಲ್ಲವೆ?

ಮುಖ ಮುಚ್ಚಿಕೊಳ್ಳಬೇಕಾದ ವಿಜಯ!
-- ವ್ಯಂಗ್ಯ ಚಿತ್ರ : ರವಿ



ಇಂಥಾ ಪ್ರಧಾನಿ...

ಪುಟ 1ರಿಂದ

ರನ್ನು ಒಲಿಸುವ ಹೂಟ ಈ ಗುಂಪಿನ ರಾಮ್‌ಲಕನ್‌ಸಿಂಗ್ ಯಾದವ್ ಎಂಬ ಎಂ.ಪಿ.ಯ ಮನೆಗೆ ಯಾರ್‍ಯಾರ ಧಾಳಿ. ಕೇರಳದ ಎಂದೆಂದೂ ಅಲ್ಪಸಂಖ್ಯಾಕ ಮುಖ್ಯ ಮಂತ್ರಿ ಕರುಣಾಕರನ್, ಹರ್‍ಯಾಣದ ಕುಪ್ರಸಿದ್ಧ ಭಜನ್‌ಲಾಲ್ ಪ್ರಧಾನಿಯ ಅತ್ಯಂತ ನೆಚ್ಚಿನ ಭಂಟ ಅವರ ರಾಜಕೀಯ ಕಾರ್ಯದರ್ಶಿ ಜಿತೇಂದ್ರ ಪ್ರಸಾದ್ ಇವರೆಲ್ಲರ ದಂಡು. ಇವರು ಭೇಟಿಯ ಕಾಲದಲ್ಲಿ ಈ ಎಂ.ಪಿ.ಯ ಮನೆಗೆ ಶಸಸ್ತ್ರ ಪೋಲೀಸರ ಪಹರೆ. ಒಳಗಡೆ ಏನು ನಡೆಯುವುದೆಂದು ಲೋಕದ ಕಣ್ಣಿಗೆ ಬೀಳಬಾರದೆಂದು ಪ್ಲಾಸ್ಟಿಕ್ ಹಾಳೆಗಳ ಮುಸುಕು. ಅಬ್ಬಾ ದೇಶವನ್ನು ಆಳುವ ಸರ್ಕಾರದ ಗತಿ ಒಂದು ಪುರಸಭೆಯ ಮಟ್ಟಕ್ಕೂ ಇಳಿಯಿತು. ಇವರ ಬೆಂಬಲಿಗರನ್ನು ಅವರು, ಅವರ ಬೆಂಬಲಿಗರನ್ನು ಇವರು ಅಪಹರಿಸುವ ಅಪಹರಿಸಬಹುದೆಂಬ ಶಂಕೆಯಿಂದ ಪುರಸಬಾ ಅಧ್ಯಕ್ಷ ಚುನಾವಣೆಯ ಕೊನೆಯಗಳಿಗೆಯವರೆಗೂ ಬಚ್ಚಿಡುವ ಆಟ ದೆಹಲಿಗೂ ವ್ಯಾಪಿಸಿತು. ಎಂಥಾ ಗತಿ ಬಂತು ಕೇಂದ್ರ ಸರ್ಕಾರಕ್ಕೆ!

ಅವಿಶ್ವಾಸ ನಿರ್ಣಯದ ಬಗೆಗಿನ ಚರ್ಚೆಗಳಲ್ಲಿ ಎಲ್ಲ ಪಕ್ಷಗಳೂ, ಅದರಲ್ಲಿಯೂ ಸಿಪಿಐ(ಎಂ) ಕೇಂದ್ರ ಸರ್ಕಾರದ ಭ್ರಷ್ಟಾಚಾರ ಅದರಲ್ಲಿಯೂ ಪ್ರಧಾನಿಯವರೇ ಹಣತೆಗೆದುಕೊಂಡ ಪ್ರಶ್ನೆಯನ್ನು ಎತ್ತಿದ್ದರೂ ಅದರ ಬಗ್ಗೆ ಒಂದೇ ಒಂದು ಮಾತನಾಡುವ ಧೈರ್ಯ ಪ್ರಧಾನಿಗೆ ಬರಲಿಲ್ಲ ಎಂಬುದಂತೂ ಎಂಥಾ ಶೋಚನೀಯ ಸ್ಥಿತಿ.

ದೇಶದೆಲ್ಲಾ ಪ್ರತಿಪಕ್ಷಗಳೂ ಈ ಗೆಲವುಗೆಲುವಲ್ಲ ಎಂದು ಸಾರಿದ್ದಾರೆ. ಅವರಿವರ ಮಾತಿರಲಿ. ಕಾಂಗ್ರೆಸ್‌ನ ನಿಷ್ಠ ಬೆಂಬಲಿಗ ಪತ್ರಿಕೆ ದೇಶದ ಅತಿ ದೊಡ್ಡ ಪತ್ರಿಕೆ ಟೈಂಸ್ ಆಫ್ ಇಂಡಿಯಾವನ್ನು ನೋಡಿ, ಹೊಸ ಆರ್ಥಿಕ ನೀತಿಯ ಉತ್ಸಾಹಿ ಬೆಂಬಲಿಗರಾದ ದಿ ಹಿಂದೂ ಪತ್ರಿಕೆಯನ್ನು ನೋಡಿ. ಇಂಥಾಗತಿ ಯಾವ ಪ್ರಧಾನಿಗೂ ಬರಬಾರದಿತ್ತು. ಭೂಮಿ ಇಲ್ಲಿಯೇ ಬಿರಿದು ನನ್ನನ್ನು ಸೆಳೆದುಕೊಳ್ಳಲಿಲ್ಲವೇಕೆ ಎಂದು ತಲೆ ತಗ್ಗಿಸುವಷ್ಟು ನಾಚಿ ಅವಮಾನಗಳಿಂದ ಯಾವ ಮಾನವಂತನಾದರೂ ಕುಸಿದು ಕುಗ್ಗಿ ಹೋಗಬೇಕಾದ ಸಂದರ್ಭದಲ್ಲಿಯೂ ಕುರ್ಚಿಗಾಗಿ ಎಂತಹಾ ಹೇಸಿಗೆ ಕೆಲಸಕ್ಕೂ ಕೈಹಾಕುವ ಇಂಥಾ ಪ್ರಧಾನಿ ನಮ್ಮ ದೇಶಕ್ಕೆ ಎಂದೂ ವಕ್ರಿಸಬಾರದಿತ್ತು. ಇನ್ನಾದರೂ ಕಾಂಗ್ರೆಸ್‌ಗೆ ಇಂತಹ ಪ್ರಧಾನಿಯನ್ನು ಪಡೆಯುವುದರ ಅನಾಹುತ ಅರ್ಥವಾಗುವುದೇ? ದೇಶಕ್ಕೆ ಅನಾಹುತ ತಪ್ಪುವುದೇ?

ಲೋಕಸಭೆಯಲ್ಲಿ ಸಿಪಿಐ(ಎಂ)ನ ರಣದುಂಧುಭಿ

ನರಸಿಂಹರಾವ್ ದೇಶದ ಪ್ರಧಾನಿಯಾಗಿರುವವರೆಗೂ ಈ ದೇಶಕ್ಕೆ ಅನಾಹುತ ತಪ್ಪಿದ್ದಲ್ಲ. ಅವರನ್ನು ಅಧಿಕಾರದಿಂದ ತೊಲಗಿಸುವುದೇ ಇಂದಿನ ಪ್ರಥಮ ಕರ್ತವ್ಯ- ಇದು ಸಿಪಿಐ(ಎಂ) ಕೇಂದ್ರ ಸಮಿತಿಯವಾಣಿ. ಹಲವು ರೀತಿಯಲ್ಲಿ ಹಲವು ಬಾರಿ ಪಕ್ಷದ ಮುಖವಾಣಿ- ಪೀಪಲ್ಸ್ ಡೆಮಾಕ್ರಸಿಯಲ್ಲಿ ನೀವೆಲ್ಲ ಓದಿದ್ದೀರಿ.

ಸಿಪಿಐ(ಎಂ) ಈ ವಾಣಿ ಮೊಳಗಿತು ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯವಾಗಿ. ಸಿಪಿಐ(ಎಂ)ನ ಅಜೊಯ್ ಮುಖ್ಯೋಪಾಧ್ಯಾಯರು ಮಂಡಿಸಿದ ಅವಿಶ್ವಾಸ ನಿರ್ಣಯ.

ಇಡೀ ದೇಶವನ್ನೇ ತನ್ನತ್ತ ಸೆಳೆಯಿತು ಎಲ್ಲರ ಕಣ್ಣು ಕೀಲಿಸಿತ್ತು. ಲೋಕಸಭೆಯಲ್ಲಿ. ಲೋಕಸಭೆಯ ಸ್ಪೀಕರ್(ಅಧ್ಯಕ್ಷರು) ರವರ ಕಚೇರಿಗೆ ಬಂದ 40 ಅವಿಶ್ವಾಸ ನಿರ್ಣಯಗಳಲ್ಲಿ 15 ಸಿಪಿಐ(ಎಂ) ನಿಂದ ಬಂದವು ಎಂಬುದೇ ಸಿಪಿಐ(ಎಂ)ಗೆ ರಾವ್ ಸರ್ಕಾರವನ್ನು ತೊಲಗಿಸುವುದರಲ್ಲಿ ಇರುವ ಆಸ್ಥೆಯನ್ನು ತೋರಿಸುತ್ತದೆ. ಎಲ್ಲಾ ಪತ್ರಿಕೆಗಳೂ ಒಂದು ವಿಷಯವನ್ನಂತೂ ಒಪ್ಪಿಕೊಳ್ಳಲೇಬೇಕಾಗಿದೆ ಬಂದಿದೆ. ಸಿಪಿಐ(ಎಂ) ಒಂದೇ ಕೋಮುವಾದವನ್ನು ಬಿಜೆಪಿಯ ದುಶ್ಚರಿತ್ರೆಯನ್ನು ಕಾಂಗ್ರೆ ಪಕ್ಷದ ನಾಗಪುರ ರೋಗವನ್ನು ಲೋಕಸಭೆಯಲ್ಲಿ ಎತ್ತಿದ್ದು. ಇತರೆಲ್ಲಾ ಪಕ್ಷಗಳು - ಬಿಜೆಪಿ ಸಹ- ಅಯೋಧ್ಯಾ ಬಗ್ಗೆ ಮಾತನಾಡಲೇ ಇಲ್ಲ.

●

"ಸೂಟ್‌ಕೇಸ್ ಆರ್ಥಿಕ"...

ಪುಟ 1ರಿಂದ

ಕರಣ, ಜಾಗತೀಕರಣ ಎಲ್ಲಾ ಬೇಕು ಎಂದು ಸರಕಾರದ ವಾದವನ್ನು ಪುಡಿಗುಟ್ಟುತ್ತಾ "ನಿಮ್ಮದೇ ಆರ್ಥಿಕ, ಕೈಗಾರಿಕಾ ಬುಡವನ್ನು ಭದ್ರಗೊಳಿಸಿಕೊಳ್ಳದೆ, ತಳ-ಹದಿಯನ್ನು ಗಟ್ಟಿ ಮಾಡಿಕೊಳ್ಳದೆ ನೀವು ಹೇಗೆ ಸ್ಪರ್ಧಿಸುತ್ತೀರಾ? ಆದರೆ ನೀವು ಈ ತಳಹದಿಯನ್ನೇ ದುರ್ಬಲಗೊಳಿಸು-ತ್ತಿದ್ದೀರಲ್ಲಾ! ಈ ಆರ್ಥಿಕ ಆಧಾರವನ್ನೇ ಕಳಚಿ ಬಿಸಾಕುತ್ತಿದ್ದೀರಲ್ಲಾ!" ಎಂದರು.

ಜವಹರಲಾಲ್ ನೆಹರೂ ಯಾವುದನ್ನು 'ಆಧುನಿಕ ಭಾರತದ ದೇವಸ್ಥಾನ'ಗಳೆಂದರೋ ಆ ಸಾರ್ವಜನಿಕ ವಲಯದ ಶೇರುಗಳನ್ನು ಮಾರಿ ದೊಡ್ಡ ಹಗರಣ ಸೃಷ್ಟಿಸಿದ್ದಾರೆ ಎಂಬತ್ತ ಗಮನ ಸೆಳೆಯುತ್ತಾ ಕಾಂ. ಸೋಮನಾಥ ಚಟರ್ಜಿ "ನೀವು ಮಸೀದಿಯನ್ನು ಧ್ವಂಸ ಮಾಡಿ-ದಿರಿ, ನೀವು ಜಾತ್ಯಾತೀತೆಯನ್ನು ಧ್ವಂಸ ಮಾಡಿದಿರಿ, ಈಗ ನೀವು ಆಧುನಿಕ ಭಾರ-ತದ ದೇವಸ್ಥಾನಗಳನ್ನೇ ಧ್ವಂಸಮಾಡು-ತ್ತಿದ್ದೀರಿ" ಎಂದು ಗುಡುಗಿದರು. ಈ ಸರಕಾರ ಅಮೇರಿಕಾದ ಎದುರು ಮೊಣ

ಕಾಲೂರಿದೆ. ಅದೇ ಅಮೇರಿಕಾ, ರಶಾ ದೇಶ ಕ್ರಯೋಜೆನಿಕ್ ವ್ಯವಹಾರವನು ರದ್ದು ಮಾಡುವಂತೆ ಒತ್ತಡ ಹಾಕಿದೆ ಇನ್ನೂ ಹಲವು ರೀತಿಯಲ್ಲಿ ಕೈ ತಿರುಚುತ್ತಿದೆ. ಆದರೆ ಈ ಸರಕಾರಕ್ಕೆ ಅಮೇರಿಕಾದ ವಿರುದ್ಧ ಚಕಾರವೆತ್ತುವ ಧೈರ್ಯವೂ ಇಲ್ಲ ಎಂದು ಹೀಯಾಳಿಸಿದರು.

"ಮಲಗಿರುವ ಬುದ್ಧ"

ಪ್ರಧಾನಮಂತ್ರಿಗಳ ಸಂಪೂರ್ಣ ನಿಷ್ಕ್ರಿಯತೆಯನ್ನು ಚಟರ್ಜಿಯವರು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುತ್ತಾ ಮಾಡಿದ ವರ್ಣನೆಯಿದು. ದೇಶವನು ತೀವ್ರ ಬಿಕ್ಕಟ್ಟು ಆವರಿಸಿ ನುಂಗ ಹೊರಟಿರುವಾಗ ಈ ಮನುಷ್ಯನಿಗೆ ಏನೊಂದೂ ಪರಿವೆಯೇ ಇಲ್ಲ. "ಈ ಸರಕಾರಕ್ಕೆ ಒಂದು ದೃಢ ಮನಸ್ಸಿಲ್ಲ, ಒಂದು ದೃಢ ಉದ್ದೇಶ ಇಲ್ಲ. ಪ್ರಧಾನ ಮಂತ್ರಿಗೆ ತನ್ನ ಪೀಠ ಉಳಿಸಿಕೊಳ್ಳುವದರಲ್ಲೇ ಹೆಚ್ಚು ಆಸಕ್ತಿ" ಚುನಾವಣಾ ಕಮಿಶನ್ ಕೂಡಾ ಈ ಪ್ರಧಾನ ಮಂತ್ರಿಗಳ ಮಾತು ಕೇಳುವುದಿಲ್ಲ, ಅವರ ಮಂತ್ರಿಗಳೂ ಕೇಳುವುದಿಲ್ಲ. ಸರಕಾರ ಹೀಗೆ ನಡೆಯಬಲ್ಲದೆ? - ಇದು ಸೋಮನಾಥ್ ಚಟರ್ಜಿಯವರು ಲೋಕಸಭೆಯ ಮುಂದಿಟ್ಟ ಪ್ರಶ್ನೆ.